# ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

ದಿನಾಂಕ:27-02-2018 ರಂದು ಬೆಳಗ್ಗೆ 11.00 ಗಂಟೆಗೆ ಡಾ: ಬಿ.ಆರ್.ಅಂಬೇಡ್ಕರ್ ಭವನದ ಸಭಾಂಗಣದಲ್ಲಿ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಸಂಘದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಸಂಘದ 70ನೇ ಆಡಳಿತ ಮಂಡಳಿ ಸಭೆಯ ನಡವಳಿ

**ದಿನಾಂಕ:27-02-2018ರಂದು ಬೆಳಗ್ಗೆ 11.00 ಗಂಟೆಗೆ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ಡಾ: ಬಿ.ಆರ್.ಅಂಬೇಡ್ಕರ್ ಭವನದ ಸಭಾಂಗಣದ ಕೊಠಡಿಯಲ್ಲಿ ನಡೆದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 70ನೇ ಆಡಳಿತ ಮಂಡಳಿ ಸಭೆಯ ನಡವಳಿ:**

**ಸಭೆಯಲ್ಲಿ ಹಾಜರಿದ್ದವರು:**

| | | |
|---|---|---|
| 1. | ಡಾ: ಹೆಚ್.ಆಂಜನೇಯ,<br>ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು, ಬೆಂಗಳೂರು | ಅಧ್ಯಕ್ಷರು |
| 2. | ಶ್ರೀ.ಎಂ.ಲಕ್ಷ್ಮಿನಾರಾಯಣ ಭಾ.ಆ.ಸೇ.,<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು | ಉಪಾಧ್ಯಕ್ಷರು |
| 3. | ಶ್ರೀ.ಮೊಹಮದ್ ಮೊಸಿನ್ ಭಾ.ಆ.ಸೇ.,<br>ಸರ್ಕಾರದ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |
| 3. | ಶ್ರೀಮತಿ. ಏಕ್‌ರೂಪ್ ಕೌರ್ ಭಾ.ಆ.ಸೇ.,<br>ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ವೆಚ್ಚ), ವಿಧಾನಸೌಧ, ಬೆಂಗಳೂರು | ಸದಸ್ಯರು |
| 4. | ಡಾ: ಎನ್.ವಿ.ಪ್ರಸಾದ್ ಭಾ.ಆ.ಸೇ.,<br>ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |
| 5. | ಶ್ರೀ.ವಿಕಾಶ್ ಕುಮಾರ್ ವಿಕಾಶ್ ಭಾ.ಪೋ.ಸೇ.,<br>ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |
| 6. | ಶ್ರೀ.ವಿ.ದೊಡ್ಡಪ್ಪ ಕೆ.ಎ.ಎಸ್.,<br>ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ,ಬೆಂಗಳೂರು | ಸದಸ್ಯ ಕಾರ್ಯದರ್ಶಿ |

| | | |
|---|---|---|
| 1 | ಶ್ರೀ.ಇ.ವೆಂಕಟಯ್ಯ ಭಾ.ಆ.ಸೇ., (ನಿವೃತ್ತ)<br>ನೋಡಲ್ ಏಜೆನ್ಸಿ ಸಲಹೆಗಾರರು, ಪ.ಜಾತಿ/ಪ.ವರ್ಗ ಉಪಯೋಜನೆ | ವಿಶೇಷ ಆಹ್ವಾನಿತರು |
| 2. | ಡಾ: ನಿರಂಜನ್ ಆರಾಧ್ಯ ವಿ.ಪಿ.<br>ಫೆಲೊ & ಪ್ರೋಗ್ರಾಮ್ ಹೆಡ್ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್‌ಸಿಟಿ ಹಾಗೂ ಅಧ್ಯಕ್ಷರು, ಅಕಾಡೆಮಿಕ್ ಕೌನ್ಸಿಲ್,ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, | ವಿಶೇಷ ಆಹ್ವಾನಿತರು |
| 3. | ಶ್ರೀಮತಿ. ಹೊನ್ನಾಂಭ<br>ಜಂಟಿ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಶಿಕ್ಷಣ ಇಲಾಖೆ | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆರವರ ಪರವಾಗಿ |
| 4 | ಶ್ರೀ.ದೊರೆಸ್ವಾಮಿ<br>ಜಂಟಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, | ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಪರವಾಗಿ |
| 5 | ಶ್ರೀ.ಬಲರಾಮ, ಹಿರಿಯ ಸಹಾಯಕ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆರವರ ಪರವಾಗಿ |
| 6 | ಶ್ರೀ.ಕೆಂಚೇಗೌಡ ಎನ್.<br>ಜಂಟಿ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು | ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಸಂಸ್ಥೆರವರ ಪರವಾಗಿ |

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರನ್ನು ಸಂಘದ ಕಾರ್ಯನಿರ್ವಾಹಕ ನಿರ್ದೇಶಕರು ಸಭೆಗೆ ಆಹ್ವಾನಿಸುತ್ತಾ, ಮಾನ್ಯ ಸಚಿವರು ಕಳೆದ ಐದು ವರ್ಷಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಶ್ರಮಿಸಿರುವುದನ್ನು ಸ್ಮರಿಸಿ, 2018-19ನೇ ಸಾಲಿಗೆ 298 ಹೊಸ ವಸತಿ ಶಾಲೆಗಳನ್ನು ಮಂಜೂರು ಮಾಡಿರುವುದನ್ನು ಸಭೆಗೆ ತಿಳಿಸುತ್ತಾ, ಇದು ಮಾನ್ಯ ಸಚಿವರಿಗೆ ಈ ವರ್ಗಗಳ ಬಗ್ಗೆ ಕಾಳಜಿಯಿರುವುದನ್ನು ತೋರಿಸುತ್ತದೆಯೆಂದು ಶ್ಲಾಘಿಸಿ, ಇಂದಿನ ಸಭೆಯ ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು.

ಕಾರ್ಯನಿರ್ವಾಹಕ ನಿರ್ದೇಶಕರು, ಸಭೆಗೆ ಹಾಜರಾದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಹಾಗೂ ಸಂಘದ ಉಪಾಧ್ಯಕ್ಷರು, ನೋಡಲ್ ಏಜೆನ್ಸಿ ಸಲಹೆಗಾರರು, ಪ.ಜಾತಿ/ಪ.ವರ್ಗ ಉಪಯೋಜನೆ, ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಸರ್ಕಾರದ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಹಾಗೂ ಸಚಿವಾಲಯದ ಹಿರಿಯ ಅಧಿಕಾರಿಗಳನ್ನು ಇತರೆ ಇಲಾಖೆಗಳ ಅಧಿಕಾರಿಗಳ ಪ್ರತಿನಿಧಿಗಳನ್ನು ಸಭೆಗೆ ಆಹ್ವಾನಿಸಿ ಮಾನ್ಯ ಸಚಿವರನ್ನು ಸಭೆಯನ್ನು ನಡೆಸಿಕೊಡುವಂತೆ ಕೋರಿದರು.

ವಿಷಯ ಸಂಖ್ಯೆ: 1
**ದಿನಾಂಕ:31-08-2017 ರಂದು ನಡೆದ 69ನೇ ಆಡಳಿತ ಮಂಡಳಿ ಸಭೆಯ ನಡವಳಿಗಳನ್ನು ಓದಿ ಅನುಮೋದಿಸುವುದು.**

**ತೀರ್ಮಾನ:**
**ದಿನಾಂಕ:31-08-2017 ರಂದು ನಡೆದ 69ನೇ ಆಡಳಿತ ಮಂಡಳಿ ಸಭೆಯ ನಡವಳಿಗಳನ್ನು ಓದಿ ಅನುಮೋದಿಸಲಾಯಿತು.**

ವಿಷಯ ಸಂಖ್ಯೆ: 2
**ದಿನಾಂಕ:31-08-2017 ರಂದು ನಡೆದ 69ನೇ ಆಡಳಿತ ಮಂಡಳಿ ಸಭೆಯ ತೀರ್ಮಾನಗಳ ಮೇಲೆ ತೆಗೆದುಕೊಂಡ ಕ್ರಮಗಳ ಬಗ್ಗೆ:**
ದಿನಾಂಕ:31-08-2017 ರಂದು ನಡೆದ 69ನೇ ಆಡಳಿತ ಮಂಡಳಿ ಸಭೆಯ ತೀರ್ಮಾನಗಳ ಮೇಲೆ ತೆಗೆದುಕೊಂಡ ಕ್ರಮದ ಈ ಕೆಳಕಂಡಂತಿದ್ದು, ಆಡಳಿತ ಮಂಡಳಿ ಅನುಮೋದನೆ ಕೋರಿದೆ.

1) **ದಿನಾಂಕ:31-08-2017 ರಂದು ನಡೆದ 69ನೇ ಆಡಳಿತ ಮಂಡಳಿ ಸಭೆಯ ತೀರ್ಮಾನಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಚರ್ಚಿಸಿತು. ಕಾರ್ಯನಿರ್ವಾಹಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಹಾಗೂ ಇತರೆ ಇಲಾಖೆಗಳ ಬೇರೆ ಕಾರ್ಯಕ್ರಮಗಳಿಗೆ ನಿಗದಿಯಾದ ಅನುದಾನವನ್ನು ಮಾರ್ಚ್ ಅಂತ್ಯದಲ್ಲಿ ಸಂಘಕ್ಕೆ ಬಿಡುಗಡೆ ಮಾಡಲಾಗುತ್ತಿದೆ. (Parking Fund) ಈ ಅನುದಾನವನ್ನು**

ಕಾರ್ಯನಿರ್ವಾಹಕ ನಿರ್ದೇಶಕರು

**ಅಧ್ಯಕ್ಷರು**

ತದನಂತರ ಆ ಇಲಾಖೆಗಳು ಉದ್ದೇಶಿತ ಕಾರ್ಯಕ್ರಮಕ್ಕೆ ಬಿಡುಗಡೆಗೊಳಸುತ್ತಿದೆ. ಇಂತಹ ಅನುದಾನವನ್ನು ಸಂಘಕ್ಕೆ ಜಮಾ ಮಾಡಿದ ಬಗ್ಗೆ ಮಹಾಲೇಖಪಾಲರು ಆಕ್ಷೇಪಣೆ ವ್ಯಕ್ತಪಡಿಸಿರುವುದನ್ನು ಸಭೆಯ ಗಮನಕ್ಕೆ ತಂದರು. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಸಮಾಜ ಕಲ್ಯಾಣ ಇಲಾಖೆ ಹಾಗೂ ಸಂಘದ ಉಪಾಧ್ಯಕ್ಷರು ದಿನಾಂಕ:01-04-2018ರಿಂದ ಅನ್ವಯವಾಗುವಂತೆ, ಈ ಕ್ರಮವನ್ನು ತಡೆಹಿಡಿಯಲು ಸೂಚಿಸಿದ್ದು, ಇದಕ್ಕೆ ಆಡಳಿತ ಮಂಡಳಿಯ ಅನುಮೋದಿಸಿತು.

2) ಮಾನ್ಯ ಮುಖ್ಯಮಂತ್ರಿಗಳ ಆದೇಶದಂತೆ, 2011ನೇ ಸಾಲಿಗಿಂತ ಮುಂಚೆ ಹೊರಸಂಪನ್ಮೂಲವತಿಯಿಂದ ವಸತಿ ಶಾಲೆಗಳಿಗೆ ನೇಮಕವಾಗಿ ಮುಂದುವರಿದ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾದ ಹೊರಸಂಪನ್ಮೂಲ ಬೋಧಕ ಸಿಬ್ಬಂದಿಗಳಿಗೆ ಸೇವಾ ಕೃಪಾಂಕ ವಿಸ್ತರಿಸುವ ಬಗ್ಗೆ ಸರ್ಕಾರವು ಹಿಂದುಳಿದ ವರ್ಗಗಳ ಆಯುಕ್ತರ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಯು ದಿನಾಂಕ:10-01-2018 ರಂದು ಸಭೆ ನಡೆಸಿದೆ. ಈ ಸಭೆಯ ನಡವಳಿಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಾಗಿ ಕಾರ್ಯನಿರ್ವಹಕ ನಿರ್ದೇಶಕರು ತಿಳಿಸಿದರು. ತತ್ಸಂಬಂಧವಾಗಿ ಈಗಾಗಲೇ ಕ್ರಮವಹಿಸಿರುವುದಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದಶಿಗಳು, ಸಮಾಜ ಕಲ್ಯಾಣ ಇಲಾಖೆ ಹಾಗೂ ಸಂಘದ ಉಪಾಧ್ಯಕ್ಷರು ಸಭೆಗೆ ತಿಳಿಸಿದರು.

3) 2012-13ನೇ ಸಾಲಿನಲ್ಲಿ ಮಂಜೂರಾದ 74 ವಸತಿ ಶಾಲೆಗಳ ಪೈಕಿ 29 ವಸತಿ ಶಾಲೆಗಳು ಪ್ರಾರಂಭವಾಗಿರುವುದಿಲ್ಲ. ತತ್ಸಂಬಂಧವಾಗಿ ಹುದ್ದೆ ಮಂಜೂರಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದಾಗಿ ಕಾರ್ಯನಿರ್ವಾಹಕ ನಿರ್ದೇಶಕರು ಸಭೆಗೆ ತಿಳಿಸಿದರು.

<u>ವಿಷಯ ಸಂಖ್ಯೆ: 3</u>

<u>2017-18ನೇ ಸಾಲಿನಲ್ಲಿ ಸಂಘಕ್ಕೆ ನಿಗಧಿಪಡಿಸಿದ ಅನುದಾನ, ಬಿಡುಗಡೆ, ಖರ್ಚು ಹಾಗೂ ಶಿಲ್ಕಿನ ವಿವರಗಳು</u>

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳ ಆಯವ್ಯಯದಲ್ಲಿ ಈ ಕೆಳಕಂಡ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅನುದಾನ ನಿಗದಿಯಾಗಿ ಬಿಡುಗಡೆಯಾಗುತ್ತಿದೆ.

1. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯ ನಿರ್ವಹಣೆ
2. ವಸತಿ ಶಾಲೆ/ಕಾಲೇಜುಗಳ ನಿರ್ವಹಣೆ
3. ವಸತಿ ಶಾಲಾ ಸಂಕೀರ್ಣಗಳ ನಿರ್ಮಾಣ
4. ವಸತಿ ಶಾಲೆಗಳ ದುರಸ್ತಿ

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

2017-18ನೇ ಸಾಲಿನಲ್ಲಿ ಮೇಲೆ ಹೇಳಲಾದ ಕಾರ್ಯಕ್ರಮಗಳಿಗೆ ಈವರೆವಿಗೂ ಬಿಡುಗಡೆಯಾದ ಹಾಗೂ ಭರಿಸಿದ ವೆಚ್ಚದ ವಿವರಗಳನ್ನು ಅನುಬಂಧದಲ್ಲಿ ತೋರಿಸಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು 2017-18ನೇ ಸಾಲಿನ ಅನುದಾನದ ವಿವರಗಳನ್ನು ಅವಗಾಹಿಸಿತು. ಸಂಘದಲ್ಲಿ ದಿನಾಂಕ:31-01-2018ರ ಅಂತ್ಯಕ್ಕೆ ಒಟ್ಟಾರೆ ರೂ. 1007.61 ಕೋಟಿಗಳ ಅನುದಾನವು ಬಾಕಿ ಉಳಿದಿದ್ದು, ಮಾರ್ಚ್ 2018ರ ಅಂತ್ಯದೊಳಗೆ ವೆಚ್ಚ ಭರಿಸಲು ಕ್ರಮವಹಿಸುವಂತೆ ಸೂಚಿಸಲಾಯಿತು.**

ವಿಷಯ ಸಂಖ್ಯೆ: 04

2016-17ನೇ ಸಾಲಿನ ಸಂಘದ ಚಾರ್ಟರ್ಡ್ ಅಕೌಂಟೆಂಟ್ ಲೆಕ್ಕಪರಿಶೋಧನಾ ವರದಿಯನ್ನು ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಗೆ ಮಂಡಿಸುವ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 2016-17ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಮೆ॥ ಪೂಜಾರಿ ಅಸೋಸಿಯೇಟ್ಸ್ ಮುಖಾಂತರ ತಪಾಸಣೆ ನಡೆಸಿದ್ದು, ತಪಾಸಣಾ ವರದಿಯನ್ನು ಅನುಬಂಧದಲ್ಲಿರಿಸಿ ಆಡಳಿತ ಮಂಡಳಿಯ ಅವಗಾಹನೆಗೆ ಹಾಗೂ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಮಹಾಸಭೆಗೆ ಮಂಡಿಸಲು ವಿಷಯವನ್ನು ಆಡಳಿತ ಮಂಡಳಿ ಸಭೆಗೆ ಮಂಡಿಸಿ, ಅನುಮೋದನೆಗೆ ಶಿಫಾರಸ್ಸು ಮಾಡಲು ಕೋರಿದೆ.

ತೀರ್ಮಾನ:

**ಮೆ॥ ಪೂಜಾರಿ ಅಸೋಸಿಯೇಟ್ಸ್‌ರವರು ಸಲ್ಲಿಸಿದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 2016-17ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಅವಲೋಕಿಸಿ ಕರ್ನಾ, ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಮಹಾಸಭೆಗೆ ಮಂಡಿಸಿ, ಅನುಮೋದನೆ ಪಡೆಯಲು ಆಡಳಿತ ಮಂಡಳಿಯು ತೀರ್ಮಾನಿಸಿತು.**

ವಿಷಯ ಸಂಖ್ಯೆ: 05

ಸಂಘದ ಅಧೀನದ ವಸತಿ ಶಾಲೆ/ಕಾಲೇಜುಗಳ ದೈನಂದಿನ ನಿರ್ವಹಣೆಗಾಗಿ Imprest ಹಣ ಮಂಜೂರು ಮಾಡುವ ಬಗ್ಗೆ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 818 ವಸತಿ ಶಾಲೆ/ಕಾಲೇಜುಗಳ ಕಾರ್ಯನಿರ್ವಹಿಸುತ್ತಿವೆ. ಸದರಿ ವಸತಿ ಶಾಲೆಗಳಲ್ಲಿ ಕನಿಷ್ಠ 50 ವಿದ್ಯಾರ್ಥಿಗಳಿಂದ ಗರಿಷ್ಠ 250 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಅದರಂತೆ, ಸದರಿ ವಸತಿ ಶಾಲಾ/ಕಾಲೇಜುಗಳ ಶೇ.100 ರಷ್ಟು ಗ್ರಾಮಾಂತರ ಪ್ರದೇಶದ ಹಳ್ಳಿಗಳಿಗೆ ಹೊಂದಿಕೊಂಡಿರುತ್ತವೆ. ಸದರಿ ವಸತಿ ಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ವಾರ್ಡನ್ ಮತ್ತು ಪ್ರಾಂಶುಪಾಲರುಗಳು ವಸತಿ ಶಾಲೆಯ ದೈನಂದಿನ ನಿರ್ವಹಣೆಗಾಗಿ ವೆಚ್ಚ ಭರಿಸುವ ಕ್ಲೀನಿಂಗ್ ಚಾರ್ಜು, ಸಾಗಾಣಿಕೆ ವೆಚ್ಚ, ಮಿಲ್ಲಿಂಗ್ ಚಾರ್ಜು, ಔಷಧಿ,

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ಗ್ಯಾಸ್ ಬಿಲ್, ತುರ್ತು ವಿದ್ಯುತ್ ದುರಸ್ಥಿ, ನೀರಿನ ವ್ಯವಸ್ಥೆ, ಇತ್ಯಾದಿಗಳಿಗಾಗಿ ಪಾವತಿಸುವ ಮೊತ್ತವನ್ನು Self Cheque Drawn ಮೂಲಕ ಬ್ಯಾಂಕ್‌ನಿಂದ ಹಣ ಡ್ರಾ ಮಾಡಿ ಪಾವತಿಸಲಾಗುತ್ತಿದೆ. ಸದರಿ ಪಾವತಿಯನ್ನು Self Cheque Drawn ಮೂಲಕ ಬ್ಯಾಂಕ್‌ನಿಂದ ನಗದು ಡ್ರಾ ಮಾಡಿ ಪಾವತಿಸುವುದು ನಿಯಮಗಳ ಉಲ್ಲಂಘನೆಯಾಗಿದ್ದು, ಆಂತರಿಕ ಲೆಕ್ಕಪರಿಶೋಧಕರು ತಮ್ಮ 2014-15ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದು, ಇದರಿಂದ ದೈನಂದಿನ ನಿರ್ವಹಣೆ ವೆಚ್ಚಗಳನ್ನು ಭರಿಸುವುದು ಕಷ್ಟವಾಗುತ್ತಿರುವುದಾಗಿ ವಸತಿ ಶಾಲೆಯ ವಾರ್ಡನ್ ಮತ್ತು ಪ್ರಾಂಶುಪಾಲರುಗಳು ತಮ್ಮ ತೊಂದರೆಗಳನ್ನು ವರದಿ ಮಾಡಿರುತ್ತಾರೆ. ಸದರಿ ವಿಷಯವನ್ನು ವಿವರವಾಗಿ ಪರಿಶೀಲಿಸಲಾಗಿ Self Cheque ಮೇಲೆ ಬ್ಯಾಂಕಿನಿಂದ ಹಣ ಡ್ರಾ ಮಾಡಿ ಪಾವತಿ ಮಾಡುವ ಬದಲಾಗಿ, ದೈನಂದಿನ ವಸತಿ ಶಾಲೆಗಳ ನಿರ್ವಹಣೆಯ ರೂ.2000/- ರಿಂದ 3000/- ರವರೆಗಿನ ವೆಚ್ಚಗಳನ್ನು ಪಾವತಿಸಲು ಅನುಕೂಲವಾಗುವಂತೆ ಜಿಲ್ಲಾ ಅಧಿಕಾರಿಗಳ ಅನುಮೋದನೆ ಮೇರೆಗೆ ಮಾಸಿಕವಾಗಿ ರೂ.10,000/-ಗಳ Imprest ಮಂಜೂರು ಮಾಡುವುದು ಸೂಕ್ತವೆನಿಸುತ್ತದೆ. ಸದರಿ ಮೊತ್ತದಿಂದ ದೈನಂದಿನ ನಿರ್ವಹಣೆ ವೆಚ್ಚಗಳನ್ನು ಪಾವತಿಸಿ, ಮೂಲ ಬಿಲ್ಲುಗಳೊಂದಿಗೆ ಮಾಸಾಂತ್ಯಕ್ಕೆ ಲೆಕ್ಕ ಹೊಂದಾಣಿಕೆಗಾಗಿ ಲೆಕ್ಕ ಸಲ್ಲಿಸಿ, ಮಂಜೂರಾಗಿರುವ Imprest ಮೊತ್ತವನ್ನು ಸರಿದೂಗಿಸಿಕೊಳ್ಳಬಹುದಾಗಿರುತ್ತದೆ. ವಿಷಯವನ್ನು ಆಡಳಿತ ಮಂಡಳಿಯ ಸರ್ವಸದಸ್ಯರು ಹಾಗೂ ಮಾನ್ಯ ಅಧ್ಯಕ್ಷರು ಅವಗಾಹನೆಗೆ ಹಾಗೂ ಮುಂದಿನ ಆದೇಶಕ್ಕೆ ಸಲ್ಲಿಸಿದೆ.

ತೀರ್ಮಾನ:

**ವಸತಿ ಶಾಲೆಗಳ ದೈನಂದಿನ ಖರ್ಚುಗಳಿಗೆ ಆಯಾ ವಸತಿ ಶಾಲೆಗಳ ಜಂಟಿ ಖಾತೆಯಲ್ಲಿರುವ ಅನುದಾನದಲ್ಲಿ ಪ್ರಾಂಶುಪಾಲರುಗಳು ಬ್ಯಾಂಕ್‌ಗಳಿಂದ ಹಣವನ್ನು Self Cheque Drawn ಮುಖಾಂತರ ಸೆಳೆದು ವೆಚ್ಚ ಭರಿಸುತ್ತಿರುವ ಬಗ್ಗೆ ಆಡಳಿತ ಮಂಡಳಿಯು, ಚರ್ಚಿಸಿ, ವಸತಿ ಶಾಲೆಗಳ ದೈನಂದಿನ ನಿರ್ವಹಣಾ ವೆಚ್ಚಕ್ಕಾಗಿ ರೂ.5000/-ಗಳ Imprest ಹಣವನ್ನು ಮಂಜೂರು ಮಾಡಲು ಸಮ್ಮತಿಸಿತು ಹಾಗೂ ಈ ಬಗ್ಗೆ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಿ, ಆದೇಶ ಪಡೆಯಲು ತೀರ್ಮಾನಿಸಿತು.**

ವಿಷಯ ಸಂಖ್ಯೆ: 06

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯಲ್ಲಿ ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಅನ್ವಯಿಸುವ ಮನೆ ಬಾಡಿಗೆ ಭತ್ಯೆ ಹಾಗೂ ನಗರ ಪರಿಹಾರ ಭತ್ಯೆ ಮಂಜೂರು ಮಾಡುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ: ಸಕಇ 210 ಮೊದೇಶಾ 2017, ಬೆಂಗಳೂರು, ದಿನಾಂಕ:20-07-2017ರ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯಲ್ಲಿ ವಿವಿಧ

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ವಸತಿ ಶಾಲೆಗಳಿಂದ ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಬೆಂಗಳೂರು ಮಹಾನಗರ ವ್ಯಾಪ್ತಿಗೆ ಅನ್ವಯಿಸುವ ಮನೆ ಬಾಡಿಗೆ ಭತ್ಯೆ ಹಾಗೂ ನಗರ ಪರಿಹಾರ ಭತ್ಯೆಯನ್ನು ಸದರಿ ಸಿಬ್ಬಂದಿಗಳು ನಿಯೋಜನೆಗೊಂಡ ದಿನಾಂಕದಿಂದ ಪಾವತಿಸಲು ಸರ್ಕಾರ ಮಂಜೂರಾತಿ ನೀಡಿ ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ವಿವಿಧ ವಸತಿ ಶಾಲೆಗಳಿಂದ ನಿಯೋಜನೆ ಮೇಲೆ ಸಂಘದ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 22 ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ನಿಯೋಜನೆಗೊಂಡ ದಿನಾಂಕದಿಂದ ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಯನ್ನು ಲೆಕ್ಕಚಾರ ಮಾಡಿ ರೂ.33,68,591/-ಗಳ ಅನುದಾನವನ್ನು ವಸತಿ ಶಾಲೆಗಳ ನಿರ್ವಹಣಾ ಲೆಕ್ಕಶೀರ್ಷಿಕೆಯಡಿ ಆಯಾ ವಸತಿ ಶಾಲೆಗಳಿಗೆ ಸಂಘವು ಬಿಡುಗಡೆ ಮಾಡಿದೆ.

ಮೇಲ್ಕಂಡ 22 ಭೋದಕ/ಬೋಧಕೇತರ ಸಿಬ್ಬಂದಿಗಳಿಗೆ ಸರ್ಕಾರದ ಆದೇಶದನ್ವಯ ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಯನ್ನು ಪ್ರಸ್ತುತ ಪಾವತಿ ಮಾಡಲಾಗುತ್ತಿದೆ.

ಮೇಲ್ಕಂಡಂತೆ, ಸರ್ಕಾರದ ಆದೇಶದನ್ವಯ ಸಂಘವು ಕೈಗೊಂಡ ಕ್ರಮವನ್ನು ಆಡಳಿತ ಮಂಡಳಿ ಸಭೆಯ ಅವಗಾಹನೆಗೆ ಮಂಡಿಸಿದೆ.

<u>ತೀರ್ಮಾನ:</u>

1. ಸರ್ಕಾರದ ಆದೇಶ ಸಂಖ್ಯೆ: ಸಕಇ 210 ಮೊದೇಶಾ 2017, ಬೆಂಗಳೂರು, ದಿನಾಂಕ:20-07-2017ರಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯಲ್ಲಿ ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಬೆಂಗಳೂರು ಮಹಾನಗರ ವ್ಯಾಪ್ತಿಗೆ ಅನ್ವಯಿಸುವ ಸಿಬ್ಬಂದಿಗಳ ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಯನ್ನು ಪಾವತಿಸಲು ಆದೇಶಿಸಲಾಗಿದ್ದು, ಅದರಂತೆ ಕ್ರಮವಹಿಸಿರುವುದಾಗಿ ಕಾರ್ಯನಿರ್ವಾಹಕ ನಿರ್ದೇಶಕರು ಸಭೆಗೆ ತಿಳಿಸಿದರು.
2. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ) ರವರು ವಿಷಯದ ಬಗ್ಗೆ ಮಾತಾನಾಡುತ್ತಾ, ಬೆಂಗಳೂರು ಮಹಾನಗರ ವ್ಯಾಪ್ತಿಯನ್ನು ಹೊರತುಪಡಿಸಿ, ವಿವಿಧ ಸ್ಥಳಗಳಿಂದ ಕೇಂದ್ರ ಕಛೇರಿಯಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಬೆಂಗಳೂರು ಮಹಾನಗರ ವ್ಯಾಪ್ತಿಗೆ ಅನ್ವಯವಾಗುವ ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಯನ್ನು ನೀಡುವುದು ಸೂಕ್ತವಾಗಿರುವುದಿಲ್ಲವೆಂದು ತಿಳಿಸಿದರು. ಈ ಹಿನ್ನೆಲೆಯಲ್ಲಿ ಆಡಳಿತ ಮಂಡಳಿಯು ದಿನಾಂಕ:01-03-2018ರಿಂದ ಅನ್ವಯವಾಗುವಂತೆ, ಮೇಲ್ಕಂಡ ಸರ್ಕಾರದ ಆದೇಶವನ್ನು ತಡೆಯಿಡಿಯಲು ಸೂಚಿಸಿತು ಹಾಗೂ ವಿಷಯವನ್ನು ಪುನರ್ ಪರಿಶೀಲಿಸಿ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು.

ಕಾರ್ಯನಿರ್ವಾಹಕ ನಿರ್ದೇಶಕರು | ಅಧ್ಯಕ್ಷರು

**ವಿಷಯ ಸಂಖ್ಯೆ: 07**
**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ನಿರ್ದೇಶಕರವರಿಗೆ ಆತಿಥ್ಯ ಭತ್ಯೆ (Sumptuary Allowance) ಪರಿಷ್ಕರಿಸುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ರಾಜ್ಯವ್ಯಾಪಿ ತನ್ನ ಶಿಕ್ಷಣ ಸಂಸ್ಥೆಗಳನ್ನು ಹೊಂದಿದ್ದು, 818 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಅದರಂತೆ ಸದರಿ ವಸತಿ ಶಾಲೆಗಳ ಸುಸೂತ್ರ ನಿರ್ವಹಣೆಗಾಗಿ ಎಲ್ಲಾ 30 ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ವರಿಷ್ಠಾಧಿಕಾರಿಗಳು ಅದರಂತೆ ಜಿಲ್ಲಾಮಟ್ಟದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಅಧಿಕಾರಿಗಳ ಸಂಪರ್ಕವನ್ನು ಹೊಂದಿರುವುದು ಅಗತ್ಯವಿರುತ್ತದೆ.

ಇದರ ಜೊತೆಗೆ ಜಿಲ್ಲೆ, ತಾಲ್ಲೂಕು ಹಂತದ ಜನಪ್ರತಿನಿಧಿಗಳು ಮಾನ್ಯ ಸಚಿವರು ಮತ್ತು ಶಾಸಕರುಗಳು ತಮ್ಮ ಕ್ಷೇತ್ರದ ವಸತಿ ಶಾಲೆಗಳ ಮಾಹಿತಿಗೆ ಸಂಬಂಧಿಸಿದಂತೆ ಹಲವಾರು ಶಾಸಕರು ಮತ್ತು ಸಚಿವರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಗೆ ಭೇಟಿ ಮಾಡುತ್ತಿರುತ್ತಾರೆ. ಈ ಸಂದರ್ಭದಲ್ಲಿ ಶಿಷ್ಟಾಚಾರದಂತೆ ಅತಿಥಿ ಸತ್ಕಾರ ಮಾಡಬೇಕಿದ್ದು, ಕಾಫಿ/ಟೀ/ಲಘು ಉಪಹಾರ/ಊಟ ಇತ್ಯಾದಿಗಳ ವ್ಯವಸ್ಥೆಯನ್ನು ಮಾಡಬೇಕಾಗಿರುತ್ತದೆ.

ಆದ್ದರಿಂದ ಸರ್ಕಾರದ ಆದೇಶದಂತೆ ಈಗಿರುವ ಅತಿಥಿ ಭತ್ಯೆ ರೂ.12,500/-ಗಳನ್ನು ಪರಿಷ್ಕರಿಸಿ, ಬೆಂಗಳೂರು ಮಹಾನಗರ ಆಯುಕ್ತರವರಿಗೆ ನೀಡಿರುವಂತೆ ಹಣಕಾಸಿನ ಮಿತಿ ಇಲ್ಲದಂತೆ ಪೂರ್ಣ ಅಧಿಕಾರ ನೀಡುವಂತೆ ಆಡಳಿತ ಮಂಡಳಿ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಸಲ್ಲಿಸಿದೆ.

ತೀರ್ಮಾನ:

**ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಕೇಂದ್ರ ಕಛೇರಿಯು ರಾಜ್ಯವಾಪ್ತಿ ಹೊಂದಿದ್ದು, ಮಾನ್ಯ ಶಾಸಕರುಗಳು, ಮಾಜಿ ಮಂತ್ರಿಗಳು/ಶಾಸಕರುಗಳು ಹಾಗೂ ಇತರೆ ಗಣ್ಯ ವ್ಯಕ್ತಿಗಳು ಕಛೇರಿ ಕೆಲಸದ ನಿಮಿತ್ತ ಕಛೇರಿಗೆ ಬೇಟಿ ನೀಡಿದ ಸಂದರ್ಭದಲ್ಲಿ ಅತಿಥಿ ಸತ್ಕಾರ ಮಾಡಲು ಕಾರ್ಯನಿರ್ವಾಹಕ ನಿದೇಶಕರಿಗೆ ವಾರ್ಷಿಕವಾಗಿ ರೂ.12,500/-ಗಳ ಆರ್ಥಿಕ ಅಧಿಕಾರವಿದ್ದು, ಇದನ್ನು ಪ್ರತಿ ಮಾಹೆ ರೂ.5000/-ಗಳಿಗೆ ಹೆಚ್ಚಿಸುವಂತೆ ಕೋರಿದರು. ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿ, ಪ್ರಸ್ತುತ ಚಾಲ್ತಿ ಮಿತಿ ರೂ.12,500/- ಗಳನ್ನು ವಾರ್ಷಿಕವಾಗಿ ರೂ.25,000/-ಗಳಿಗೆ ಹೆಚ್ಚಿಸಲು ತೀರ್ಮಾನಿಸಿತು.**

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

<u>ವಿಷಯ ಸಂಖ್ಯೆ: 07</u>
<u>ವಿಷಯ ಸಂಖ್ಯೆ: 08</u>

**<u>ನೂತನ ಪಿಂಚಣಿ ಯೋಜನೆಯ ವಂತಿಗೆಯನ್ನು ಸಿಬ್ಬಂದಿಗಳು ಸೇವೆಗೆ ಸೇರಿದ ದಿನಾಂಕದಿಂದ ಬಾಕಿ ಮೊತ್ತವನ್ನು NPS Trust Account ಗೆ ಜಮಾ ಬಗ್ಗೆ</u>**

ಸರ್ಕಾರದ ಆದೇಶ ಸಂಖ್ಯೆ: ಸಕಇ/ಮೊದೇಶಾ/2016 ಬೆಂಗಳೂರು ದಿನಾಂಕ:26.12.2016 ರಂತೆ ದಿನಾಂಕ:01/04/2006ರ ನಂತರ ನೇಮಕಾತಿ ಹೊಂದಿದ ಸಿಬ್ಬಂದಿಗಳಿಗೆ ಸೇವೆಗೆ ಸೇರಿದ ದಿನಾಂಕದಿಂದ ಅನ್ವಯವಾಗುವಂತೆ NPS ಯೋಜನೆಯನ್ನು ಅಳವಡಿಸಿಕೊಳ್ಳುವಂತೆ ಆದೇಶವಿರುತ್ತದೆ.

ಸಂಘದಿಂದ ನೇಮಕಾತಿ ಹೊಂದಿದ ಖಾಯಂ ಸಿಬ್ಬಂದಿಗಳಿಗೆ ಫೆಬ್ರವರಿ-2012 ರಿಂದ ಫೆಬ್ರವರಿ -2017 ರವರೆಗಿನ NPS ಬ್ಯಾಕ್‌ಲಾಗ್ ವಂತಿಗೆಯನ್ನು (Employers Contribution) ಪಾವತಿ ಮಾಡುವುದು ಬಾಕಿ ಇರುತ್ತದೆ. ಈ ಸಂಬಂಧವಾಗಿ 2017-18ನೇ ಸಾಲಿನ ಆಯವ್ಯಯದಲ್ಲಿ NPS ಬಾಕಿ ವಂತಿಗೆಯನ್ನು ಪಾವತಿಸಲು ಈ ಕೆಳಕಂಡಂತೆ ವರ್ಗವಾರು ಮತ್ತು ಲೆಕ್ಕಶೀರ್ಷಿಕೆವಾರು ಅನುದಾನಕ್ಕೆ ಅವಕಾಶ ಮಾಡಿಕೊಳ್ಳಲಾಗಿತ್ತು.

| ಕ್ರ.ಸಂ | ಪರಿಶಿಷ್ಟ ಜಾತಿ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | 2225-01-277-0-65 (ಯೋಜನೆ) | 2414.16 |
| 2 | 2225-01-277-0-64(ಯೋಜನೇತರ) | 263.11 |
| 3 | 2225-01-277-0-65(ಯೋಜನೇತರ) | 520.55 |
| | ಪರಿಶಿಷ್ಟ ವರ್ಗ | |
| 4 | 2225-02-277-0-37(ಯೋಜನೆ) | 436.05 |
| | ಹಿಂದುಳಿದ ವರ್ಗ | |
| 5 | 2225-03-277-2-62(ಯೋಜನೆ) | 1442.09 |
| | ಒಟ್ಟು | 5075.96 |

ಆದ್ದರಿಂದ ಸರ್ಕಾರದ ಆದೇಶದಂತೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಸಿಬ್ಬಂದಿಗಳ ಓಊ ವಂತಿಕೆ (ಇಟೂಟಡ಼ಿಜಿಷಿ ಅಡುಣಡಿಭಾಯಾ) ಬಾಬ್ತು ರೂ5322.05 ಲಕ್ಷಗಳನ್ನು ಸೇವೆಗೆ ಸೇರಿದ ದಿನಾಂಕದಿಂದ ಫೆಬ್ರವರಿ-2017ರವರೆಗಿನ ಬಾಕಿ ಮೊತ್ತವನ್ನು NPS Trust Account No: 0004103000047791 IFSC Code: IBKL0000004 ಜಮಾ ಮಾಡುವ ಬಗ್ಗೆ ಆಡಳಿತ ಮಂಡಳಿಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಿದೆ.

<u>ತೀರ್ಮಾನ:</u>

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದವತಿಯಿಂದ ಸಂಘದ 4206 ಖಾಯಂ ಸಿಬ್ಬಂದಿಗಳಿಗೆ ನೂತನ ಪಿಂಚಣಿ ಯೋಜನೆಗೆ ದಿನಾಂಕ:01-10-2011 ರಿಂದ ಸಂಘದ ವಂತಿಗೆಯನ್ನು (Employer's Contributions) ಪಾವತಿಸಲು ಆಡಳಿತ ಮಂಡಳಿಯು ಅನುಮೋದಿಸಿತು. ನೌಕರರುಗಳ ಸಮಾನ ವಂತಿಕೆಗಳನ್ನು (Equal Contributions) ಕಡ್ಡಾಯವಾಗಿ ಕಟಾಯಿಸಿ ಪಾವತಿಸುವುದು ಅಗತ್ಯವೆಂದು ತಿಳಿಸಿ, ಕ್ರಮವಹಿಸುವಂತೆ ಆಡಳಿತ ಮಂಡಳಿಯು ಸೂಚಿಸಿತು.**

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

**ವಿಷಯ ಸಂಖ್ಯೆ: ೦೯**
**ಸಂಘದ ಕೇಂದ್ರ ಕಛೇರಿಯಲ್ಲಿ ಹೊರಸಂಪನ್ಮೂಲವತಿಯಿಂದ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವೇತನ ಹೆಚ್ಚಿಸುವ ಬಗ್ಗೆ.**

ಪ್ರಸ್ತುತ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 818 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಸಂಘದ ಕಾರ್ಯಭಾರ ಹೆಚ್ಚಾಗಿರುತ್ತದೆ. ಸಂಘದಲ್ಲಿ ಪ್ರಸ್ತುತ ವಿವಿಧ ಇಲಾಖೆಗಳಿಂದ ಖಾಯಂ ಅಧಿಕಾರಿ ಸಿಬ್ಬಂದಿಗಳು ಕಾರ್ಯನಿರ್ವಹಿಸುವುದರ ಜೊತೆಗೆ ಸಂಘದ ಕೇಂದ್ರ ಕಛೇರಿಯ ಆಡಳಿತ, ಶಿಕ್ಷಣ, ತಾಂತ್ರಿಕ ಮತ್ತು ಲೆಕ್ಕಪತ್ರ ಶಾಖೆಗಳಲ್ಲಿ ಪ್ರಸ್ತುತ 92 ಹೊರ ಸಂಪನ್ಮೂಲ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಸಿಬ್ಬಂದಿಗಳು ಕನಿಷ್ಟ 3 ವರ್ಷದಿಂದ ಗರಿಷ್ಟ 16 ವರ್ಷಗಳ ಸತತ ಸೇವೆಯನ್ನು ನಿರಂತರವಾಗಿ ಸಲ್ಲಿಸುತ್ತಿದ್ದಾರೆ. ಸದರಿ ಸಿಬ್ಬಂದಿಗಳಿಗೆ ಸರ್ಕಾರದ ಆದೇಶದನ್ವಯ ಕನಿಷ್ಟ ವೇತನವನ್ನು ಮಾತ್ರ ಪಾವತಿಸಲಾಗುತ್ತಿದ್ದು, ವರ್ಷದಿಂದ ವರ್ಷಕ್ಕೆ ಯಾವುದೇ ರೀತಿಯ ಉತ್ತೇಜನ ಭತ್ಯೆ ನೀಡುತ್ತಿಲ್ಲ. ಇದರಿಂದಾಗಿ ಸದರಿ ಸಿಬ್ಬಂದಿಗಳು ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಜೀವನ ನಿರ್ವಹಣೆ ಮಾಡುವುದು ಕಷ್ಟ ಸಾಧ್ಯವಾಗಿರುತ್ತದೆ.

ಇದಲ್ಲದೇ, ಸರ್ಕಾರಿ ಖಾಯಂ ಸಿಬ್ಬಂದಿಗಳಿಗೆ ವಾರ್ಷಿಕವಾಗಿ ನೀಡುತ್ತಿರುವಂತೆ, ವಾರ್ಷಿಕ ಭತ್ಯೆ, ತುಟ್ಟಿ ಭತ್ಯೆ ಇತ್ಯಾದಿಗಳನ್ನು ಹೊರಸಂಪನ್ಮೂಲ ಸಿಬ್ಬಂದಿಗಳಿಗೆ ನೀಡಲಾಗುತ್ತಿಲ್ಲ. ಪ್ರಸ್ತುತ 2018ನೇ ಸಾಲಿನಿಂದ 7ನೇ ವೇತನ ಆಯೋಗದ ವೇತನ ಪರಿಷ್ಕರಣೆಯಿಂದಾಗಿ ಸರ್ಕಾರಿ ನೌಕರರಿಗೆ ವೇತನ ಹೆಚ್ಚಳವಾಗುತ್ತಿದ್ದು, ಖಾಯಂ ಸಿಬ್ಬಂದಿಗಳಿಗೆ ಪಾವತಿಸುವ ವೇತನಕ್ಕೆ ಹೊರಸಂಪನ್ಮೂಲ ಸಿಬ್ಬಂದಿಗಳಿಗೆ ಪಾವತಿಸುತ್ತಿರುವ ವೇತನಕ್ಕೆ ತುಂಬಾ ವ್ಯತ್ಯಾಸವಿರುತ್ತದೆ. ಇದರಿಂದಾಗಿ ಹೊರಸಂಪನ್ಮೂಲ ಸಿಬ್ಬಂದಿಗಳ ಜೀವನ ನಿರ್ವಹಣೆಯ ಮೇಲೆ ಅಪಾರವಾದ ದುಷ್ಪರಿಣಾಮ ಉಂಟಾಗುತ್ತಿದ್ದು, ಮಾನವೀಯ ದೃಷ್ಟಿಯಿಂದ ಈ ಅಂತರವನ್ನು ಸ್ವಲ್ಪಮಟ್ಟಿಗೆ ಸರಿದೂಗಿಸಬಹುದಾಗಿದೆ. ಇದಲ್ಲದೇ, ಮಾನ್ಯ ಸರ್ವೋಚ್ಛನ್ಯಾಯಾಲಯವು ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಖಾಯಂ ನೌಕರರಿಗೆ ನೀಡುವಂತೆ ಗುತ್ತಿಗೆ ಆಧಾರದ ತಾತ್ಕಾಲಿಕ ನೌಕರರಿಗೂ ಸಹ ನೀಡಲು ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ಈ ಪತ್ರಕ್ಕೆ ಲಗತ್ತಿಸಿದ ತ:ಖ್ತೆಯಂತೆ ವೇತನವನ್ನು ಪರಿಷ್ಕರಿಸಿದೆ. ಇದರಿಂದಾಗಿ ವಾರ್ಷಿಕವಾಗಿ ರೂ.68,91,084/-ಗಳ ಆರ್ಥಿಕ ಹೊರೆ ಬೀಳುತ್ತಿದೆ ಎಂಬ ಅಂಶವನ್ನು ಸಭೆಯ ಅವಗಾಹನೆಗೆ ಸಲ್ಲಿಸಲಾಗಿದೆ.

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ಆದ್ದರಿಂದ ಸಂಘದ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಸಂಪನ್ಮೂಲ ಸಿಬ್ಬಂದಿಗಳಿಗೆ ಪ್ರಸ್ತುತ ಪಾವತಿಸುತ್ತಿರುವ ವೇತನವನ್ನು ಈ ಕೆಳಕಂಡಂತೆ ಪರಿಷ್ಕರಿಸಿ, ಪಾವತಿಸಲು ಈ ಕೆಳಕಂಡಂತೆ ಪ್ರಸ್ತಾಪಿಸಿದೆ.

| ಕ್ರ.ಸಂ | ಹುದ್ದೆಗಳ ವಿವರಗಳು | ಒಟ್ಟು ಸಿಬ್ಬಂದಿಗಳು | ಪ್ರಸ್ತುತ ನೀಡುತ್ತಿರುವ ವೇತನ | ಪ್ರಸ್ತಾಪಿತ ಪರಿಷ್ಕೃತ ವೇತನ | ಹೆಚ್ಚುವರಿಯಾಗಿ ಭರಿಸಬೇಕಾದ ಮೊತ್ತ | ಒಟ್ಟು ಸಿಬ್ಬಂದಿಗೆ ಮಾಹೆಯಾನ ಹೆಚ್ಚುವರಿಯಾಗಿ ಭರಿಸಬೇಕಾದ ಮೊತ್ತ | ಹೆಚ್ಚುವರಿಯಾಗಿ ಒಟ್ಟು ಸಿಬ್ಬಂದಿಗೆ ವಾರ್ಷಿಕವಾಗಿ ಭರಿಸಬೇಕಾದ ಮೊತ್ತ |
|---|---|---|---|---|---|---|---|
| | | | (ರೂ.ಗಳಲ್ಲಿ) | | | | |
| 1 | ಸಹಾಯಕ ಅಭಿಯಂತರರು | 35 | 19000 | 25000 | 6000 | 210000 | 2520000 |
| 2 | ಕಿರಿಯ ಅಭಿಯಂತರರು | 7 | 18000 | 23000 | 5000 | 35000 | 420000 |
| 3 | ಕಂಪ್ಯೂಟರ್ ಪ್ರೋಗ್ರಾಮರ್ | 2 | 22000 | 25000 | 3000 | 6000 | 72000 |
| 4 | ಶೀಘ್ರಲಿಪಿಗಾರರು | 2 | 22000 | 25000 | 3000 | 6000 | 72000 |
| 5 | ಪ್ರಥಮ ದರ್ಜೆ ಸಹಾಯಕರು | 8 | 12907 | 20000 | 7093 | 56744 | 680928 |
| 6 | ಲೆಕ್ಕಪತ್ರ ಸಹಾಯಕರು | 8 | 12907 | 20000 | 7093 | 56744 | 680928 |
| 7 | ದ್ವಿತೀಯ ದರ್ಜೆ ಸಹಾಯಕರು | 5 | 12673 | 18000 | 5327 | 26635 | 319620 |
| 8 | ಕಂಪ್ಯೂಟರ್ ಆಪರೇಟರ್ | 13 | 13740 | 18000 | 4260 | 55380 | 664560 |
| 9 | ವಾಹನ ಚಾಲಕರು | 7 | 10775 | 18000 | 7225 | 50575 | 606900 |
| 10 | ಗ್ರೂಪ್ ಡಿ | 11 | 10775 | 15000 | 4225 | 46475 | 557700 |
| 11 | ಸ್ವಚ್ಛತಾ ಸಿಬ್ಬಂದಿಗಳು | 8 | 10912 | 14000 | 3088 | 24704 | 296448 |
| ಒಟ್ಟು | | **106** | **165689** | **221000** | **55311** | **574257** | **6891084** |

ಮೇಲ್ಕಂಡ ವಿಷಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿ, ಅನುಮೋದನೆ ಕೋರಿದೆ.

ತೀರ್ಮಾನ:

1. ಆಡಳಿತ ಮಂಡಳಿಯು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯಲ್ಲಿ ಹೊರಸಂಪನ್ಮೂಲದಿಂದ ಕಾರ್ಯನಿರ್ವಹಿಸುತ್ತಿರುವ 106 ಸಿಬ್ಬಂದಿಗಳಿಗೆ ಪ್ರಸ್ತಾಪಿತ ಮಾಸಿಕ ವೇತನವನ್ನು ಅವಲೋಕಿಸಿತು. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ವೆಚ್ಚ)ರವರು ಪ್ರಸ್ತಾಪಿತ ವೇತನವು ಆಯಾ ಹುದ್ದೆಗಳಿಗೆ ನಿಗಧಿಪಡಿಸಿದ ಕನಿಷ್ಠ ಮೂಲವೇತನದ ಶೇ.80ರಷ್ಟನ್ನು ಮೀರಬಾರದೆಂದು ಸೂಚಿಸಿದರು. ಸದರಿಯವರ ಸಲಹೆಯನ್ನು ಆಡಳಿತ ಮಂಡಳಿಯು ಸಮ್ಮತಿಸಿತು.
2. ಸಂಘದ ಕೇಂದ್ರ ಕಛೇರಿಯ ಹೊರಸಂಪನ್ಮೂಲ ಸಿಬ್ಬಂದಿಗಳಿಗೆ ಮೇಲ್ಕಂಡಂತೆ ಪ್ರಸ್ತಾಪಿತ ವೇತನವನ್ನು ಏಪ್ರಿಲ್ 2018ರ ಮಾಹೆಯಿಂದ ಸರ್ಕಾರದ ಅನುಮೋದನೆ ಪಡೆದು, ಪಾವತಿಸಲು ಆಡಳಿತ ಮಂಡಳಿಯು ಅನುಮೋದಿಸಿತು.
3. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆರವರು ಗ್ರೂಪ್ ಡಿ ಮತ್ತು ಸ್ವಚ್ಛತಾ ಸಿಬ್ಬಂದಿಗಳಿಗೆ ಪ್ರಸ್ತಾಪಿಸಿದ ವೇತನದಲ್ಲಿ ತಾರತಮ್ಯವಿರುವುದನ್ನು ಗಮನಿಸಿ, ಎರಡು ಹುದ್ದೆಗಳಿಗೂ ಸಹ ಸಮಾನ ವೇತನವನ್ನು ನಿಗಧಿಪಡಿಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದು, ಆಡಳಿತ ಮಂಡಳಿಯು ಎರಡೂ ಹುದ್ದೆಗಳಿಗೂ ಸಮಾನ ವೇತನವನ್ನು ನಿಗಧಿಪಡಿಸಲು ತೀರ್ಮಾನಿಸಿತು.

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ವಿಷಯ ಸಂಖ್ಯೆ: 10

**2018-19ನೇ ಸಾಲಿನಲ್ಲಿ ವಸತಿ ಶಾಲೆಗಳಿಗೆ 6ನೇ ತರಗತಿಗೆ ದಾಖಲಾತಿಯ ಪರೀಕ್ಷೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ Karnataka School Quality Assessment and Accreditation Council (KSQAAC) ಮುಖಾಂತರ ನೆಡೆಸಲು ಸಂಘವು ಕೈಗೊಂಡಿರುವ ಕ್ರಮದ ಬಗ್ಗೆ.**

ರಾಜ್ಯದ ಮೇಲ್ಕಂಡ ಎಲ್ಲಾ ವಸತಿ ಶಾಲೆಗಳಿಗೆ 2018-19ನೇ ಸಾಲಿಗೆ 6ನೇ ತರಗತಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಕಳೆದ ಸಾಲಿನಲ್ಲಿ ನಡೆದಂತೆ ರಾಜ್ಯ ಮಟ್ಟದ ಪ್ರವೇಶ ಪರೀಕ್ಷೆಯನ್ನು ದಿನಾಂಕ:18.02.2018 ರಂದು ನಡೆಸಲು ತೀರ್ಮಾನಿಸಿ ಪ್ರವೇಶ ಪರೀಕ್ಷೆ ಬಗ್ಗೆ ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿದೆ. 2018ರ ಪ್ರವೇಶ ಪರೀಕ್ಷೆಯ ವೆಚ್ಚಕ್ಕೆ ಭರಿಸಬೇಕಾದ ಅನುದಾನದ ವಿವರಗಳು ಕೆಳಕಂಡಂತೆ ಇವೆ.

| ಕ್ರ. ಸಂ | ಪರೀಕ್ಷಾ ಪ್ರಕ್ರಿಯೆಗಳ ವಿವರ ಮತ್ತು ಭರಿಸಿದ ವೆಚ್ಚದ ವಿವರಗಳು | ಭರಿಸಿದ ವೆಚ್ಚದ ವಿವರಗಳು ರೂ. ಲಕ್ಷಗಳಲ್ಲಿ |
|---|---|---|
| 1 | 2018-19ನೇ ಸಾಲಿನ 6ನೇ ತರಗತಿ ಪ್ರವೇಶ ಪರೀಕ್ಷೆಯ ಬಗ್ಗೆ ಸಾರ್ವಜನಿಕ ಪ್ರಕಟಣೆ ವೆಚ್ಚದ ಮೊತ್ತ. | 8.78 |
| 2 | 2018ರ ಪ್ರವೇಶ ಪರೀಕ್ಷೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ KSQAAC (ಎಸ್.ಎಸ್.ಎಲ್.ಸಿ ಬೋರ್ಡ್) ರವರಿಗೆ ವಹಿಸಲಾಗಿದೆ. ಸದರಿ ಸಂಸ್ಥೆಯವರಿಗೆ ಸರ್ಕಾರದಿಂದ ಅನುಮೋದನೆ ಪಡೆದು ಪಾವತಿಮಾಡಿರುವ ಅನುದಾನ. | 29.24 |
| 3 | ಜಿಲ್ಲೆಗಳಲ್ಲಿ ಕೌನ್ಸಲಿಂಗ್ ಕಾರ್ಯಕ್ಕೆ ಅಂದಾಜು ಮೊತ್ತ. (4 ವಿಭಾಗಗಳಿಗೆ) | 38.00 |
| 4 | ರಾಜ್ಯ ಮಟ್ಟದಲ್ಲಿ ಮಾದ್ಯಮದಲ್ಲಿ ಹಾಗೂ ಪತ್ರಿಕಾ ಪ್ರಕಟಣೆ ಹೊರಡಿಸಲು 30 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘದ ಜಿಲ್ಲಾ ಸಮನ್ವಯಾಧಿಕಾರಗಳು ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ ನಿರ್ವಹಣಾ ಖಾತೆಗೆ ಬಿಡುಗಡೆ ಮಾಡಲಾದ ಅನುದಾನ. | 34.85 |
| | **ಒಟ್ಟು ಮೊತ್ತ** | **110.87** |

ಮೇಲ್ಕಂಡಂತೆ 2018-19ನೇ ಸಾಲಿಗೆ ವಸತಿ ಶಾಲೆಗಳ 6ನೇ ತರಗತಿಗೆ ಪ್ರವೇಶ ಪರೀಕ್ಷೆಯನ್ನು ನಡೆಸಲು ತಗಲುವ ಖರ್ಚು ವೆಚ್ಚಗಳ ಅನುದಾನ ಬಿಡುಗಡೆಗೆ ಸಂಘವು ಕೈಗೊಂಡ ಕ್ರಮವನ್ನು ಆಡಳಿತ ಮಂಡಳಿಯ ಅನುಮೋದನೆಗಾಗಿ ಮಂಡಿಸಿದೆ.

ತೀರ್ಮಾನ:

**ಆಡಳಿತ ಮಂಡಳಿಯು 2018-19ನೇ ಸಾಲಿನಲ್ಲಿ ವಸತಿ ಶಾಲೆಗಳಿಗೆ 6ನೇ ತರಗತಿಗೆ ದಾಖಲಾತಿಯ ಪರೀಕ್ಷೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ Karnataka School Quality Assessment and Accreditation Council (KSQAAC)ಮುಖಾಂತರ ನೆಡೆಸಲು ಸಂಘವು ರೂ.110.87 ಲಕ್ಷಗಳ ವೆಚ್ಚ ಭರಿಸಿರುವುದನ್ನು ಅನುಮೋದಿಸಿತು.**

ಕಾರ್ಯನಿರ್ವಾಹಕ ನಿರ್ದೇಶಕರು

**ಅಧ್ಯಕ್ಷರು**

<u>ವಿಷಯ ಸಂಖ್ಯೆ: 11</u>

**ಮಾನ್ಯ ಉಚ್ಚನ್ಯಾಯಾಲಯದ W.P.No:6929/32/2018(EDN) dated:15.02.2018 ರಲ್ಲಿ ನೀಡಿರುವ ಆದೇಶದಂತೆ. 2018-19ನೇ ಸಾಲಿಗೆ 6ನೇ ತರಗತಿ ದಾಖಲಾತಿಗಾಗಿ ದಿನಾಂಕ:18.02.2018 ರಂದು ನಡೆಯಬೇಕಾಗಿದ್ದ ಪ್ರವೇಶ ಪರೀಕ್ಷಾ ಪ್ರಕ್ರಿಯೆಗೆ ತಡೆಯಾಜ್ಞೆ ನೀಡಿರುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ 792 ಪರಿಸಿಷ್ಟ ಜಾತಿ/ಪರಿಶಿಷ್ಟ ವರ್ಗದ ಹಾಗೂ ಹಿಂದುಳದ ವರ್ಗದ ವಸತಿ ಶಾಲೆಗಳಗೆ 2018-19ನೇ ಸಾಲಿಗೆ 6ನೇ ತರಗತಿ ದಾಖಲಾತಿಗಾಗಿ ಪ್ರವೇಶ ಪರೀಕ್ಷೆಯನ್ನು ದಿನಾಂಕ:18.02.2018 ರಂದು ನಿಗಧಿಪಡಿಸಿ, ಪ್ರವೇಶ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಪತ್ರಿಕಾ ಪ್ರಕಟಣೆಯನ್ನು ನೀಡಿ ವಿದ್ಯಾರ್ಥಿಗಳಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಒಟ್ಟು 193238 ಅರ್ಜಿಗಳು ಸ್ವೀಕೃತಗೊಂಡಿವೆ. ಈ ಸಂಬಂಧ ದಿನಾಂಕ:18.02.2018 ರಂದು ಪ್ರವೇಶ ಪರೀಕ್ಷೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ KSQAAC.ರವರಿಂದ ನಡೆಸಲಾಗುತ್ತಿದ್ದು, ಪ್ರವೇಶ ಪರೀಕ್ಷೆ ನಡೆಸಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು.

ಸರ್ಕಾರದ ಸುತ್ತೋಲೆ ಸಂಖ್ಯೆ:ಸಕಇ 171 ಎಂಡಿಎಸ್ 2013 ಬೆಂಗಳೂರು, ದಿನಾಂಕ:24.04.2017 ರಲ್ಲಿ ವಸತಿ ಶಾಲೆಗಳಗೆ ಮೀಸಲಾತಿ ಕಲ್ಪಿಸಿ ಹೊರಡಿಸಲಾಗಿರುವ ಸುತ್ತೋಲೆಯಲ್ಲಿನ ಶಿಕ್ಷಣ ಇಲಾಖೆಯಿಂದ ವರ್ಗಾವಣೆಯಾದ ವರ್ಗಾವಣೆಗೊಂಡ 24 ಪ.ಜಾತಿ ಹಾಗೂ ಹುತಾತ್ಮರ 4 ಹುತಾತ್ಮರ ಹಿಂದುಳದ ವರ್ಗದ ವಸತಿ ಶಾಲೆಗಳಗೆ ನಿಗಧಿಪಡಿಸಿರುವ ಮೀಸಲಾತಿ ವಿಷಯದ ಬಗ್ಗೆ ವಸತಿ ಶಾಲೆಗಳಲ್ಲಿ Implementation/Restoration, 50% G.M, 25% OBC and 25% SC candidates reservation for admitting student in Residential Schools in Karnataka ಎಂಬುದರ ಬಗ್ಗೆ ಶ್ರೀ ವಿಶ್ವನಾಥ ಎಸ್. ಮಠದ ಹಾಗೂ ಇತರರು ಮಾನ್ಯ ಉಚ್ಚನ್ಯಾಯಾಲದದಲ್ಲಿ W.P.No:6929/32/2018(EDN) dated:15.02.2018ರಲ್ಲಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚನ್ಯಾಯಾಲಯದ ದಿನಾಂಕ:18.02.2018ರಂದು ನಡೆಯಬೇಕಾದ ಪ್ರವೇಶ ಪರೀಕ್ಷೆಯ ಪ್ರಕ್ರಿಯೆಗೆ ಮಧ್ಯಂತರ ತಡೆಯಾಜ್ಞೆ ನೀಡಿ, ದಿನಾಂಕ:15.02.2018 ರಂದು ಮಧ್ಯಂತರ ಆದೇಶ ನೀಡಿದೆ. ಇದರಿಂದ ಪ್ರವೇಶ ಪರೀಕ್ಷೆಯನ್ನು ಮುಂದೂಡಲಾಗಿದೆ ಹಾಗೂ ಉಚ್ಚನ್ಯಾಯಾಲಯದ ಮದ್ಯಂತರ ತಡೆಯಾಜ್ಞೆಯನ್ನು ತೆರವುಗೊಳಸಲು ಕ್ರಮವಹಿಸಲಾಗುತ್ತಿದೆ ಎಂಬ ಅಂಶವನ್ನು ಆಡಳತ ಮಂಡಳಯ ಗಮನಕ್ಕೆ ತರಲಾಗಿದೆ.

**<u>ತೀರ್ಮಾನ:</u>**

**ಆಡಳತ ಮಂಡಳಯು, 2018-19ನೇ ಸಾಲಿಗೆ 6ನೇ ತರಗತಿ ದಾಖಲಾತಿಗಾಗಿ ದಿನಾಂಕ:18.02.2018 ರಂದು ನಡೆಯಬೇಕಾಗಿದ್ದ ಪ್ರವೇಶ ಪರೀಕ್ಷಾ ಪ್ರಕ್ರಿಯೆಗೆ ಮಾನ್ಯ ಉಚ್ಚನ್ಯಾಯಾಲಯವು W.P.No:6929/32/2018(EDN) dated:15.02.2018ರಲ್ಲಿ ನೀಡಿರುವ ತಡೆಯಾಜ್ಞೆಯನ್ನು ಅವಲೋಕಿಸಿ, ತೆರವುಗೊಳಸಲು ಕ್ರಮವಹಿಸುವಂತೆ ಸೂಚಿಸಲಾಯಿತು.**

ಕಾರ್ಯನಿರ್ವಾಹಕ ನಿರ್ದೇಶಕರು

**ಅಧ್ಯಕ್ಷರು**

<u>ವಿಷಯ ಸಂಖ್ಯೆ: 12</u>

**ವಸತಿ ಶಾಲೆ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಆರೋಗ್ಯ ಮತ್ತು ಇನ್ನಿತರೆ ಕಾರಣಗಳಿಂದ ಆಕಸ್ಮಿಕವಾಗಿ ಮೃತಪಟ್ಟಿರುವ ವಿದ್ಯಾರ್ಥಿಗಳ ಪೋಷಕರಿಗೆ ಪರಿಹಾರ ಧನ ನೀಡುವ ಬಗ್ಗೆ.**

| ಕ್ರ.ಸಂ | ವಿಷಯ | ಮೃತಪಟ್ಟಿರುವ ದಿನಾಂಕ | ಓದುತಿರುವ ತರಗತಿ | ಕಾರಣ | ಪರಿಹಾರ ಧನದ ಮೊತ್ತ (ರೂ.ಲಕ್ಷಗಳಲ್ಲಿ) | ವಿವರ |
|---|---|---|---|---|---|---|
| 1 | ಕು:ಶ್ರೀಕಾಂತ ತಂದೆ ಮಲ್ಲಿನಾಥ ಧನಶೆಟ್ಟಿ, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಗುಲ್ಬರ್ಗಾ ಉತ್ತರ, ಕಲಬುರಗಿ ಜಿಲ್ಲೆ. | 16.10.2017 | 8ನೇ ತರಗತಿ | ಅಕ್ಟೋಬರ್-2017ರ ಮಧ್ಯಂತರ ರಜೆಯಲ್ಲಿ ತನ್ನ ಸ್ವಂತ ಊರಿಗೆ ಹೋದಾಗ ಅವರ ಜಮೀನಿನಲ್ಲಿ ಸಿಡಿಲು ಬಡಿದು ಮೃತಪಟ್ಟಿರುತ್ತಾನೆ. | 2.00 | ಪರಿಹಾರಧನ ನೀಡಲಾಗಿದೆ. |
| 2 | ಕು॥ ನವೀನ್ ಬಾಬು, ಮೊರಾರ್ಜಿ ದೇಸಾಯಿ ವಸತಿ ಶಾಲೆ,(ಪ.ಜಾತಿ) ಸೋಮಯಾಜಲಹಳ್ಳಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ. | 15.09.2017 | 8ನೇ ತರಗತಿ | ರಜೆಯ ಮೇಲೆ ತನ್ನ ಸ್ವಂತ ಊರಿಗೆ ಹೋದ ಸಂದರ್ಭದಲ್ಲಿ ಮನೆಯ ಹಿಂಬದಿಯ ಹೊಂಡದಲ್ಲಿ ಕೈಕಾಲು ತೊಳೆಯುವ ಸಂದರ್ಭದಲ್ಲಿ ಕಾಲು ಜಾರಿ ಆಕಸ್ಮಿಕವಾಗಿ ಸಾವನ್ನಪ್ಪಿರುತ್ತಾನೆ. | 2.00 | ಪರಿಹಾರಧನ ನೀಡಲಾಗಿದೆ. |
| 3 | ಕು॥ ಚಲುವರಾಜ್ ಬಿ. ಆರ್. ತಂದೆ ರಂಗಸ್ವಾಮಿ ಮೊರಾರ್ಜಿ ದೇಸಾಯಿ ವಸತಿ ಶಾಲೆ(ಹಿಂ.ವರ್ಗ) ತಟ್ಟೆಕೆರೆಬಾರೆ, ಹೊಳೆನರಸಿಪುರತಾ: ಹಾಸನ ಜಿಲ್ಲೆ. | 14.05.2017 | 9ನೇ ತರಗತಿ | ರಜಾ ಅವದಿಯಲ್ಲಿ ಊರಿಗೆ ಹೋದ ಸಂದರ್ಭದಲ್ಲಿ ವಿದ್ಯುತ್ ಅವಗಡದಿಂದ ಮೃತಪಟ್ಟಿರುತ್ತಾರೆ. | 2.00 | ಪರಿಹಾರಧನ ನೀಡಲಾಗಿದೆ |
| 4 | ಕು॥ ಪ್ರಿಯಾಂಕ, ತಂದೆ ಬಸವರಾಜ ಮೊರಾರ್ಜಿದೇಸಾಯಿ ವಸತಿಶಾಲೆ (ಹಿಂ.ವರ್ಗ), ಜೇವರ್ಗಿ ತಾ, ಗುಲ್ಬರ್ಗಾ ಜಿಲ್ಲೆ | 04.08.2017 | 10ನೇ ತರಗತಿ | ವಸತಿ ಶಾಲೆಯಲ್ಲಿ ವೈಯಕ್ತಿಕ ಕಾರಣ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಈ ಬಗ್ಗೆ ಎಫ್.ಐ.ಆರ್. ದಾಖಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ. | 2.00 | ಪರಿಹಾರಧನ ನೀಡಲಾಗಿದೆ |

ಮೇಲ್ಕಂಡ ಮೃತ ವಿದ್ಯಾರ್ಥಿಗಳ ಪೋಷಕರಿಗೆ ಸಂಘದಲ್ಲಿರುವ ಕಾರ್ಪಸ್‌ಫಂಡ್ ನಿಂದ ತಲಾ ರೂ.2.00 ಲಕ್ಷ ಪರಿಹಾರ ಧನವನ್ನು ಸರ್ಕಾರದಿಂದ ಅನುಮೋದನೆ ಪಡೆದು ಪಾವತಿ ಮಾಡಲಾಗಿದೆ. ಸಂಘವು ಈ ಬಗ್ಗೆ ಕೈಗೊಂಡ ಕ್ರಮವನ್ನು ಆಡಳಿತ ಮಂಡಳಿಯ ಅನುಮೋದನೆಗೆ ಮಂಡಿಸಿದೆ.

<u>ತೀರ್ಮಾನ:</u>

**ಕಾರ್ಯನಿರ್ವಾಹಕ ನಿದೇಶಕರು ಸರ್ಕಾರದ ಆದೇಶ ಸಂಖ್ಯೆ: ಸಕಇ 82 ಮೊದೇಶಾ 2018, ದಿನಾಂಕ:02-02-2018ರಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಆಕಸ್ಮಿಕ ಮರಣ ಹೊಂದಿದಲ್ಲಿ ಅಂತಹ ವಿದ್ಯಾರ್ಥಿಗಳ ಪೋಷಕರುಗಳಿಗೆ ನೀಡುವ ಪರಿಹಾರ ಧನ ರೂ.1.00ಲಕ್ಷಗಳಿಂದ ರೂ.2.00ಲಕ್ಷಗಳಿಗೆ ಹೆಚ್ಚಿಸಿ ಆದೇಶಿಸಿರುವುದನ್ನು ಸಭೆಯು ಅವಗಾಹಿಸಿತು. ಹಾಗೂ ಮೇಲೆ ವಿವರಿಸಿರುವ ನಾಲ್ಕು ಮೃತ ವಿದ್ಯಾರ್ಥಿಗಳ ಪೋಷಕರುಗಳಿಗೆ ತಲಾ ರೂ.2.00ಲಕ್ಷಗಳನ್ನು ಸಂಘವು ಪಾವತಿಸಿರುವುದನ್ನು ಆಡಳಿತ ಮಂಡಳಿಯು ಅನುಮೋದಿಸಿತು.**

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

<u>ವಿಷಯ ಸಂಖ್ಯೆ:13</u>

<u>2017-18ನೇ ಪದವಿ ಪೂರ್ವ ವಸತಿ ವಿಜ್ಞಾನ ಕಾಲೇಜುಗಳ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ವಿಶೇಷ ಸಿ.ಇ.ಟಿ ತರಬೇತಿಯನ್ನು ಆಯೋಜಿಸುವ ಬಗ್ಗೆ.</u>

2017-18ನೇ ಸಾಲಿಗೆ ರಾಜ್ಯಾದ್ಯಂತ 26 ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜುಗಳು ಹಾಗೂ 4 ಏಲಕವ್ಯ ಮಾದರಿ ವಸತಿ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ವಸತಿ ಕಾಲೇಜುಗಳಲ್ಲಿ ದ್ವಿತೀಯ ಪಿ.ಯು.ಸಿ ತರಗತಿಯಲ್ಲಿ PCMB ಹಾಗೂ PCMCs ಐಚ್ಛಿಕ ವಿಷಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸ್ಥಳೀಯವಾಗಿ ಸಿಗುವ ಅನುಭವಿ ವಿಷಯ ತಜ್ಞರಿಂದ ವಿಶೇಷ CET ತರಬೇತಿಯನ್ನು ನೀಡುವ ಬಗ್ಗೆ ಕ್ರಮವಹಿಸುವಂತೆ, ಸಂಬಂಧಪಟ್ಟ ಪ್ರಾಂಶುಪಾಲರಿಗೆ ಸೂಚಿಸಿ, ಪ್ರತಿ ಕಾಲೇಜಿಗೆ ಅಂದಾಜು ರೂ.2.00 ಲಕ್ಷಗಳಂತೆ ಒಟ್ಟು ರೂ. 60.00 ಲಕ್ಷಗಳನ್ನು ಸರ್ಕಾರದಿಂದ ಅನುಮೋದನೆ ಪಡೆದು ಬಿಡುಗಡೆ ಮಾಡಲಾಗಿದೆ. ಸಂಘವು ಕೈಗೊಂಡ ಕ್ರಮವನ್ನು ಆಡಳಿತ ಮಂಡಳಿಯ ಅವಗಾಹನೆಗೆ ಸಲ್ಲಿಸಿದೆ.

<u>ತೀರ್ಮಾನ;</u>

1. ಸಂಘದ Academic Council ನ ಅಧ್ಯಕ್ಷರಾದ ಡಾ:.ನಿರಂಜನ ಆರಾಧ್ಯರವರು ವಿಷಯದ ಬಗ್ಗೆ ಮತಾನಾಡುತ್ತಾ, ಸಿಇಟಿ ತರಬೇತಿಗೆ ಸೂಕ್ತವಾದ ಸಂಸ್ಥೆಯನ್ನು ಗುರುತಿಸಿ, ವಿದ್ಯಾರ್ಥಿಗಳಿಗೆ ತರಬೇತಿ ನೀಡಬೇಕೆಂದು ಸಲಹೆ ನೀಡಿದರು. ಇಂಥ ವಿಷಯಗಳ ಬಗ್ಗೆ ತೀರ್ಮಾನ ಕೈಗೊಳ್ಳುವ ಮುನ್ನಾ ಸಂಘದ Academic Council ನ ಮುಂದೆ ವಿಷಯವನ್ನು ಮಂಡಿಸಿ ಅಭಿಪ್ರಾಯ ಪಡೆಯಬೇಕೆಂದು ತಿಳಿಸಿದರು.
2. ಅಲ್ಲದೇ Academic Councilಗೆ ಸಂಘದ ಕೇಂದ್ರ ಕಛೇರಿಯಲ್ಲಿ ಪ್ರತ್ಯೇಕ ವಿಭಾಗವಿರುವುದಿಲ್ಲವೆಂದು ತಿಳಿಸಿ, ತತ್ಸಂಬಂಧವಾಗಿ ಪ್ರತ್ಯೇಕ ವಿಭಾಗವನ್ನು ಸೃಜಿಸುವಂತೆ ಆಡಳಿತ ಮಂಡಳಿಯನ್ನು ಕೋರಿದರು.
3. ಆಡಳಿತ ಮಂಡಳಿಯು ಮೇಲ್ಕಂಡ ವಿಷಯಗಳ ಬಗ್ಗೆ ಚರ್ಚಿಸಿ, ಮುಂದಿನ ಶೈಕ್ಷಣಿಕ ವರ್ಷದಿಂದ ಅಗತ್ಯವಿರುವ ಶೈಕ್ಷಣಿಕ ವಿಷಯಗಳಿಗೆ Academic Councilನ ಅಭಿಪ್ರಾಯ ಪಡೆದು ಸೂಕ್ತ ಕ್ರಮವಹಿಸಲು ತಿಳಿಸಲಾಯಿತು. ಮತ್ತು ಸಂಘವು 2017-18ನೇ ಸಾಲಿನಲ್ಲಿ ಪದವಿ ಪೂರ್ವ ವಸತಿ ಕಾಲೇಜುಗಳ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಸಿಇಟಿ ತರಬೇತಿಗಾಗಿ ಸಂಘವು ಭರಿಸಿದ ವೆಚ್ಚ ರೂ.60.00ಲಕ್ಷಗಳನ್ನು ಅನುಮೋದಿಸಿತು.

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

<u>ವಿಷಯ ಸಂಖ್ಯೆ: 14</u>

**<u>ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನಲ್ಲಿರುವ Talented Development Centre, Indian Institute of Science ಸಂಸ್ಥೆಯವತಿಯಿಂದ, ವಸತಿ ಶಾಲೆಗಳ ಕರ್ತವ್ಯ ನಿರ್ವಹಿಸುತ್ತಿರುವ 360 ವಿಜ್ಞಾನ ಮತ್ತು ಗಣಿತ ಶಿಕ್ಷಕರುಗಳಿಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಬಗ್ಗೆ.</u>**

ಸರ್ಕಾರದ ಪತ್ರ ಸಂಖ್ಯೆ: ಸಕಇ 207 ಮೊದೇಶಾ 2018, ದಿ:23-02-2018ರಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಜ್ಞಾನ ಮತ್ತು ಗಣಿತ ವಿಷಯ ಶಿಕ್ಷಕರುಗಳಿಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಬಗ್ಗೆ ಸರ್ಕಾರ ಅನುಮತಿ ನೀಡಿದೆ. 180 ವಿಜ್ಞಾನ ಶಿಕ್ಷಕರು ಹಾಗೂ 180 ಗಣಿತ ಶಿಕ್ಷಕರುಗಳಿಗೆ ತರಬೇತಿಯನ್ನು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಲ್ಲಿರುವ Talented Development Centre, Indian Institute of Science ಸಂಸ್ಥೆಯವತಿಯಿಂದ ಆಯೋಜಿಸಲು ರೂ.15.00 ಲಕ್ಷಗಳ ವೆಚ್ಚ ಹಾಗೂ Experiments Kit along with Manuals ಲಭ್ಯವಿದ್ದು, ಅವುಗಳನ್ನು ಸರಬರಾಜು ಮಾಡಲು ಸದರಿ ಸಂಸ್ಥೆಯವರು ಆಸಕ್ತಿ ಹೊಂದಿದ್ದು, ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ ವಿಷಯಗಳ ಪ್ರಾಯೋಗಿಕ ಸಾಮಾಗ್ರಿಗಳ ಬೆಲೆ ಒಂದು ವಿಷಯಕ್ಕೆ ರೂ. 50,000/-ಗಳಂತೆ, 3 ವಿಷಯಗಳಿಗೆ ರೂ.1.50 ಲಕ್ಷಗಳಾಗುತ್ತದೆ. ಪ್ರಾಯೋಗಿಕವಾಗಿ ಪ್ರತಿ ಸೆಟ್‌ಗೆ ರೂ.1.50 ಲಕ್ಷಗಳಂತೆ 40 ಸೆಟ್‌ಗಳಿಗೆ ರೂ.60.00 ಲಕ್ಷಗಳ ವೆಚ್ಚ ಭರಿಸಬೇಕಾಗುತ್ತದೆ.

ಮೇಲ್ಕಂಡ ಹಿನ್ನಲೆಯಲ್ಲಿ ವಿಷಯವನ್ನು ಆಡಳಿತ ಮಂಡಳಿಯ ಅವಗಾಹನೆಗೆ ಸಲ್ಲಿಸಿದೆ.

**<u>ತೀರ್ಮಾನ:</u>**

1. **ಸರ್ಕಾರದ ಪತ್ರ ಸಂಖ್ಯೆ: ಸಕಇ 207 ಮೊದೇಶಾ 2018, ದಿ:23-02-2018ರಲ್ಲಿ ಸಂಘದ ಅಧೀನದ ವಸತಿ ಶಾಲೆಗಳ 360 ವಿಜ್ಞಾನ ಮತ್ತು ಗಣಿತ ಶಿಕ್ಷಕರುಗಳಿಗೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಚಳ್ಳಕೆರೆ ಇಲ್ಲಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ರೂ.15.00 ಲಕ್ಷಗಳ ತರಬೇತಿ ವೆಚ್ಚವನ್ನು ಹಾಗೂ ತರಬೇತಿಗೆ ಪೂರಕವಾಗಿರುವ 40 ಲ್ಯಾಬೋರೇಟರಿ ಕಿಟ್‌ಗಳನ್ನು ತಲಾ ರೂ.1.50 ಲಕ್ಷಗಳಂತೆ ಒಟ್ಟು ರೂ.60.00ಲಕ್ಷಗಳ ವೆಚ್ಚದಲ್ಲಿ ಒದಗಿಸಲು ಅನುಮೋದಿಸಿರುವುದಾಗಿ ಕಾರ್ಯನಿರ್ವಾಹಕ ನಿರ್ದೇಶಕರು, ಸಭೆಗೆ ತಿಳಿಸಿದರು. ಆಡಳಿತ ಮಂಡಳಿಯು ಸರ್ಕಾರದ ಪತ್ರವನ್ನು ಅವಗಾಹಿಸಿ, ಅನುಮೋದಿಸಿತು.**

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ವಿಷಯ ಸಂಖ್ಯೆ: 15
**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ 792 ವಸತಿ ಶಾಲೆಗಳಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಕರ್ನಾಟಕ ಪಠ್ಯಪುಸ್ತಕ ಸೊಸೈಟಿ (ರಿ), ನಿಗದಿಪಡಿಸಿದ ದರಗಳನ್ವಯ ವಸತಿ ಶಾಲೆಗಳ ಹಂತದಲ್ಲಿಯೇ ಖರೀದಿಸಲು ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ 792 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 2018-19ನೇ ಸಾಲಿಗೆ ಪಠ್ಯಪುಸ್ತಕಗಳನ್ನು ಖರೀದಿಸಬೇಕಾಗಿದೆ.

2017-18ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಕರ್ನಾಟಕ ಪಠ್ಯಪುಸ್ತಕ ಸೊಸೈಟಿ, ಬೆಂಗಳೂರು ಇವರು ನಿಗದಿಪಡಿಸಿರುವ ದರಗಳಲ್ಲಿ 2018-19ನೇ ಸಾಲಿನಲ್ಲಿ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಅಗತ್ಯವಾಗಿ ಬೇಕಾದ ಪಠ್ಯಪುಸ್ತಕಗಳನ್ನು ಖರೀದಿಸಲು ತಗಲುವ ಅಂದಾಜು ವೆಚ್ಚವು ಈ ಕೆಳಕಂಡಂತಿದೆ.

| ಕ್ರ.ಸಂ | ವಸತಿ ಶಾಲೆಗಳ ಸಂಖ್ಯೆ | ಪಠ್ಯಪುಸ್ತಕಗಳ ಬೆಲೆ (ರೂ.ಗಳಲ್ಲಿ) | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|
| 1 | 494 | ರೂ.80,600/- (6 ರಿಂದ 10ನೇ ತರಗತಿ ಪ್ರತಿ ಶಾಲೆಗೆ) | 398.16 |
| 2 | 298 (2017-18ನೇ ಸಾಲಿನಲ್ಲಿ ಪ್ರಾರಂಭಿಸಿರುವ ಹೊಸ ವಸತಿ ಶಾಲೆಗಳು) | ರೂ.32,400/- (6 ಮತ್ತು 7ನೇ ತರಗತಿ ಪ್ರತಿ ಶಾಲೆಗೆ) | 96.55 |
| ಒಟ್ಟು | 792 | | 494.71 |

ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧೀನದ ಕರ್ನಾಟಕ ಟೆಕ್ಸ್ಟ್‌ಬುಕ್ ಸೊಸೈಟಿಯು ಮುದ್ರಿಸಿ ಸರಬರಾಜು ಮಾಡುವ ಪಠ್ಯಪುಸ್ತಕಗಳನ್ನು ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಖರೀದಿಸಲು ಸಂಬಂಧಪಟ್ಟ ವಸತಿ ಶಾಲೆಗಳ ಪ್ರಾಂಶುಪಾಲರುಗಳಿಗೆ ರೂ.494.71 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಆಡಳಿತ ಮಂಡಳಿಯ ಮುಂದೆ ವಿಷಯವನ್ನು ಮಂಡಿಸಿ, ಅನುಮೋದನೆ ಕೋರಿದೆ.

ತೀರ್ಮಾನ:

**ಆಡಳಿತ ಮಂಡಳಿಯು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧೀನದ ಕರ್ನಾಟಕ ಟೆಕ್ಸ್ಟ್‌ಬುಕ್ ಸೊಸೈಟಿಯು ಮುದ್ರಿಸಿ ಸರಬರಾಜು ಮಾಡುವ ಪಠ್ಯಪುಸ್ತಕಗಳನ್ನು ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಖರೀದಿಸಲು ಸಂಬಂಧಪಟ್ಟ ವಸತಿ ಶಾಲೆಗಳ ಪ್ರಾಂಶುಪಾಲರುಗಳಿಗೆ ರೂ.494.71 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಅನುಮೋದಿಸಿತು.**

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ವಿಷಯ ಸಂಖ್ಯೆ: 16

2018-19 ನೇ ಸಾಲಿಗೆ ಸಿದ್ಧಪಡಿಸಿದ ಸಮವಸ್ತ್ರಗಳನ್ನು ಸರಬರಾಜು ಮಾಡಿರುವ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 818 ವಸತಿ ಶಾಲೆ/ಪದವಿ ಪೂರ್ವ ವಸತಿ ಕಾಲೇಜುಗಳ 157730 ವಿದ್ಯಾರ್ಥಿಗಳಿಗೆ 2018-19 ನೇ ಸಾಲಿನಲ್ಲಿ ಸಿದ್ಧಪಡಿಸಿದ ಸಮವಸ್ತ್ರಗಳನ್ನು ಮಂಜೂರಾತಿ ಸಂಖ್ಯೆಗನುಗುಣವಾಗಿ, ಸಮವಸ್ತ್ರ ಬಟ್ಟೆಯ Specification ಹಾಗೂ ಸಮವಸ್ತ್ರಗಳ ಹೊಲಿಗೆಯ ವಿನ್ಯಾಸದ (Specification & Pattern) ಹಾಗೂ 2017-18ನೇ ಸಾಲಿಗೆ ಆಯ್ಕೆಯಾದ ಸಮವಸ್ತ್ರದಂತೆ ಸರಬರಾಜು ಮಾಡಲು ದಿನಾಂಕ 31.12.2017ರಂದು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತರರಿಂದ ಅಥವಾ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಪ್ರಕ್ರಿಯೆ ಕೈಗೊಂಡು ಖರೀದಿಸುವ ಬಗ್ಗೆ ಅನುಮೋದನೆ ಕೋರಿ, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದೆ.

2018-19ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಸಿದ್ಧಪಡಿಸಿದ ಸಮವಸ್ತ್ರಗಳನ್ನು ಸರಬರಾಜು ಮಾಡಲು ಸಂಘವು ತೆಗೆದುಕೊಂಡ ಕ್ರಮವನ್ನು ಆಡಳಿತ ಮಂಡಳಿಯ ಅವಗಾಹನೆಗೆ ಸಲ್ಲಿಸಿದೆ.

ತೀರ್ಮಾನ

1. **ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ವೆಚ್ಚ)ರವರು ವಿಷಯವನ್ನು ಅವಲೋಕಿಸಿ, ಸಮವಸ್ತ್ರಗಳನ್ನು ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಪೂರೈಕೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.**
2. **ಸಂಘವು 2018-19ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಸಮವಸ್ತ್ರಗಳ ಪೂರೈಕೆಗೆ ತೆಗೆದುಕೊಂಡ ಕ್ರಮವನ್ನು ಆಡಳಿತ ಅವಗಾಹಿಸಿತು.**

ವಿಷಯ ಸಂಖ್ಯೆ: 17

2018-19 ನೇ ಸಾಲಿಗೆ ಮೆ॥ ಕರ್ನಾಟಕ ಸೋಪ್ ಅಂಡ್ ಡಿಟರ್‌ಜೆಂಟ್ಸ್ ರವರಿಂದ ಶುಚಿ ಸಂಭ್ರಮ ಕಿಟ್‌ಗಳನ್ನು ಸರಬರಾಜು ಮಾಡುವ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ.ಜಾತಿ, ಪ.ವರ್ಗ, ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ /ಏಕಲವ್ಯ/ಹುತಾತ್ಮರ ಶಾಲೆ/ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ/ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ 2018-19 ನೇ ಸಾಲಿಗೆ ಬಾಲಕರಿಗೆ ನಿರ್ಮಲ್ ಕಿಟ್ ರೂ. 92.50/- ರಂತೆ ಹಾಗೂ ಬಾಲಕಿಯರಿಗೆ ಸ್ಫೂರ್ತಿ ಕಿಟ್ ರೂ. 126/-ಗಳಂತೆ ಸರಬರಾಜು

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ಮಾಡಲು ಮೆ॥ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್, ಬೆಂಗಳೂರುರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ವಿವರ ಈ ಕೆಳಗಿನಂತಿದೆ.

| ಉತ್ಪನ್ನಗಳ ವಿವರ | ಪರಿಮಾಣ | ದರಗಳು ರೂ ಗಳಲ್ಲಿ | |
|---|---|---|---|
| | | ನಿರ್ಮಲ ಕಿಟ್ (ಬಾಲಕರಿಗೆ) | ಸ್ಫೂರ್ತಿ ಕಿಟ್ (ಬಾಲಕಿಯರಿಗೆ) |
| ಮೈಸೂರು ಸ್ಯಾಂಡಲ್ ಸೋಪ್ 75 ಗ್ರಾಂ | 1 | 30.5 | 30.5 |
| ಮೈಸೂರು ಡಿಟರ್ಜೆಂಟ್ ಕೇಕ್ 150 ಗ್ರಾಂ x 2 | 2 | 15 | 15 |
| ಮೈಸೂರು ಟಾಲ್ಕಂ ಪೌಡರ್ 50 ಗ್ರಾಂ | 1 | - | 17 |
| ಕೊಬ್ಬರಿ ಎಣ್ಣೆ 100 ಗ್ರಾಂ | 1 | 33 | 49.5 |
| ಟೂತ್ ಪೇಸ್ಟ್ 50 ಗ್ರಾಂ | 1 | 14 | 14 |
| ಒಟ್ಟು | | 0 | 126 |

2018-19ನೇ ಸಾಲಿಗೆ ಸಂಘದ ವಸತಿ ಶಾಲೆ/ಕಾಲೇಜುಗಳ ಬಾಲಕರಿಗೆ ನಿರ್ಮಲ ಕಿಟ್‌ಗಳು ಮತ್ತು ಬಾಲಕಿಯರಿಗೆ ಸ್ಫೂರ್ತಿ ಕಿಟ್‌ಗಳನ್ನು (ವಿದ್ಯಾರ್ಥಿಗಳ ಒಟ್ಟು ಮಂಜೂರಾತಿ ಸಂಖ್ಯೆ 157730) ಅಂದಾಜು ರೂ 17.83 ಕೋಟಿಗಳ ವೆಚ್ಚದಲ್ಲಿ ಸರಬರಾಜು ಮಾಡಲು ಸಚಿವ ಸಂಪುಟದ ಅನುಮೋದನೆಯೊಂದಿಗೆ ಕೆ.ಟಿ.ಪಿ.ಪಿ. ಕಾಯ್ದೆ 4(ಜಿ)ರಡಿ ವಿನಾಯಿತಿ ಕೋರಿ ದಿನಾಂಕ 20.01.2018 ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದೆ.

2018-19ನೇ ಸಾಲಿಗೆ ವಸತಿ ಶಾಲೆಗಳ ಬಾಲಕರಿಗೆ ನಿರ್ಮಲ ಕಿಟ್ ಹಾಗೂ ಬಾಲಕಿಯರಿಗೆ ಸ್ಫೂರ್ತಿಕಿಟ್‌ಗಳನ್ನು ಸರಬರಾಜು ಮಾಡಲು ಸಂಘವು ಕೈಗೊಂಡ ಕ್ರಮವನ್ನು ಆಡಳಿತ ಮಂಡಳಿಯ ಅವಗಾಹನೆಗೆ ಸಲ್ಲಿಸಿದೆ.

**ತೀರ್ಮಾನ**

**ಆಡಳಿತ ಮಂಡಳಿಯು ವಿಷಯವನ್ನು ಅವಗಾಹಿಸಿತು.**

ವಿಷಯ ಸಂಖ್ಯೆ: 18

2018-19 ನೇ ಸಾಲಿಗೆ ಮೆ॥ ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಬೆಂಗಳೂರು ರವರಿಂದ ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡುವ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ.ಜಾತಿ, ಪ.ವರ್ಗ ಹಾಗೂ ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ / ಕಿತ್ತೂರು ರಾಣಿ ಚೆನ್ನಮ್ಮ / ಏಕಲವ್ಯ / ಶ್ರೀಮತಿ ಇಂದಿರಾಗಾಂಧಿ /ಡಾ॥ ಬಿ.ಆರ್. ಅಂಬೇಡ್ಕರ್ / ಹುತಾತ್ಮರ / ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು ಹಾಗೂ ಪದವಿ ಪೂರ್ವ ವಸತಿ ಕಾಲೇಜುಗಳ ವಿದ್ಯಾರ್ಥಿಗಳಿಗೆ 2018-19 ನೇ ಸಾಲಿಗೆ ನೋಟ್ ಪುಸ್ತಕ & ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಲು ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿ. ಸಂಸ್ಥೆ ಸಲ್ಲಿಸಿರುವ ದರಗಳನ್ನು ದರಸಂದಾನದ ಮುಖಾಂತರ ಶೇ 3 ರಷ್ಟು ಕಡಿಮೆ ಮಾಡಿ ಈ ಕೆಳಕಂಡ 32 ವಿವಿಧ ಬಗೆಯ ಸಾಮಗ್ರಿಗಳ ಸರಬರಾಜಿಗೆ ಪ್ರಸ್ತಾಪಿಸಿದೆ.

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

| | Pages | Particulars | Basic Price | % | GST Amount | Price |
|---|---|---|---|---|---|---|
| 1 | 192 | SL Long Note Book | 42.93 | 12 | 5.15 | 48.08 |
| 2 | 192 | UR Long Note Book | 42.93 | 12 | 5.15 | 48.08 |
| 3 | 192 | SL King Size | 33.03 | 12 | 3.96 | 36.99 |
| 4 | 192 | UR King Size | 33.03 | 12 | 3.96 | 36.99 |
| 5 | 96 | SL King Size | 18.50 | 12 | 2.22 | 20.72 |
| 6 | 96 | UR King Size | 18.50 | 12 | 2.22 | 20.72 |
| 7 | 192 | 2L Small Note Book | 22.18 | 12 | 2.66 | 24.85 |
| 8 | 192 | 3L Small Note Book | 22.18 | 12 | 2.66 | 24.85 |
| 9 | 192 | 4L Small Note Book | 22.18 | 12 | 2.66 | 24.85 |
| 10 | 60 | Graph | 17.60 | 12 | 2.11 | 19.71 |
| 11 | | Answer Papers (Ruled) | 0.44 | 12 | 0.05 | 0.49 |
| 12 | | Answer Papers (UnRuled) | 0.44 | 12 | 0.05 | 0.49 |
| 13 | 60 | Cursive Writing Book | 44.42 | 0 | 0.00 | 44.42 |
| 14 | | Geometry Box | 96.00 | 18 | 17.28 | 113.28 |
| 15 | | Blue Pen | 5.77 | 12 | 0.69 | 6.46 |
| 16 | | Red Pen | 5.77 | 12 | 0.69 | 6.46 |
| 17 | | Pencil | 3.33 | 12 | 0.40 | 3.73 |
| 18 | 160 | Practical Records (Phy, Chem, Com Sci) | 48.85 | 12 | 5.86 | 54.71 |
| 19 | 160 | Practical Records (Bio) | 66.61 | 12 | 7.99 | 74.60 |
| 20 | | Refil blue | 4.00 | 12 | 0.48 | 4.48 |
| 21 | | Refil red | 4.00 | 12 | 0.48 | 4.48 |
| 22 | | A-4 sheets | 0.50 | 12 | 0.06 | 0.56 |
| 23 | | sketch pen | 40.00 | 12 | 4.80 | 44.80 |
| 24 | | Normal file without clip | 16.30 | 18 | 2.93 | 19.23 |
| 25 | | Eraser | 3.36 | 5 | 0.17 | 3.52 |
| 26 | | sharpner | 4.19 | 12 | 0.50 | 4.69 |
| 27 | | Plastic scale big | 12.00 | 18 | 2.16 | 14.16 |
| 28 | | Book wrappers | 7.99 | 18 | 1.44 | 9.43 |
| 29 | | Book Labels 1 sheeet | 30.00 | 18 | 5.40 | 35.40 |
| 30 | | Colour pencil box small (12 colour) | 22.74 | 12 | 2.73 | 25.47 |
| 31 | | Wax crans 1box small (12 colour) | 9.54 | 12 | 1.15 | 10.69 |
| 32 | | Water colour paint box small (12 colour tube) | 111.34 | 28 | 31.17 | 142.51 |

ಮೇಲ್ಕಂಡ 32 ನೋಟ್ ಪುಸ್ತಕ & ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಲು (ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆ 157730) ಕೆ.ಟಿ.ಪಿ.ಪಿ. ನಿಯಮ 4(ಜಿ) ರಡಿ ವಿನಾಯಿತಿ ಹೊಂದಿರುವ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿ. ಸಂಸ್ಥೆಯಿಂದ ರೂ. 32.97 ಕೋಟಿ ವೆಚ್ಚದಲ್ಲಿ ಸಚಿವ ಸಂಪುಟದ ಆಡಳಿತಾತ್ಮಕ ಅನುಮೋದನೆ ಕೋರಿ ದಿನಾಂಕ 14.02.2018 ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದೆ.

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

2018-19 ನೇ ಸಾಲಿಗೆ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ & ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಲು ಸಂಘವು ತೆಗೆದುಕೊಂಡ ಕ್ರಮವನ್ನು ಆಡಳಿತ ಮಂಡಳಿಯ ಅವಗಾಹನೆಗೆ ಸಲ್ಲಿಸಿದೆ.

**ತೀರ್ಮಾನ**

**ಆಡಳಿತ ಮಂಡಳಿಯು ವಿಷಯವನ್ನು ಅವಗಾಹಿಸಿತು.**

**ವಿಷಯ ಸಂಖ್ಯೆ: 19**

**2018-19ನೇ ಸಾಲಿಗೆ ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ರವರಿಂದ ಶೂ ಸಾಕ್ಸ್ ಟೈ ಮತ್ತು ಬೆಲ್ಟ್ ಗಳನ್ನು ಸರಬರಾಜು ಮಾಡುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ.ಜಾತಿ, ಪ.ವರ್ಗ, ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ /ಏಕಲವ್ಯ/ಹುತಾತ್ಮರ ಶಾಲೆ/ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ/ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್, ಟೈ, ಮತ್ತು ಬೆಲ್ಟ್ ಗಳನ್ನು ಸರ್ಕಾರದ ಆದೇಶ ಸಂಖ್ಯೆ: ಸರ್ಕಾರದ ಆದೇಶ ಸಂಖ್ಯೆ: ಸಕಇ 93 ಮೊದೇಶಾ 2016 ದಿನಾಂಕ: 14.12.2016 ರಲ್ಲಿ ಅನುಮೋದಿಸಿರುವ ದರಗಳನ್ನು ಪರಿಗಣಿಸಿ 2018-19 ನೇ ಸಾಲಿಗೆ ಡಾ॥ ಬಾಬು ಜಗಜೀವನ್‌ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ರವರಿಂದ ಪೂರೈಕೆ ಮಾಡಲು ಕೆ.ಟಿ.ಪಿ.ಪಿ. ನಿಯಮ 4(ಜಿ)ರಡಿ ವಿನಾಯಿತಿಯನ್ನು ಕೋರಿ ಸರ್ಕಾರಕ್ಕೆ ಈ ಕೆಳಗಿನಂತೆ ದಿನಾಂಕ: 05.01.2018 ರಂದು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

| ಕ್ರ. ಸಂ | ಸಾಮಗ್ರಿಗಳ ವಿವರ | ಬಾಲಕರಿಗೆ (60955 ವಿದ್ಯಾರ್ಥಿಗಳಿಗೆ) | | | ಬಾಲಕಿಯರಿಗೆ (96775 ವಿದ್ಯಾರ್ಥಿನಿಯರಿಗೆ) | | | (ವಿದ್ಯಾರ್ಥಿಗಳ ಒಟ್ಟು ಮಂಜೂರಾತಿ ಸಂಖ್ಯೆ 1,57,730) ಒಟ್ಟು ಮೊತ್ತ ರೂ. ಗಳಲ್ಲಿ |
|---|---|---|---|---|---|---|---|---|
| | | ಪ್ರತಿ ವಿದ್ಯಾರ್ಥಿಗೆ ಸರಬರಾಜು ಮಾಡಬೇಕಾದ ಪರಿಮಾಣ | ದರ | ಮೊತ್ತ (ರೂ.ಗಳಲ್ಲಿ) | ಪ್ರತಿ ವಿದ್ಯಾರ್ಥಿನಿಗೆ ಸರಬರಾಜು ಮಾಡಬೇಕಾದ ಪರಿಮಾಣ | ದರ | ಮೊತ್ತ (ರೂ.ಗಳಲ್ಲಿ) | |
| 1 | ಕಪ್ಪು ಶೂ | 1 ಜೊತೆ | 258 | 15726390 | 1 ಜೊತೆ | 258 | 24967950 | 40694340 |
| 2 | ಬಿಳಿ ಕ್ಯಾನ್‌ವಾಸ್ ಶೂ | 1 ಜೊತೆ | 249 | 15177795 | 1 ಜೊತೆ | 249 | 24096975 | 39274770 |
| 3 | Double netted ಕಾಟನ್ ಕಪ್ಪು ಕಾಲು ಚೀಲಗಳು | 2 ಜೊತೆ | 84 | 5120220 | 2 ಜೊತೆ | 84 | 8129100 | 13249320 |
| 4 | ಡಬಲ್ ನೆಟೆಡ್ ಕಾಟನ್ ಬಿಳಿ ಕಾಲು ಚೀಲಗಳು | 1 ಜೊತೆ | 42 | 2560110 | 1 ಜೊತೆ | 42 | 4064550 | 6624660 |
| 5 | ಬೆಲ್ಟ್ | 1 | 38 | 2316290 | - | | - | 2316290 |
| 6 | ಟೈ | 1 | 23 | 1401965 | - | | - | 1401965 |
| | | ಒಟ್ಟು | 694 | 42302770 | | 633 | 61258575 | 103561345 |

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ಮೇಲಿನಂತೆ, 2018–19ನೇ ಸಾಲಿಗೆ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಶೂ ಸಾಕ್ಸ್ ಟೈ ಮತ್ತು ಬೆಲ್ಟ್ ಗಳನ್ನು ಮಂಜೂರಾತಿ ಸಂಖ್ಯೆ 157730 ರಂತೆ ಸರಬರಾಜು ಮಾಡಲು ಅಂದಾಜು ರೂ.10.36 ಕೋಟಿ ವೆಚ್ಚದಲ್ಲಿ ಪೂರೈಕೆ ಮಾಡಲು ಸಂಘವು ತೆಗೆದುಕೊಂಡ ಕ್ರಮವನ್ನು ಆಡಳಿತ ಮಂಡಳಿಯ ಅವಗಾಹನೆಗೆ ಸಲ್ಲಿಸಿದೆ.

<u>ತೀರ್ಮಾನ</u>

**ಆಡಳಿತ ಮಂಡಳಿಯು ವಿಷಯವನ್ನು ಅವಗಾಹಿಸಿತು.**

<u>ವಿಷಯ ಸಂಖ್ಯೆ: 20</u>
<u>ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ Career counselling ಕಾರ್ಯಕ್ರಮವನ್ನು ಹಮ್ಮಿಕೊಂಡಿರುವ ಬಗ್ಗೆ:</u>

ವಸತಿ ಶಾಲೆ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ 10 ಮತ್ತು 12 ನೇ ತರಗತಿ ವಿದ್ಯಾರ್ಥಿಗಳಿಗೆ Carrier Counselling Programe ನಡೆಸುವ ಕುರಿತು ಸರ್ಕಾರದಿಂದ ಹೊರಡಿಸಲಾದ ಆದೇಶ ಸಂಖ್ಯೆ ಸಕಇ 332 ಮೊದೇಶಾ 2017, ದಿನಾಂಕ 13/07/2017 ಹಾಗೂ ಸರ್ಕಾರದ ಪತ್ರ ಸಂಖ್ಯೆ 522 ಮೊದೇಶಾ 2017, ದಿನಾಂಕ:03.11.2017 ರಂತೆ ದಿನಾಂಕ 17.11.2017 ರಂದು ಇ-ಪೋರ್ಟಲ್ ಮುಖಾಂತರ ಟೆಂಡರ್ ಕರೆಯಲಾಗಿದೆ. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ 28.11.2017. ದಿನಾಂಕ 30.11.2017 ರಂದು ತಾಂತ್ರಿಕ ಬಿಡ್ ತೆರೆಯಲಾಗಿದೆ.

ಟೆಂಡರ್‌ನಲ್ಲಿ ಈ ಕೆಳಕಂಡ ಬಿಡ್‌ದಾರರು ಟೆಂಡರ್ ಸಲ್ಲಿಸಿರುತ್ತಾರೆ.

1. **Foundation For Advanced & Creative Education, Banagalore**
2. **Chairman Educational Trust, Banagalore.**

ದಿನಾಂಕ 15.12.2017 ರಂದು ಜರುಗಿದ ಟೆಂಡರ್ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಲಾಗಿ **Chairman Educational Trust, Banagalore** ರವರು ಟೆಂಡರ್‌ನಲ್ಲಿ ಪೂರ್ವಾರ್ಹತೆ ಹೊಂದಿರುವುದಾಗಿ ಸಮಿತಿಯು ತೀರ್ಮಾನಿಸಿತು. ಅದರಂತೆ ದಿನಾಂಕ 03.01.2018 ರಂದು **Chairman Educational Trust, Banagalore** ರವರ ಆರ್ಥಿಕ ಬಿಡ್ ತೆರೆಯಲಾಗಿದೆ.

ದಿನಾಂಕ: 10.01.2018 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆದ ಟೆಂಡರ್ ಅನುಮೋದನಾ ಸಮಿತಿ ಸಭೆಯಲ್ಲಿ Career Counselling Programme ನಡೆಸುವ ಕುರಿತು ಚರ್ಚಿಸಿ, **Chairman Educational Trust, Banagalore**

ಕಾರ್ಯನಿರ್ವಾಹಕ ನಿರ್ದೇಶಕರು

**ಅಧ್ಯಕ್ಷರು**

ರವರಿಂದ ಪ್ರತಿ ಶಾಲೆಗೆ ಸೇವಾ ತೆರಿಗೆ ಸೇರಿದಂತೆ ರೂ 28,150/- ಗಳಂತೆ ರಂತೆ, ಒಟ್ಟು 520 ವಸತಿ ಶಾಲೆಗಳ 10ನೇ ಮತ್ತು 12ನೇ ತರಗತಿ ವಿದ್ಯಾರ್ಥಿಗಳಿಗೆ ರೂ 146.38 ಲಕ್ಷಗಳ ವೆಚ್ಚವನ್ನು ಭರಿಸಲು ಅನುಮೋದಿಸಲಾಗಿದೆ. ಅದರಂತೆ ದಿನಾಂಕ 27.01.2018 ರಂದು Chairman Educational Trust, Banagalore ರವರಿಗೆ Carrier Counselling Programme ನಡೆಸುವ ಸಲುವಾಗಿ ಕಾರ್ಯಾದೇಶ ನೀಡಲಾಗಿದೆ.

ಮೇಲ್ಕಂಡಂತೆ, ಸಂಘವು ಕೈಗೊಂಡ ಕ್ರಮವನ್ನು ಆಡಳಿತ ಮಂಡಳಿಯ ಅವಗಾಹನೆಗೆ ಸಲ್ಲಿಸಿದೆ.

<u>ತೀರ್ಮಾನ</u>

**ಆಡಳಿತ ಮಂಡಳಿಯು ವಿಷಯವನ್ನು ಅವಗಾಹಿಸಿತು.**

<u>ವಿಷಯ ಸಂಖ್ಯೆ: 21</u>

**<u>ಕೋಲಾರ ಜಿಲ್ಲೆಯ ವಸತಿ ಶಾಲೆಗಳಿಗೆ Modernisation/Mobile App ಕಾರ್ಯವನ್ನು ಮೆ|| KELTRON ರವರಿಗೆ ವಹಿಸಿರುವ ಬಗ್ಗೆ</u>**

ಕೋಲಾರ ಜಿಲ್ಲೆಯ ವಸತಿ ಶಾಲೆ/ಕಾಲೇಜುಗಳಿಗೆ Procurement, Customization, implementation And Maintenance Of Mobile App And Web Based School Automation Application ಗಾಗಿ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಸಮಾಜ ಕಲ್ಯಾಣ ಇಲಾಖೆ ಹಾಗೂ ಉಪಾಧ್ಯಕ್ಷರು ಕವಶಿಸಸ ರವರ ಅನುಮೋದನೆಯಂತೆ ಕರೆಯಲಾಗಿದ್ದ ಟೆಂಡರ್‌ನಲ್ಲಿ ಭಾಗವಹಿಸಿದ್ದ ಇಬ್ಬರು ಬಿಡ್‌ದಾರರಲ್ಲಿ ಎಲ್ 1 ಬಿಡ್‌ದಾರರಾದ M/s Kerala State Electronics Development Corporation Ltd (KELTRON) ರವರಿಗೆ ಟೆಂಡರ್ ಅನುಮೋದನಾ ಸಮಿತಿಯ ತೀರ್ಮಾನದಂತೆ ದಿ: 14.03.2017 ರಂದು ರೂ 24,46,324/- ಮೊತ್ತಕ್ಕೆ ಕಾರ್ಯಾದೇಶವನ್ನು ನೀಡಲಾಗಿದೆ. ಕಾರ್ಯ ಪ್ರಗತಿಯಲ್ಲಿದೆ. ವಿಷಯವನ್ನು ಆಡಳಿತ ಮಂಡಳಿಯ ಅವಗಹನೆಗೆ ಹಾಗೂ ರೂ 24,46,324/-ಗಳ ವೆಚ್ಚವನ್ನು ಭರಿಸಲು 69ನೇ ಆಡಳಿತ ಮಂಡಳಿಯ ಸಭೆಯಲ್ಲಿ ಅನುಮೋದನೆ ಕೋರಲಾಗಿತ್ತು.

69ನೇ ಆಡಳಿತ ಮಂಡಳಿಯಲ್ಲಿ ವಿಷಯವನ್ನು ದೀರ್ಘವಾಗಿ ಚರ್ಚಿಸಿ Mobile App ಪ್ರಸ್ತಾವನೆಯನ್ನು ಮುಂದೂಡಲು ತೀರ್ಮಾನಿಸಿತು. ಕೋಲಾರ ಜಿಲ್ಲೆಯ ವಸತಿ ಶಾಲೆ/ಕಾಲೇಜುಗಳಿಗೆ Procurement, Customization, implementation And Maintenance Of Mobile App And Web Based School Automation Application

ಕಾರ್ಯನಿರ್ವಾಹಕ ನಿರ್ದೇಶಕರು ಅಧ್ಯಕ್ಷರು

ಗಾಗಿ ನೀಡಿದ್ದ ಕಾರ್ಯವನ್ನು M/s Kerala State Electronics Development Corporation Ltd (KELTRON) ರವರು ಪೂರ್ಣಗೊಳಿಸಿ, ಪ್ರಾಂಶುಪಾಲರು ಹಾಗೂ ಕಂಪ್ಯೂಟರ್ ಶಿಕ್ಷಕರಿಗೆ ತರಬೇತಿಯನ್ನು ನೀಡಿರುವುದಾಗಿ ಪತ್ರದಲ್ಲಿ ತಿಳಿಸಿ ಪಾವತಿಗಾಗಿ ಬಿಲ್ಲನ್ನು ವಸತಿ ಶಾಲೆಗಳ ಪ್ರಾಂಶುಪಾಲರ ದೃಡೀಕರಣದೊಂದಿಗೆ ಸಲ್ಲಿಸಿರುತ್ತಾರೆ.

ಕೋಲಾರ ಜಿಲ್ಲೆಯ ವಸತಿ ಶಾಲೆ/ಕಾಲೇಜುಗಳಿಗೆ Procurement, Customization, implementation And Maintenance Of Mobile App And Web Based School Automation Application ಕಾರ್ಯಕ್ಕಾಗಿ ಮೆ॥ KELTRON ರವರಿಗೆ ಕಾರ್ಯಾದೇಶದನ್ವಯ 3ನೇ ವ್ಯಕ್ತಿಯಿಂದ ತಪಾಸಣೆ ನಡೆಸಿ, ವರದಿಯನ್ನು ಪಡೆದು, ಪಾವತಿಗೆ ಕ್ರಮವಹಿಸಲು ಆಡಳಿತ ಮಂಡಳಿಯ ಅನುಮೋದನೆ ಕೋರಿದೆ.

ತೀರ್ಮಾನ

**ಆಡಳಿತ ಮಂಡಳಿಯು ವಿಷಯವನ್ನು ಅವಗಾಹಿಸಿ, M/s Kerala State Electronics Development Corporation Ltd (KELTRON) ರವರು ಈಗಾಗಲೇ ತರಬೇತಿ ನೀಡಿರುವ ಬಾಬ್ತನ್ನು ತಾಂತ್ರಿಕ ಪರಿಣಿತರ 3ನೇ ವ್ಯಕ್ತಿಯಿಂದ ತಪಾಸಣಾ ವರದಿ ಪಡೆದು, ಪಾವತಿಸಲು ಅನುಮೋದಿಸಿತು.**

ವಿಷಯ ಸಂಖ್ಯೆ: 22

Geo Tagging/Coding ಅಂತರ್ಜಾಲದಲ್ಲಿ ಅಳವಡಿಸುವ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆ/ಕಾಲೇಜುಗಳು, ಸಮಾಜ ಕಲ್ಯಾಣ ಇಲಾಖೆ ಮತ್ತು ಅದರ ಅಧೀನದಲ್ಲಿ ಬರುವ ನಿಗಮಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳು, ಗಿರಿಜನ ಹಾಡಿಗಳು ಮತ್ತು ಸರ್ಕಾರದ ಯೋಜನೆಗಳ ಅಡಿಯಲ್ಲಿ ಗಂಗಾ ಕಲ್ಯಾಣದಂತಹ ವಿವಿಧ ಯೋಜನೆಗಳು ಸೇರಿದಂತೆ ಭೌಗೋಳಿಕವಾಗಿ ಗುರುತಿಸಬಹುದಾಂತಹ ಅಂದಾಜು 10,000 ಸ್ಥಳಗಳ ಅಕ್ಷಾಂಶ ಮತ್ತು ರೇಖಾಂಶ (Longitude and Latitude) ಗಳನ್ನು ಡಿಜಿಟಲ್ ಮ್ಯಾಪ್‌ಗಳಲ್ಲಿ ಗುರುತಿಸಿ, ನವೀನ ತಂತ್ರಜ್ಞಾನವನ್ನು ಅಳವಡಿಸಿಕೊಂಡು ವಿವಿಧವಾದ Geo Specific ಮಾಹಿತಿಗಳನ್ನು ಪಡೆದು ನಿರ್ವಹಿಸಲು Geo Tagging/Coding ಕಾರ್ಯವನ್ನು ಕೈಗೊಳ್ಳಲು ಹಿಂದಿನ ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆರವರ ಅನುಮೋದನೆಯೊಂದಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಅನ್ವಯ ದಿನಾಂಕ 02/12/2016 ರಂದು ಟೆಂಡರ್ ಕರೆಯಲಾಗಿದೆ. ಟೆಂಡರಿನಲ್ಲಿ

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ಭಾಗವಹಿಸಿದ ಒಬ್ಬರೇ ಬಿಡ್‌ದಾರರಾದ M/s. CE infosystems Pvt Ltd. New Delhi ರವರ ಟೆಂಡರನ್ನು ದಿನಾಂಕ 26.12.2016ರಂದು ನಡೆದ ಟೆಂಡರ್ ಅನುಮೋದನಾ ಸಮಿತಿ ಸಭೆಯಲ್ಲಿ ಅಂಗೀಕರಿಸಲಾಗಿದ್ದು, ದಿನಾಂಕ 18/01/2017ರಂದು ರೂ 1,29,48,138/-ಗಳ ಮೌಲ್ಯಕ್ಕೆ ಕಾರ್ಯದೇಶ ನೀಡಲಾಗಿದೆ.

ಮೇಲ್ಕಂಡ ಕಾರ್ಯಾದೇಶದಲ್ಲಿನ ಮೊತ್ತವು 10000 ಸ್ಥಳಗಳನ್ನು Geo Tagging/Coding ಮುಖಾಂತರ ಗುರುತಿಸಲು ತಿಳಿಸಲಾಗಿರುತ್ತದೆ. ಈ ಪೈಕಿ ಸಂಘದ ವ್ಯಾಪ್ತಿಯಲ್ಲಿ 800 ಸ್ಥಳಗಳು ಬರುತ್ತವೆ. ಈ ಬಾಬ್ತು ಸಂಘವು ರೂ 10,35,851/-ಗಳ ವೆಚ್ಚವನ್ನು ಭರಿಸಬೇಕಾಗುತ್ತದೆ. ಉಳಿದ ಸ್ಥಳಗಳು ಸಮಾಜ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳ ವ್ಯಾಪ್ತಿಯಲ್ಲಿ ಬರುವುದರಿಂದ ಆಯಾ ಇಲಾಖೆಗಳು ವೆಚ್ಚವನ್ನು ಭರಿಸಬೇಕಾಗುತ್ತದೆ. ಈ ಬಗ್ಗೆ ವಿಷಯವನ್ನು 69ನೇ ಆಡಳಿತ ಮಂಡಳಿಯ ಸಭೆಯ ಮುಂದೆ ಮಂಡಿಸಲಾಗಿತ್ತು.

69ನೇ ಆಡಳಿತ ಮಂಡಳಿಯಲ್ಲಿ ವಿಷಯನ್ನು ದೀರ್ಘವಾಗಿ ಚರ್ಚಿಸಿ Geo Tagging/Coding ಪ್ರಸ್ತಾವನೆಯನ್ನು ಮುಂದೂಡಲು ತೀರ್ಮಾನಿಸಿತು.

ಆದರೆ, ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಸಮಾಜ ಕಲ್ಯಾಣ ಇಲಾಖೆರವರ ಅಧ್ಯಕ್ಷತೆಯಲ್ಲಿ ದಿನಾಂಕ :07.12.2017 ರಂದು ನಡೆದ ಸಭೆಯಲ್ಲಿ M/s. CE infosystems Pvt Ltd. New Delhi ಸಂಸ್ಥೆಯ ಪ್ರತಿನಿಧಿಯಾದ ಶ್ರೀ ಆರ್ ವೆಂಕಟಕೃಷ್ಣ ರವರು ಹಾಜರಿದ್ದು ಸದರಿ ಸಂಸ್ಥೆಗೆ ವಹಿಸಲಾಗಿದ್ದ ಕಾರ್ಯದ ಪ್ರಗತಿಯ ಬಗ್ಗೆ ವಿವರಿಸಿದರು.

ಪ್ರಸ್ತುತ ಸದರಿ ಸಂಸ್ಥೆ ಕಾರ್ಯದೇಶ ನೀಡಿರುವ 10000 ಸ್ಥಳಗಳಲ್ಲಿ ಒಟ್ಟಾರೆ 5500 ಸ್ಥಳಗಳನ್ನು ಗುರುತಿಸಿ ಮಾಹಿತಿಯನ್ನು ಸಂಗ್ರಹಿಸಿದ್ದು, ಅವುಗಳಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ಸಂಘದ 44, ಸಮಾಜ ಕಲ್ಯಾಣ ಇಲಾಖೆಯ 579, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ 937 ಒಟ್ಟಾರೆ 1560 ಸ್ಥಳಗಳ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಲಾಗಿದೆ. ಬಾಕಿ ಉಳಿದಿರುವ ಸ್ಥಳಗಳ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಕೆ ಮಾಡುವ ಕಾರ್ಯ ಪ್ರಗತಿಯಲ್ಲಿದೆ. ಉಳಿದ ಸ್ಥಳಗಳ ಮಾಹಿತಿಯನ್ನು ಸಂಗ್ರಹಿಸಬೇಕಾಗಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ಅಂತಿಮವಾಗಿ ಪ್ರಸ್ತುತ ಸಂಗ್ರಹಿಸಿರುವ 5500 ಸ್ಥಳಗಳ ಮಾಹಿತಿಯನ್ನು ಮಾತ್ರ ತಂತ್ರಾಂಶದಲ್ಲಿ ಪೂರ್ಣ ಪ್ರಮಾಣದಲ್ಲಿ ಅಳವಡಿಸಿದ ನಂತರ ಉಳಿದ ಕೆಲಸವನ್ನು ಸ್ಥಗಿತಗೊಳಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಮೇಲ್ಕಂಡ ಸಂಸ್ಥೆಯು 5500 ಸ್ಥಳಗಳ ಮಾಹಿತಿಯನ್ನು ಪೂರ್ಣಪ್ರಮಾಣದಲ್ಲಿ ಅಳವಡಿಸಿದ ನಂತರ 3ನೇ ವ್ಯಕ್ತಿಯ ತಪಾಸಣೆ ನಡೆಸಿ ತಪಾಸಣಾ ವರದಿ ಪಡೆದ ನಂತರ ಪಾವತಿಗೆ ಕ್ರಮವಹಿಸುವ ಬಗ್ಗೆ ವಿಷಯವನ್ನು ಆಡಳಿತ ಮಂಡಳಿಯ ಅವಗಾಹನೆಗೆ ಮಂಡಿಸಿ, ಅನುಮೋದನೆ ಕೋರಿದೆ.

<u>ತೀರ್ಮಾನ</u>

**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಹಾಗೂ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ(ವೆಚ್ಚ)ರವರು ವಿಷಯವನ್ನು ಅವಗಾಹಿಸಿ, M/s. CE infosystems Pvt Ltd. New Delhi ಸಂಸ್ಥೆಯವರಿಗೆ ವಹಿಸಲಾಗಿರುವ Geo Tagging/Coding ಕಾರ್ಯಕ್ರಮವನ್ನು ತಕ್ಷಣವೇ ಸ್ಥಗಿತಗೊಳಿಸಬೇಕೆಂದು ಹಾಗೂ ಈ ಕಾರ್ಯಕ್ರಮವು ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಲ್ಲಿ ಲಭ್ಯವಿದ್ದು, ಸದರಿ ಇಲಾಖೆಗೆ ವಹಿಸಬೇಕೆಂದು ತಿಳಿಸಿದರು. ಆಡಳಿತ ಮಂಡಳಿಯು ಈ ಸಲಹೆಯನ್ನು ಅನುಮೋದಿಸಿ, ಈಗಾಗಲೇ M/s. CE infosystems Pvt Ltd. ಗೆ ಮಿತಿಗೊಳಿಸಿದ 5500 ಸ್ಥಳಗಳ ಮಾಹಿತಿಯನ್ನು ಪೂರ್ಣಪ್ರಮಾಣದಲ್ಲಿ ತತ್ರಾಂಶಕ್ಕೆ ಅಳವಡಿಸಿದ ನಂತರ ತಾಂತ್ರಿಕ ಪರಿಣಿತರ 3ನೇ ವ್ಯಕ್ತಿಯಿಂದ ತಪಾಸಣಾ ವರದಿ ಪಡೆದು, ಪಾವತಿಗೆ ಕ್ರಮವಹಿಸಲು ತೀರ್ಮಾನಿಸಲಾಯಿತು.**

<u>ವಿಷಯ ಸಂಖ್ಯೆ: 23</u>
<u>ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಪ್ಯಾಕೇಟ್ ಸ್ಪ್ರಿಂಗ್ ಹಾಸಿಗೆ ಮತ್ತು ದಿಂಬುಗಳನ್ನು ಸರಬರಾಜು ಮಾಡುವ ಬಗ್ಗೆ.</u>

ಸರ್ಕಾರದ ಆದೇಶ ಸಂಖ್ಯೆ ಸಕಇ 249 ಪಕವಿ 2017, ದಿ:18.07.2017ರಲ್ಲಿ ಸಂಘದ ವಸತಿ ಶಾಲೆ/ಕಾಲೇಜುಗಳಿಗೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ Pocket spring ಹಾಸಿಗೆ ಹಾಗೂ ದಿಂಬುಗಳನ್ನು ಸರಬರಾಜು ಮಾಡಲು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಮುಖಾಂತರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮರಡಿ ಒಟ್ಟು ಪ್ರಮಾಣ 1/4 ಭಾಗ

ಕಾರ್ಯನಿರ್ವಾಹಕ ನಿರ್ದೇಶಕರು ಅಧ್ಯಕ್ಷರು

ಮೀರದಂತೆ ಪ್ರತ್ಯೇಕ 4 ಪ್ಯಾಕೇಜ್‌ಗಳನ್ನೊಳಗೊಂಡ ಕೇಂದ್ರೀಕೃತ ಟೆಂಡರ್ ಕರೆಯಲು ಆದೇಶ ನೀಡಲಾಗಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ವಿದ್ಯಾರ್ಥಿಗಳ ಸಂಖ್ಯೆಯನ್ನು ಆಧರಿಸಿ 111410 ಹಾಸಿಗೆ ಹಾಗೂ 125820 ದಿಂಬುಗಳ ಬೇಡಿಕೆಯನ್ನು ಸಲ್ಲಿಸಲಾಗಿತ್ತು. ಅದರಂತೆ ಸರ್ಕಾರದ ಆದೇಶವನ್ನು ಹೊರಡಿಸಿದೆ. ಆದರೆ ಈಗಾಗಲೇ ವಸತಿ ಶಾಲೆಗಳಿಗೆ ಈ ಹಿಂದೆ ಸರಬರಾಜು ಮಾಡಿರುವ ಹಾಸಿಗೆ ಮತ್ತು ದಿಂಬುಗಳ ಪೈಕಿ ಹಾಳಾಗಿರುವ ಹಾಗೂ ಕಳೆದ ಸಾಲಿನಲ್ಲಿ ಸರಬರಾಜು ಮಾಡಿರುವ ಟೂ ಟೈರ್ ಕಾಟ್/ಸಿಂಗಲ್ ಕಾಟ್‌ಗಳಿಗೆ ಅವಶ್ಯಕತೆ ಇರುವ ಹಾಸಿಗೆ ಮತ್ತು ದಿಂಬುಗಳ ಬೇಡಿಕೆಯನ್ನು ಸಂಘವು ಜಿಲ್ಲೆಗಳಲ್ಲಿ ನಿಯೋಜಿಸಿರುವ ಜಿಲ್ಲಾ ಸಮನ್ವಯಾಧಿಕಾರಿಗಳು ವಸತಿ ಶಾಲೆಗಳಿಗೆ ಭೇಟಿ ನೀಡಿ ಸ್ವಂತ ಕಟ್ಟಡಗಳ ವಸತಿ ಶಾಲೆಗಳ ಪ್ರಾಂಶುಪಾಲರಿಂದ ಬೇಡಿಕೆಯನ್ನು ಪಡೆದು ಸಲ್ಲಿಸಿರುವ ಮಾಹಿತಿಯನ್ನು ಆಧರಿಸಿ ವಸತಿ ಶಾಲೆ/ಕಾಲೇಜುಗಳಿಗೆ 54000 ಹಾಸಿಗೆ ಮತ್ತು 58000 ದಿಂಬುಗಳ ಅವಶ್ಯಕತೆ ಇರುತ್ತದೆ.

ಈ ಹಿಂದೆ ಕಾಯರ್ ಹಾಸಿಗೆ ಮತ್ತು ದಿಂಬುಗಳಿಗೆ ಸಂಘದ ವತಿಯಿಂದ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಆದರೆ ಸರ್ಕಾರದ ಆದೇಶದಲ್ಲಿ pocket spring ಹಾಸಿಗೆ ಹಾಗೂ ದಿಂಬುಗಳನ್ನು ಖರೀದಿ ಮಾಡಲು ಆದೇಶ ಹೊರಡಿಸಲಾಗಿದೆ. ಆದ್ದರಿಂದ pocket spring ಹಾಸಿಗೆ ಹಾಗೂ ದಿಂಬುಗಳ ಮಾದರಿಯ ಗುಣಮಟ್ಟವನ್ನು ಪರಿಶೀಲಿಸಲು 3 ಸಂಸ್ಥೆಗಳಿಂದ **Specification**ನ್ನು ಪಡೆದು Bureau of Indian standards ರವರಿಗೆ ಕಳುಹಿಸಲಾಗಿತ್ತು. ಅದರಂತೆ Bureau of Indian standards ರವರು ದಿನಾಂಕ:31.10.2017 ರಂದು **Standred specification**ನ್ನು ನೀಡಿರುತ್ತಾರೆ. ಸದರಿ ಸಂಸ್ಥೆ ನೀಡಿರುವ **Specification**ನ್ನು ಮಾರುಕಟ್ಟೆಯಲ್ಲಿ ಪಡೆದ **Specification**ನ್ನೊಂದಿಗೆ ತಾಳೆ ಮಾಡಿ, ಸೂಕ್ತ **Specification**ನ್ನು ಶಿಫಾರಸ್ಸು ಮಾಡಲು ಸಂಘದ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ದಿನಾಂಕ:09.11.2017 ರಂದು **Specification**ನ್ನು ಅಂತಿಮಗೊಳಿಸಿ ವರದಿ ಸಲ್ಲಿಸಿದೆ. ಸದರಿ ವರದಿಯನ್ವಾಧರಿಸಿ, ವಸತಿ ಶಾಲೆ/ಕಾಲೇಜುಗಳಿಗೆ 54000 ಹಾಸಿಗೆ ಮತ್ತು 58000 ದಿಂಬುಗಳಿಗೆ ಸರ್ಕಾರದ ಆದೇಶದಲ್ಲಿ ನಿಗಧಿಪಡಿಸಿದ ದರಗಳನ್ವಯ ರೂ 2525.00 ಲಕ್ಷಗಳಿಗೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ 61382 pocket

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

spring ಹಾಸಿಗೆ ಹಾಗೂ ದಿಂಬುಗಳನ್ನು ರೂ 2857.00 ಲಕ್ಷಗಳ ಮೊತ್ತಕ್ಕೆ ಒಟ್ಟಾರೆ 115382 pocket spring ಹಾಸಿಗೆ 119382 ದಿಂಬುಗಳನ್ನು ರೂ 5382.83 ಲಕ್ಷಗಳ ಒಟ್ಟು ಮೊತ್ತಕ್ಕೆ ಈ ಳಗಿನಂತೆ ಕಂದಾಯ ವಿಭಾಗವಾರು ದಿನಾಂಕ ಸರ್ಕಾರದ ಆದೇಶ ಸಂಖ್ಯೆ: ಸಕಇ 249 ಪಕವಿ 2017, ದಿನಾಂಕ: 18.07.2017 ರಂದು ಟೆಂಡರ್ ಆಹ್ವಾನಿಸಲಾಗಿದ್ದು, ತಾಂತ್ರಿಕ ಮಾಹಿತಿ ಪರಿಶೀಲನೆಯಲ್ಲಿದೆ.

| SL | DIVISION | No of schools/ hostels | ರೂ.ಲಕ್ಷಗಳಲ್ಲಿ | | | | | | |
|---|---|---|---|---|---|---|---|---|---|
| | | | BED | | | PILLOW | | | Grand total |
| | | | Requierment | Rate | Total Amount | Requierment | Rate | Total Amount | |
| 1 | BELAGAVI | 246 | 22076 | 4360 | 962.51 | 22586 | 295 | 66.63 | 1029.14 |
| 2 | BENGALURU | 374 | 32374 | 4360 | 1411.51 | 33364 | 295 | 98.42 | 1509.93 |
| 3 | KALBURGI | 342 | 32235 | 4360 | 1405.45 | 32968 | 295 | 97.25 | 1502.70 |
| 4 | MYSURU | 316 | 28697 | 4360 | 1251.19 | 30464 | 295 | 89.87 | 1341.06 |
| | Total | | 115382 | | | 119382 | | 352.17 | 5382.83 |

ಸಂಘದ ವಸತಿ ಶಾಲೆ/ಕಾಲೇಜುಗಳಿಗೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ Pocket spring ಹಾಸಿಗೆ ಹಾಗೂ ದಿಂಬುಗಳನ್ನು ಸರಬರಾಜು ಮಾಡಲು ಸಂಘವು ತೆಗೆದುಕೊಂಡ ಕ್ರಮವನ್ನು ಆಡಳಿತ ಮಂಡಳಿಯ ಅವಗಾಹನೆಗೆ ಮಂಡಿಸಿದೆ.

**ತೀರ್ಮಾನ:**
**ಆಡಳಿತ ಮಂಡಳಿಯು ವಿಷಯವನ್ನು ಅವಗಾಹಿಸಿತು.**

ವಿಷಯ ಸಂಖ್ಯೆ: 25
**ವಸತಿ ಶಾಲೆ/ಕಾಲೇಜುಗಳಿಗೆ ಪೀಠೋಪಕರಣಗಳನ್ನು ಸರಬರಾಜು ಮಾಡುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ.ಜಾ/ಪ.ವರ್ಗ ಮತ್ತು ಹಿಂ.ವರ್ಗ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು /ಏಕಲವ್ಯ ಮಾದರಿ ವಸತಿ/ ಕಾಲೇಜುಗಳಿಗೆ ಈ ಕೆಳಕಂಡ ಪೀಠೋಪಕರಣಗಳನ್ನು ಸರಬರಾಜು ಮಾಡಲು ಸಚಿವ ಸಂಪುಟದ ಅನುಮೋದನೆಯೊಂದಿಗೆ ಸರ್ಕಾರದ ಆದೇಶ ಸಂಖ್ಯೆ ಸಕಇ 161 ಮೊದೇಶಾ, ದಿನಾಂಕ: 08.02.2018 ನ್ನು ಹೊರಡಿಸಲಾಗಿದೆ.

**ಕಾರ್ಯನಿರ್ವಾಹಕ ನಿರ್ದೇಶಕರು** **ಅಧ್ಯಕ್ಷರು**

| ಕ್ರ ಸಂ | ವಿವರ | ಬೇಡಿಕೆ | ದರಗಳು | ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|---|
| 1 | SUPPLY & FIXING OF TWO TIER COT. | 23300 | 14950 | 3483.35 |
| 2 | SUPPLY & FIXING OF DESK CUM BENCH. | 8500 | 12600 | 1071.00 |
| 3 | SUPPLY & FIXING OF COMPUTER TABLES. | 6200 | 4900 | 303.80 |
| 4 | SUPPLY & FIXING OF ERGONOMIC REVOLVING COMPUTER CHAIRS. | 6200 | 6700 | 415.40 |
| 5 | SUPPLY & FIXING OF STEEL ALMIRAH DOOR new school. | 600 | 21823 | 130.94 |
| 6 | SUPPLY OF "S" TYPE CHAIR new school. | 1500 | 3492 | 52.38 |
| 7 | SUPPLY & FIXING OF STAFF TABLE new school. | 800 | 12990 | 103.92 |
| 8 | SHOE RACKS. | 4960 | 16810 | 833.78 |
| 9 | CLASS ROOM TABLES. | 4340 | 10480 | 454.83 |
| 10 | LIBRARY RACKS. | 4960 | 15416 | 764.63 |
| 11 | PLASTIC CHAIRS. | 9300 | 725 | 67.42 |
| 12 | PLATE/TUMBLER STAND. | 1240 | 15000 | 186.00 |
| Total | | | | 7867.45 |

ಮೇಲ್ಕಂಡಂತೆ ರೂ **7867.45** ಲಕ್ಷಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ಅನ್ವಯ ಟೆಂಡರ್ ಕರೆಯಲು ಕ್ರಮವಹಿಸಿರುವ ಸಂಘದ ಕ್ರಮವನ್ನು ಆಡಳಿತ ಮಂಡಳಿಯ ಅವಗಾಹನೆಗೆ ಮಂಡಿಸಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ವಿಷಯವನ್ನು ಅವಗಾಹಿಸಿತು.**

**ವಿಷಯ ಸಂಖ್ಯೆ: 26**

**ವಸತಿ ಶಾಲೆ/ಕಾಲೇಜುಗಳಿಗೆ ಡೈನಿಂಗ್ ಟೇಬಲ್‌ಗಳನ್ನು ಸರಬರಾಜು ಮಾಡುವ ಬಗ್ಗೆ.**

ಸರ್ಕಾರದ ಆದೇಶ ಸಂಖ್ಯೆ ಸಕಇ 193 ಪಕವಿ 2016, ದಿನಾಂಕ 08.01.2018ರಲ್ಲಿ ಸಂಘದ ಅಧೀನದಲ್ಲಿ ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ ಜಾತಿ/ಪ ವರ್ಗ/ಹಿಂದುಳಿದ ವರ್ಗಗಳ 150 ವಸತಿ ಶಾಲೆ/ಕಾಲೇಜುಗಳಿಗೆ ಡೈನಿಂಗ್ ಟೇಬಲ್‌ಗಳನ್ನು ಸರಬರಾಜು ಮಾಡಲು ಸಚಿವ ಸಂಪುಟದ ಅನುಮೋದನೆಯೊಂದಿಗೆ ಆದೇಶ ನೀಡಿದೆ. ವಿವರ ಈ ಕೆಳಕಂಡಂತೆ ಇದೆ.

| ವಸತಿ ಶಾಲೆಗಳ ಸಂಖ್ಯೆ | ಅನುಮೋದಿತ ದರ | ಪ್ರಮಾಣ 6 ವಿದ್ಯಾರ್ಥಿಗಳಿಗೆ ಒಂದರಂತೆ ಪ್ರತಿ ಶಾಲೆಗೆ 42 ರಂತೆ | ಒಟ್ಟು ಮೊತ್ತ ರೂ.ಲಕ್ಷಗಳಲ್ಲಿ |
|---|---|---|---|
| 150 | 18429 | 6300 | 1161.03 |

ಮೇಲ್ಕಂಡಂತೆ ವಸತಿ ಕಾಲೇಜುಗಳಿಗೆ ರೂ 1161.03 ಲಕ್ಷಗಳ ಮೌಲ್ಯಕ್ಕೆ ಡೈನಿಂಗ್ ಟೇಬಲ್‌ಗಳನ್ನು ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ಅನ್ವಯ ಟೆಂಡರ್ ಆಹ್ವಾನಿಸಲು ಕ್ರಮವಹಿಸಿರುವ ಸಂಘದ ಕ್ರಮವನ್ನು ಆಡಳಿತ ಮಂಡಳಿಯ ಅವಗಾಹನೆಗೆ ಮಂಡಿಸಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ವಿಷಯವನ್ನು ಅವಗಾಹಿಸಿತು.**

**ಕಾರ್ಯನಿರ್ವಾಹಕ ನಿರ್ದೇಶಕರು** **ಅಧ್ಯಕ್ಷರು**

<u>ವಿಷಯ ಸಂಖ್ಯೆ: 27</u>

**<u>ಸ್ವಂತ ಕಟ್ಟಡದಲ್ಲಿರುವ 71 ವಸತಿ ಶಾಲೆಗಳಿಗೆ 25 KVA ಜನರೇಟರ್ ಸೆಟ್‌ಗಳನ್ನು ಹೆಚ್ಚುವರಿಯಾಗಿ ಶೇ 25 ರಷ್ಟು ಖರೀದಿಸಿ ಅಳವಡಿಸುವ ಬಗ್ಗೆ.</u>**

ಸರ್ಕಾರದ ಆದೇಶ ಸಂಖ್ಯೆ: ಸಕಇ 149 ಮೊದೇಶಾ 2016, ದಿನಾಂಕ:22-12-2016ರಲ್ಲಿ ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 300 ವಸತಿ ಶಾಲಾ/ಕಾಲೇಜುಗಳಿಗೆ 25 ಕೆವಿಎ ಡಿಸೇಲ್ ಜನರೇಟರ್ ಸೆಟ್‌ಗಳನ್ನು ಅಳವಡಿಸಲು ರೂ. 20.70 ಕೋಟಿಗಳ ಮೊತ್ತಕ್ಕೆ ಮೆ: ಸಾಯಿ ಎಂಟರ್ ಪ್ರೈಸಸ್, ಬೆಂಗಳೂರು ಇವರಿಗೆ ಆದೇಶಿಸಿದೆ. ಡಿಸೇಲ್ ಜನರೇಟರ್ ಸೆಟ್‌ಗಳನ್ನು ಅಳವಡಿಸುವ ಕಾಮಗಾರಿ ಮೇಲ್ಕಂಡ ಸಂಸ್ಥೆಯಿಂದ ಪೂರ್ಣಗೊಂಡಿದೆ.

ಮುಂದುವರೆದು ಸಂಘದ ಉಳಿದ ವಸತಿ ಶಾಲಾ/ಕಾಲೇಜುಗಳಿಗೆ ಡಿಸೇಲ್ ಜನರೇಟರ್ ಸೆಟ್‌ಗಳನ್ನು ಅಳವಡಿಸಲು ಉದ್ದೇಶಿಸಿದ್ದು, KTPP Clause 12(5) ರಲ್ಲಿ ಕಾರ್ಯಾದೇಶ ನೀಡಿದ ಪ್ರಮಾಣಕ್ಕಿಂತ ಶೇ.25% ಪ್ರಮಾಣದಷ್ಟು ಹೆಚ್ಚುವರಿಯಾಗಿ ತೆಗೆದುಕೊಳ್ಳಲು ಅವಕಾಶವಿರುತ್ತದೆ. ಸದರಿ ಏಜೆನ್ಸಿಯಿಂದ ಕಾಮಗಾರಿಯನ್ನು ಕೈಗೊಳ್ಳಲು ಸರ್ಕಾರ ಆದೇಶ ಸಂಖ್ಯೆ: ಸಕಇ 161 ಮೊದೇಶಾ 2018, ಬೆಂಗಳೂರು ದಿನಾಂಕ:06.02.2018ರಂತೆ 71 ವಸತಿ ಶಾಲಾ/ಕಾಲೇಜುಗಳಿಗೆ 25 ಕೆವಿಎ ಡಿಸೇಲ್ ಜನರೇಟರ್ ಸೆಟ್‌ಗಳನ್ನು ಅಳವಡಿಸಲು ಮೆ: ಸಾಯಿ ಎಂಟರ್ ಪ್ರೈಸಸ್ ಬೆಂಗಳೂರು ರವರಿಂದ ಖರೀದಿಸಲು ಆದೇಶ ಹೊರಡಿಸಲಾಗಿದೆ. ವಿವರ ಕೆಳಗಿನಂತಿದೆ.

| ವಿವರ | ಹೆಚ್ಚುವರಿಯಾಗಿ ಖರೀದಿಸಬೇಕಿರುವ ವಸತಿ ಶಾಲೆಗಳ ಸಂಖ್ಯೆ | ಪ್ರತಿ ಶಾಲೆಗೆ ರೂ.6.09ಲಕ್ಷಗಳಂತೆ 71 ವಸತಿ ಶಾಲೆಗಳಿಗೆ ಭರಿಸಬೇಕಾದ ಮೊತ್ತ (ರೂ.ಲಕ್ಷಗಳಲ್ಲಿ) |
| --- | --- | --- |
| 25 ಕೆವಿಎ ಡೀಸೆಲ್ ಜನರೇಟರ್ ಸೆಟ್ | 71 | **489.90** |

ಸರ್ಕಾರದ ಆದೇಶದಂತೆ ಮೆ: ಸಾಯಿ ಎಂಟರ್ ಪ್ರೈಸಸ್ ಬೆಂಗಳೂರು ರವರರಿಗೆ ದಿನಾಂಕ:20.02.2018ರಂದು 71 ವಸತಿ ಶಾಲಾ/ಕಾಲೇಜುಗಳಿಗೆ ಮೆ: ಸಾಯಿ ಎಂಟರ್ ಪ್ರೈಸಸ್ ಬೆಂಗಳೂರು ರವರಿಂದ 71 ಸಂಖ್ಯೆಯ 25 ಕೆವಿಎ ಡಿಸೇಲ್ ಜನರೇಟರ್ ಸೆಟ್‌ಗಳನ್ನು ಅಳವಡಿಸಲು ಸರ್ಕಾರದ ಆದೇಶ ಸಂಖ್ಯೆ: ಸಕಇ 149 ಮೊದೇಶಾ 2016, ದಿನಾಂಕ:22-12-2016ರಲ್ಲಿ ಅನುಮೋದಿಸಿದ ದರದನ್ವಯ ಕಾರ್ಯಾದೇಶ ನೀಡಲಾಗಿದ್ದು, ಸಂಘದ ಕ್ರಮವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ ಅನುಮೋದನೆ ಕೋರಿದೆ.

**<u>ತೀರ್ಮಾನ:</u>**

**ಆಡಳಿತ ಮಂಡಳಿಯು ವಿಷಯವನ್ನು ಅವಗಾಹಿಸಿ ಅನುಮೋದಿಸಿತು.**

ಕಾರ್ಯನಿರ್ವಾಹಕ ನಿರ್ದೇಶಕರು

**ಅಧ್ಯಕ್ಷರು**

**ವಿಷಯ ಸಂಖ್ಯೆ: 28**
**ವಸತಿ ಶಾಲೆ/ಕಾಲೇಜುಗಳಿಗೆ ಸೋಲಾರ್ ವಾಟರ್ ಹೀಟರ್‌ಗಳನ್ನು ಅಳವಡಿಸುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ ಜಾತಿ/ಪ ವರ್ಗ/ಹಿಂದುಳಿದ ವರ್ಗಗಳ ಸ್ವಂತ ಕಟ್ಟಡದಲ್ಲಿರುವ ವಸತಿ ಶಾಲೆ/ಕಾಲೇಜುಗಳಿಗೆ ಸೋಲಾರ್ ವಾಟರ್ ಹೀಟರ್‌ಗಳನ್ನು ಅಳವಡಿಸಲು ಈ ಕೆಳಕಂಡಂತೆ ಸರ್ಕಾರದ ಆದೇಶಗಳನ್ನು ಹೊರಡಿಸಲಾಗಿದೆ.

| ಕ್ರ ಸಂ | ಸರ್ಕಾರದ ಆದೇಶ ಸಂಖ್ಯೆ | ಜಿಲ್ಲೆಗಳ ವಿವರ | ವಸತಿ ಶಾಲೆಗಳ ಸಂಖ್ಯೆ | ಸೋಲಾರ್ ವಾಟರ್ ಹೀಟರ್‌ಗಳ ಸಂಖ್ಯೆ | ಅನುಮೋದಿತ ಮೊತ್ತ ರೂ(ಲಕ್ಷಗಳಲ್ಲಿ) |
|---|---|---|---|---|---|
| 1 | ಸರ್ಕಾರದ ಆದೇಶ ಸಂಖ್ಯೆ ಸಕಇ 99 ಮೊದೇಶಾ 2018, ದಿನಾಂಕ 27.01.2018 | ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ, ತುಮಕೂರು | 48 | 290 | 324.80 |
| 2 | ಸರ್ಕಾರದ ಆದೇಶ ಸಂಖ್ಯೆ ಸಕಇ 96 ಮೊದೇಶಾ 2018, ದಿನಾಂಕ 27.01.2018 | ಬೀದರ್, ಕಲಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ | 54 | 445 | 498.40 |
| 3 | ಸರ್ಕಾರದ ಆದೇಶ ಸಂಖ್ಯೆ ಸಕಇ 100 ಮೊದೇಶಾ 2018, ದಿನಾಂಕ 27.01.2018 | ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಹಾವೇರಿ, ಮತ್ತು ಗದಗ | 55 | 350 | 392.00 |
| 4 | ಸರ್ಕಾರದ ಆದೇಶ ಸಂಖ್ಯೆ ಸಕಇ 95 ಮೊದೇಶಾ 2018, ದಿನಾಂಕ 27.01.2018 | ಮೈಸೂರು, ಮಂಡ್ಯ, ಚಾಮರಾಜನಗರ | 35 | 240 | 268.80 |
| 5 | ಸರ್ಕಾರದ ಆದೇಶ ಸಂಖ್ಯೆ ಸಕಇ 98 ಮೊದೇಶಾ 2018, ದಿನಾಂಕ 27.01.2018 | ಬೆಳಗಾವಿ, ಬಾಗಲಕೋಟೆ, ಧಾರವಾಡ, ಮತ್ತು ಉತ್ತರ ಕನ್ನಡ | 62 | 415 | 464.80 |
| | **ಒಟ್ಟು** | | **254** | **1740** | **1948.80** |

ಮೇಲ್ಕಂಡ ಸರ್ಕಾರದ ಆದೇಶಗಳಂತೆ, ಸ್ವಂತ ಕಟ್ಟಡದಲ್ಲಿರುವ 254 ವಸತಿ ಶಾಲೆಗಳಲ್ಲಿ 1740 ಸೋಲಾರ್ ವಾಟರ್ ಹೀಟರ್ ಅಳವಡಿಸಲು ರೂ.1948.80 ಲಕ್ಷಗಳ ಮೊತ್ತಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ ಅನ್ವಯ ದಿನಾಂಕ 02.02.2018 ರಂದು ಟೆಂಡರ್ ಆಹ್ವಾನಿಸಲಾಗಿದೆ. ವಿಷಯವನ್ನು ಆಡಳಿತ ಮಂಡಳಿಯ ಅವಗಾಹನೆಗೆ ಮಂಡಿಸಿದೆ.

**ತೀರ್ಮಾನ:**
**ಆಡಳಿತ ಮಂಡಳಿಯು ವಿಷಯವನ್ನು ಅವಗಾಹಿಸಿತು.**

ಕಾರ್ಯನಿರ್ವಾಹಕ ನಿರ್ದೇಶಕರು

**ಅಧ್ಯಕ್ಷರು**

<u>ವಿಷಯ ಸಂಖ್ಯೆ: 29</u>

<u>ವಸತಿ ಶಾಲೆ/ಕಾಲೇಜುಗಳಿಗೆ ಡಸ್ಟ್ ಬಿನ್‌ಗಳನ್ನು ಸರಬರಾಜು ಮಾಡುವ ಬಗ್ಗೆ:</u>

ಸರ್ಕಾರದ ಆದೇಶ ಸಂಖ್ಯೆ ಸಕಇ 607 ಮೊದೇಶಾ 2017, ದಿನಾಂಕ 30.11.2017ರಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 200 ವಸತಿ ಶಾಲೆಗಳಲ್ಲಿ ಪ್ರಾಯೋಗಿಕವಾಗಿ, ಪ್ರತಿ ಶಾಲೆಗೆ 2 Floor Mounted Garbage Bin ಗಳನ್ನು ಡಿಜಿಎಸ್&ಡಿ ದರಗಳಲ್ಲಿ ಖರೀದಿಸಿ ಅಳವಡಿಸಲು ರೂ 76,79,880/- ಮೊತ್ತಕ್ಕೆ ಆದೇಶವನ್ನು ಹೊರಡಿಸಲಾಗಿದೆ. ಅದರಂತೆ ಸಂಘವು ಡಿಜಿಎಸ್&ಡಿ ಹೊಂದಿರುವ ಸಂಸ್ಥೆಯಾದ ವಿದ್ಯಾ ವಿ ಮತ್ತು ಇಂಡಸ್ಟ್ರೀಸ್ ಪ್ರೈ, ಲಿ ರವರಿಗೆ ದಿನಾಂಕ 30.11.2017 ರಂದು ಕಾರ್ಯಾದೇಶ ನೀಡಲಾಗಿದೆ.

ಮೇಲ್ಕಂಡಂತೆ ಸಂಘವು ತೆಗೆದುಕೊಂಡ ಕ್ರಮವನ್ನು ಆಡಳಿತ ಮಂಡಳ ಸಭೆಯ ಅವಗಾಹನೆಗೆ ಮಂಡಿಸಿದೆ.

<u>ತೀರ್ಮಾನ:</u>

**ಆಡಳಿತ ಮಂಡಳಿಯು ಸರ್ಕಾರದ ಆದೇಶ ಸಂಖ್ಯೆ ಸಕಇ 607 ಮೊದೇಶಾ 2017, ದಿನಾಂಕ 30.11.2017ರಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 200 ವಸತಿ ಶಾಲೆಗಳಿಗೆ ತಲಾ 2 Floor Mounted Garbage Bin ಗಳನ್ನು ಖರೀದಿಸಲು ಅನುಮತಿಸಿರುವುದನ್ನು ಅವಗಾಹಿಸಿ ಸಂಘದ ಕ್ರಮವನ್ನು ಅನುಮೋದಿಸಿತು.**

<u>ವಿಷಯ ಸಂಖ್ಯೆ: 30</u>

<u>20 ವಸತಿ ಶಾಲೆ/ಕಾಲೇಜುಗಳಿಗೆ ಕಂಪ್ಯೂಟರ್ ಲ್ಯಾಬ್‌ಗಳನ್ನು ಸ್ಥಾಪಿಸುವ ಬಗ್ಗೆ.</u>

ಸರ್ಕಾರದ ಆದೇಶ ಸಂಖ್ಯೆ ಸಕಇ 605 ಮೊದೇಶಾ 2017, ದಿನಾಂಕ 30.11.2017 ರಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ಬರುವ ಹೊಸದಾಗಿ ನಿರ್ಮಾಣವಾಗಿರುವ 20 ವಸತಿ ಶಾಲೆಗಳಲ್ಲಿ ಪ್ರಾಯೋಗಿಕವಾಗಿ ಕಂಪ್ಯೂಟರ್ ಲ್ಯಾಬ್‌ಗಳನ್ನು ಪ್ರತಿ ಶಾಲೆಗೆ ರೂ 20,97,458/-ಗಳಂತೆ, ಒಟ್ಟು ರೂ. 4.95 ಕೋಟಿಗಳ ಮೊತ್ತಕ್ಕೆ ಕೆಟಿಪಿಪಿ ನಿಯಮ 4(ಜಿ) ರನ್ವಯ ಮೆ॥ ಕಿಯೋನಿಕ್ಸ್ ಸಂಸ್ಥೆಯಿಂದ ಕಾರ್ಯವನ್ನು ಕೈಗೊಳ್ಳಲು ಆದೇಶವನ್ನು ಹೊರಡಿಸಲಾಗಿದೆ. ಅದರಂತೆ ಸಂಘವು ದಿನಾಂಕ 20.12.2017 ರಂದು ಕಾರ್ಯಾದೇಶ ನೀಡಲಾಗಿದೆ. ಈ ಕಾರ್ಯಕ್ಕಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಸಮಾಜ ಕಲ್ಯಾಣ ಇಲಾಖೆರವರಿಂದ ಕಡತದಲ್ಲಿ

ಕಾರ್ಯನಿರ್ವಾಹಕ ನಿರ್ದೇಶಕರು

**ಅಧ್ಯಕ್ಷರು**

ಅನುಮೋದನೆ ಪಡೆದು ಶೇ 5 ರಷ್ಟು ಭದ್ರತಾ ಠೇವಣಿಯನ್ನು ಕಡಿತಗೊಳಿಸಿ ರೂ 4,70,25,000/- ಗಳನ್ನು ಮೆ॥ ಕಿಯೋನಿಕ್ಸ್ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.

ಮೇಲ್ಕಂಡಂತೆ, ಸಂಘವು ತೆಗೆದುಕೊಂಡಿರುವ ಕ್ರಮವನ್ನು ಆಡಳಿತ ಮಂಡಳಿಯ ಅವಗಾಹನೆಗೆ ಸಲ್ಲಿಸಿದೆ.

ತೀರ್ಮಾನ:

**ನೋಡಲ್ ಏಜೆನ್ಸಿ ಸಲಹೆಗಾರರು, ಪ.ಜಾತಿ/ಪ.ವರ್ಗ ಉಪಯೋಜನೆ, ಸಮಾಜ ಕಲ್ಯಾಣ ಇಲಾಖೆರವರು ವಿಷಯದ ಬಗ್ಗೆ ಮಾತಾನಾಡುತ್ತಾ, ವಸತಿ ಶಾಲೆಗಳಲ್ಲಿ ಈಗಾಗಲೇ ಸರಬರಾಜು ಮಾಡಲಾಗಿರುವ ಕಂಪ್ಯೂಟರ್‌ಗಳು ಸದ್ಬಳಕೆಯಾಗುತ್ತಿಲ್ಲವೆಂದು ಸಭೆಗೆ ತಿಳಿಸಿದರು. ಕಂಪ್ಯೂಟರ್ ಲ್ಯಾಬ್‌ಗಳ ಸ್ಥಾಪನೆಯು ವಿದ್ಯಾರ್ಥಿಗಳಿಗೆ ಉಪಯೋಗವಾಗುತ್ತಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು, ಸದರಿಯವರ ಅಭಿಪ್ರಾಯದಂತೆ ಅಗತ್ಯ ಕ್ರಮವಹಿಸಬೇಕೆಂದು ಸಂಘದ ಕಾರ್ಯನಿರ್ವಾಹಕ ನಿರ್ದೇಶಕರಿಗೆ ಸೂಚಿಸಲಾಯಿತು ಹಾಗೂ ಸಂಘವು ತೆಗೆದುಕೊಂಡ ಕ್ರಮವನ್ನು ಆಡಳಿತ ಮಂಡಳಿಯು ಅನುಮೋದಿಸಿತು.**

ವಿಷಯ ಸಂಖ್ಯೆ:31

ವಸತಿ ಶಾಲೆಗಳಿಗೆ ಸ್ಟೀಂ ಕುಕಿಂಗ್ ರೇಂಜ್‌ಗಳನ್ನು ಅಳವಡಿಸುವ ಬಗ್ಗೆ.

ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 211 ವಸತಿ ಶಾಲೆಗಳಿಗೆ LPG ಅನಿಲ ಆಧಾರಿತ ಸ್ಟೀಂ ಬಾಯ್ಲರ್‌ಗಳನ್ನು ಸರಬರಾಜು ಮಾಡಿ, ಅಳವಡಿಸುವ ಸಲುವಾಗಿ, ಈ ಕೆಳಕಂಡಂತೆ ಕಂದಾಯ ವಿಭಾಗವಾರು ಸರ್ಕಾರದ ಆದೇಶಗಳನ್ನು ಹೊರಡಿಸಲಾಗಿದೆ

| ಕ್ರ ಸಂ | ಸರ್ಕಾರದ ಆದೇಶ ಸಂಖ್ಯೆ | ಕಂದಾಯ ವಿಭಾಗ | ವಸತಿ ಶಾಲೆಗಳ ಸಂಖ್ಯೆ | ಅನುಮೋದಿತ ಮೊತ್ತ (ರೂ ಲಕ್ಷಗಳಲ್ಲಿ) |
|---|---|---|---|---|
| 1 | ಸರ್ಕಾರದ ಆದೇಶ ಸಂಖ್ಯೆ ಸಕಇ 126 ಮೊದೇಶಾ 2018, ದಿನಾಂಕ 30.01.2018 | ಬೆಂಗಳೂರು | 62 | 326.29 |
| 2 | ಸರ್ಕಾರದ ಆದೇಶ ಸಂಖ್ಯೆ ಸಕಇ 127 ಮೊದೇಶಾ 2018, ದಿನಾಂಕ 30.01.2018 | ಬೆಳಗಾವಿ | 53 | 278.93 |
| 3 | ಸರ್ಕಾರದ ಆದೇಶ ಸಂಖ್ಯೆ ಸಕಇ 128 ಮೊದೇಶಾ 2018, ದಿನಾಂಕ 30.01.2018 | ಮೈಸೂರು | 52 | 273.67 |
| 4 | ಸರ್ಕಾರದ ಆದೇಶ ಸಂಖ್ಯೆ ಸಕಇ 129 ಮೊದೇಶಾ 2018, ದಿನಾಂಕ 30.01.2018 | ಕಲಬುರ್ಗಿ | 44 | 231.56 |
| | ಒಟ್ಟು | | **211** | **1110.45** |

ಕಾರ್ಯನಿರ್ವಾಹಕ ನಿರ್ದೇಶಕರು

**ಅಧ್ಯಕ್ಷರು**

ಮೇಲ್ಕಂಡ ಸರ್ಕಾರದ ಆದೇಶಗಳನ್ವಯ, 211 ಸ್ವಂತ ಕಟ್ಟಡದಲ್ಲಿರುವ ವಸತಿ ಶಾಲೆಗಳಲ್ಲಿ LPG ಅನಿಲ ಆಧಾರಿತ ಸ್ಟೀಂ ಬಾಯ್ಲರ್‌ಗಳನ್ನು ಸರಬರಾಜು ಮಾಡಿ, ಅಳವಡಿಸುವ ಸಲುವಾಗಿ ಒಟ್ಟು ರೂ. 1110.45 ಲಕ್ಷಗಳ ಮೊತ್ತಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ಅನ್ವಯ ದಿನಾಂಕ 30.01.2018 ರಂದು ಕಂದಾಯ ವಿಭಾಗವಾರು ಟೆಂಡರ್ ಆಹ್ವಾನಿಸಲಾಗಿದೆ.

ಮೇಲ್ಕಂಡಂತೆ ಸಂಘವು ಕೈಗೊಂಡಿರುವ ಕ್ರಮವನ್ನು ಆಡಳಿತ ಮಂಡಳಿ ಸಭೆಯ ಅವಗಾಹನೆಗೆ ಸಲ್ಲಿಸಿದೆ.

**ತೀರ್ಮಾನ:**
**ವಿಷಯವನ್ನು ಆಡಳಿತ ಮಂಡಳಿಯು ಅವಗಾಹಿಸಿತು.**

**ವಿಷಯ ಸಂಖ್ಯೆ: 32**
**2016-17 ನೇ ಸಾಲಿನಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ರವರು ಸರಬರಾಜು ಮಾಡಿರುವ ಜಮಖಾನ, ಬೆಡ್‌ಶೀಟ್, ಬೆಡ್ ಸ್ಪ್ರೆಡ್ ಬಿಲ್ಲುಗಳ ಪಾವತಿಯ ಬಗ್ಗೆ.**

2016-17 ನೇ ಸಾಲಿಗೆ 301 ವಸತಿಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಅಗತ್ಯವಾದ ಜಮಖಾನ, ಬೆಡ್‌ಶೀಟ್, ಬೆಡ್ ಸ್ಪ್ರೆಡ್‌ಗಳನ್ನು ಮೆ.ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಬೆಂಗಳೂರು ರವರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ನಿಯಮ 4(ಹೆಚ್) ರಲ್ಲಿ ನೀಡಲ್ಪಟ್ಟಿರುವ ವಿನಾಯಿತಿಯ ಅನ್ವಯ ಜಮಖಾನ, ಬೆಡ್‌ಶೀಟ್, ಬೆಡ್ ಸ್ಪ್ರೆಡ್, ಖರೀದಿಸಲು ರೂ.486.30 ಲಕ್ಷಗಳ ಮೊತ್ತಕ್ಕೆ ದಿನಾಂಕ: 29.03.2016 ರಂದು ಕಾರ್ಯಾದೇಶ ನೀಡಲಾಗಿದೆ. ಕಡತದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರಿಂದ ಅನುಮೋದನೆ ಪಡೆದು, ಸರಬರಾಜು ಆದೇಶವನ್ನು ನೀಡಲಾಗಿದೆ.

ವಸತಿ ಶಾಲೆಗಳಿಗೆ ಸರಬರಾಜಾಗಿರುವ ಜಮಖಾನ, ಬೆಡ್‌ಶೀಟ್, ಬೆಡ್‌ಸ್ಪ್ರೆಡ್‌ಗಳು, ಕೆಹೆಚ್‌ಡಿಸಿಯಿಂದ ನೀಡಿರುವ ಮಾದರಿಗನುಗುಣವಾಗಿ ಇಲ್ಲದಿರುವುದಾಗಿ ಹಲವಾರು ವಸತಿ ಶಾಲೆಗಳ ಪ್ರಾಂಶುಪಾಲರುಗಳು ತಿಳಿಸಿರುತ್ತಾರೆ. ಆದ್ದರಿಂದ ಸರಬರಾಜಾಗಿರುವ ಜಮಖಾನ, ಬೆಡ್‌ಶೀಟ್, ಬೆಡ್‌ಸ್ಪ್ರೆಡ್‌ಗಳನ್ನು ಗುಣಮಟ್ಟ ಪರಿಶೀಲನೆಗಾಗಿ ಸಂಘದ ಕಾರ್ಯನಿರ್ವಾಹಕ ನಿರ್ದೇಶಕರ ಸೂಚನೆಯ ಮೇರೆಗೆ ತುಮಕೂರು ಮತ್ತು ಚಾಮರಾಜನಗರ ಜಿಲ್ಲೆಗಳ ವಸತಿ ಶಾಲೆಗಳಿಂದ ಪಡೆದು ಅವುಗಳನ್ನು ಪರಿಶೀಲಿಸಿ, ಮೆ॥ ಕೆಹೆಚ್‌ಡಿಸಿ ಸಂಸ್ಥೆಯ ಪ್ರತಿನಿಧಿಗಳೊಂದಿಗೆ ಚರ್ಚಿಸಿ, ಸಂಘದ ಕಛೇರಿಗೆ ಜಮಖಾನ, ಬೆಡ್‌ಶೀಟ್ ಮತ್ತು ಬೆಡ್‌ಸ್ಪ್ರೆಡ್‌ಗಳ ಮಾದರಿಗಳನ್ನು ಸಲ್ಲಿಸುವ ಸಂದರ್ಭದಲ್ಲಿ, ಕಣ್ತಪ್ಪಿನಿಂದ ಬೇರೆ ಮಾದರಿಗಳನ್ನು ಸಲ್ಲಿಸಿರುವುದಾಗಿ ಮತ್ತು ಸದರಿ

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ಮಾದರಿಗಳ ಬದಲಿಗೆ ಕಾರ್ಯಾದೇಶದಲ್ಲಿ ನೀಡಿರುವ specification ಗಳಿಗೆ ಅನುಗುಣವಾಗಿರುವ ಜಮಖಾನ, ಬೆಡ್‌ಶೀಟ್ ಮತ್ತು ಬೆಡ್‌ಸ್ಪ್ರೆಡ್‌ಗಳ ಮಾದರಿಗಳನ್ನು ಈ ಕಛೇರಿಗೆ ಸಲ್ಲಿಸುವುದಾಗಿ ದಿ:09.11.2016ರ ಪತ್ರದಲ್ಲಿ ತಿಳಿಸಿರುತ್ತಾರೆ.

ಮೇಲ್ಕಂಡ ಹಿನ್ನಲೆಯಲ್ಲಿ ಸಂಘವು ದಿನಾಂಕ 28.11.2016ರ ಪತ್ರದಲ್ಲಿ ಸಂಘವು ಈಗಾಗಲೇ ನೀಡಿರುವ ಕಾರ್ಯಾದೇಶದನ್ವಯ ಮಾದರಿಗಳನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು. ಅದರಂತೆ, ಮೆ॥ ಕೆಹೆಚ್‌ಡಿಸಿ ಸಂಸ್ಥೆಯವರು ದಿ:29.11.2016 ರಂದು 3 ಜೊತೆ ಜಮಖಾನ, ಬೆಡ್‌ಶೀಟ್ ಮತ್ತು ಬೆಡ್‌ಸ್ಪ್ರೆಡ್‌ಗಳ ಮಾದರಿಗಳನ್ನು ಸಂಘದ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿಯವರು ಸಲ್ಲಿಸಿರುವ ಜಮಖಾನ, ಬೆಡ್‌ಶೀಟ್ ಮತ್ತು ಬೆಡ್‌ಸ್ಪ್ರೆಡ್‌ಗಳ ಗುಣಮಟ್ಟವನ್ನು ಧೃಡಪಡಿಸಿಕೊಳ್ಳಲು ಸೆಂಟ್ರಲ್ ಸಿಲ್ಕ್ ಬೋರ್ಡ್ ಬೆಂಗಳೂರು ಇಲ್ಲಿಗೆ ಸಲ್ಲಿಸಿ ವರದಿಯನ್ನು ಪಡೆಯಲಾಗಿದೆ. ಸದರಿ ವರದಿಯನ್ನು ಪರಿಶೀಲಿಸಲಾಗಿ ಸಂಘಕ್ಕೆ ಸಲ್ಲಿಸಿರುವ ಮಾದರಿಗಳು ಕಾರ್ಯಾದೇಶದಲ್ಲಿನ specification ಗಳಿಗೆ ಅನುಗುಣವಾಗಿರುವುದಾಗಿ ತಿಳಿದು ಬಂದಿರುತ್ತದೆ.

ಏತನ್ಮಧ್ಯೆ ಮೆ॥ ಕೆ.ಹೆಚ್.ಡಿ.ಸಿ ಸಂಸ್ಥೆಯವರಿಂದ ವಸತಿ ಶಾಲೆಗಳಿಗೆ ಸರಬರಾಜಾಗಿರುವ ಜಮಖಾನ, ಬೆಡ್‌ಶೀಟ್ ಮತ್ತು ಬೆಡ್‌ಸ್ಪ್ರೆಡ್‌ಗಳ ಗುಣಮಟ್ಟದ ಬಗ್ಗೆ ಅಂಬೇಡ್ಕರ್ ಯುವ ಸೇನೆ (ರಿ) ರವರು ಹಿಂದಿನ ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆರವರು ಸಲ್ಲಿಸಿರುವ ಮನವಿಯ ಮೇರೆಗೆ ಸರ್ಕಾರದ ಪತ್ರ ಸಂ: ಸಕಇ 395 ಮೊದೇಶಾ 2016, ದಿ:30.12.2016 ರಲ್ಲಿ ವಿಷಯದ ಬಗ್ಗೆ ವಿವರವಾದ ತನಿಖೆಯನ್ನು ನಡೆಸಿ, ವರದಿಯನ್ನು ನೀಡಲು ಆದೇಶಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸರಬರಾಜನ್ನು ಸ್ಥಗಿತಗೊಳಿಸುವಂತೆ ಮೆ:ಕೆಹೆಚ್‌ಡಿಸಿ ಸಂಸ್ಥೆಗೆ ಮೌಖಿಕವಾಗಿ ಸೂಚಿಲಾಗಿತ್ತು.

ಮುಂದುವರಿದು, ಮೆ॥ ಕೆ.ಹೆಚ್.ಡಿ.ಸಿ ಸಂಸ್ಥೆಯವರಿಂದ ಸರಬರಾಜಾಗಿರುವ ಜಮಖಾನ, ಬೆಡ್‌ಶೀಟ್ ಮತ್ತು ಬೆಡ್‌ಸ್ಪ್ರೆಡ್‌ಗಳಿಂದ ಆಯ್ಕೆ (Randomly) ಮಾಡಿದ ಒಂದು ಮಾದರಿ ಸೆಟ್‌ನ್ನು ಖರೀದಿ ಆದೇಶದಲ್ಲಿ ನೀಡಲ್ಪಟ್ಟ specification ಗಳ ವಿವರಗಳೊಂದಿಗೆ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ರವರಿಗೆ ದಿನಾಂಕ 10/01/2017 ರಂದು ಕಳುಹಿಸಿ ಸದರಿ ಮಾದರಿಗಳನ್ನು ಪರೀಕ್ಷಿಸಿ ಗುಣಮಟ್ಟದ ವರದಿ ನೀಡುವಂತೆ ಕೋರಲಾಗಿತ್ತು.

ಆಯುಕ್ತರು ಜವಳಿ ಇಲಾಖೆ ರವರು, ಪತ್ರ ಸಂಖ್ಯೆ ಕೈಜಇ/ಜವಳಿ/ತಪಾಸಣೆ/ಕವಶಿಸಸ/2016-17 ದಿನಾಂಕ 09/02/2017 ರಲ್ಲಿ ಸದರಿ ಜಮಖಾನ, ಬೆಡ್‌ಶೀಟ್ ಮತ್ತು ಬೆಡ್‌ಸ್ಪ್ರೆಡ್‌ಗಳನ್ನು The

ಕಾರ್ಯನಿರ್ವಾಹಕ ನಿರ್ದೇಶಕರು ಅಧ್ಯಕ್ಷರು

Director, Central Silk Technological Research Institute Bangalore ರವರಿಂದ ಪರಿಶೀಲಿಸಿ, ವಿವರವಾದ ವರದಿಯನ್ನು ನೀಡಿರುತ್ತಾರೆ. ಸದರಿ ವರದಿಯಲ್ಲಿ ಸಂಘದ ಅನುಮೋದಿತ ಮಾದರಿಗಳು ಹಾಗೂ ಮೆ|| ಕೆ.ಹೆಚ್.ಡಿ.ಸಿ ಸಂಸ್ಥೆಯವರಿಂದ ಸರಬರಾಜಾಗಿರುವ ಜಮಖಾನ, ಬೆಡ್‌ಶೀಟ್ ಮತ್ತು ಬೆಡ್‌ಸ್ಪ್ರೆಡ್‌ಗಳ ಗುಣಮಟ್ಟವು, ಮೆ|| ಕೆ.ಹೆಚ್.ಡಿ.ಸಿ ಸಂಸ್ಥೆಯವರಿಗೆ ಖರೀದಿ ಆದೇಶಗಳ ಪ್ರಕಾರ ನೀಡಲಾಗಿರುವ Specification ಗಳ ಮಿತಿಯೊಳಗಿರುತ್ತದೆ. ಎಂದು ಅಭಿಪ್ರಾಯ ನೀಡಲಾಗಿದೆ.

ಅಲ್ಲದೇ ದಿನಾಂಕ:06-04-2018ರಲ್ಲಿ ಈ ವಿಚಾರವಾಗಿ ಸ್ಥಳೀಯ ದೂರದರ್ಶನ ಚಾನೆಲ್ ಒಂದರ ವರದಿಯನ್ನು ಆಧರಿಸಿ, ಕರ್ನಾಟಕ ಭ್ರಷ್ಟಾಚಾರ ನಿಗ್ರಹ ದಳವು ಸಹ ತನಿಖೆಯನ್ನು ಕೈಗೊಂಡಿದ್ದರಿಂದ ದಿನಾಂಕ 06.06.2017 ರಂದು ಪ್ರಸ್ತುತ ಖರೀದಿ ಪ್ರಕ್ರಿಯೆಯನ್ನು ರದ್ದುಪಡಿಸಲಾಗಿದೆ.

ಮೆ|| ಕೆ.ಹೆಚ್.ಡಿ.ಸಿ ಸಂಸ್ಥೆಯು 85 ಶಾಲೆಗಳಿಗೆ ಜಮಖಾನ, ಬೆಡ್‌ಶೀಟ್, ಬೆಡ್ ಸ್ಪ್ರೆಡ್‌ಗಳನ್ನು ಸರಬರಾಜು ಮಾಡಲಾಗಿದ್ದು, ಸಾಮಾಗ್ರಿಗಳ ಗುಣಮಟ್ಟದ ಬಗ್ಗೆ ಆಯುಕ್ತರು ಜವಳಿ ಇಲಾಖೆ ರವರು, ಪತ್ರ ಸಂಖ್ಯೆ ಕೈಜಇ/ಜವಳಿ/ತಪಾಸಣೆ/ಕವಶಿಸಸ/2016-17 ದಿನಾಂಕ 09/02/2017 ರಲ್ಲಿ ಸ The Director, Central Silk Technological Research Institute Bangalore ರವರಿಂದ ಪರಿಶೀಲಿಸಿ, ಸಂಘದ ಅನುಮೋದಿತ ಮಾದರಿಗಳು ಹಾಗೂ ಮೆ|| ಕೆ.ಹೆಚ್.ಡಿ.ಸಿ ಸಂಸ್ಥೆಯವರಿಂದ ಸರಬರಾಜಾಗಿರುವ ಜಮಖಾನ, ಬೆಡ್‌ಶೀಟ್ ಮತ್ತು ಬೆಡ್‌ಸ್ಪ್ರೆಡ್‌ಗಳ ಗುಣಮಟ್ಟವು, ಮೆ|| ಕೆ.ಹೆಚ್.ಡಿ.ಸಿ ಸಂಸ್ಥೆಯವರಿಗೆ ಖರೀದಿ ಆದೇಶಗಳ ಪ್ರಕಾರ ನೀಡಲಾಗಿರುವ Specification ಗಳ ಮಿತಿಯೊಳಗಿರುತ್ತವೆಯೆಂದು ತಿಳಿಸಿರುತ್ತಾರೆ ಹಾಗೂ ಪ್ರಕರಣವು ಕರ್ನಾಟಕ ಭ್ರಷ್ಟಾಚಾರ ನಿಗ್ರಹ ದಳದಲ್ಲಿ ಮುಕ್ತಾಯವಾಗಿರುತ್ತದೆ.

ಮೇಲ್ಕಂಡ ಹಿನ್ನೆಲೆಯಲ್ಲಿ ಮೆ: ಕೆಹೆಚ್‌ಡಿಸಿ ಸಂಸ್ಥೆಯಿಂದ 85 ವಸತಿ ಶಾಲೆಗಳಿಗೆ ಪೂರೈಕೆಯಾಗಿರುವ ಜಮಾಖಾನ, ಬೆಡ್‌ಶೀಟ್ ಮತ್ತು ಬೆಡ್‌ಸ್ಪ್ರೆಡ್‌ಗಳ ಬಾಬ್ತು ರೂ. 141.00 ಲಕ್ಷಗಳನ್ನು ಪಾವತಿ ಮಾಡಲು ಆಡಳಿತ ಮಂಡಳಿಯ ಮುಂದೆ ಮಂಡಿಸಿ, ಅನುಮೋದನೆ ಮಂಡಿಸಿದೆ.

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

**<u>ತೀರ್ಮಾನ:</u>**

**ಸರ್ಕಾರದ ಆದೇಶದನ್ವಯ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು 2016-17ನೇ ಸಾಲಿಗೆ ಈಗಾಗಲೇ 85 ವಸತಿ ಶಾಲೆಗಳಿಗೆ ಜಮಾಖಾನ, ಬೆಡ್‌ಶೀಟ್ ಮತ್ತು ಬೆಡ್‌ಸ್ಪ್ರೆಡ್‌ಗಳನ್ನು ಸರಬರಾಜು ಮಾಡಿದ್ದು, ಇವುಗಳ ಗುಣಮಟ್ಟವು ನಿಗದಿಪಡಿಸಿದ ವಿನ್ಯಾಸಕ್ಕೆ ಅನುಗುಣವಾಗಿರುವುದಾಗಿ M/s. Central Silk Technological Research Institute Bangalore ರವರು ವರದಿ ನೀಡಿರುವುದನ್ನು ಸಭೆಯು ಅವಲೋಕಿಸಿತು ಹಾಗೂ ಸರಬರಾಜು ಬಾಬ್ತು ರೂ.141.00 ಲಕ್ಷಗಳನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಬಿಡುಗಡೆ ಮಾಡಲು ಅನುಮೋದಿಸಿತು.**

<u>ವಿಷಯ ಸಂಖ್ಯೆ:33</u>

<u>ಜಿಲ್ಲಾ ಮಟ್ಟದಲ್ಲಿ ಸಂಘದ ಸಮನ್ವಯಾಧಿಕಾರಿ ಹುದ್ದೆಗಳನ್ನು ಸೃಜಿಸುವ ಬಗ್ಗೆ.</u>

ಜಂಟಿ ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭಾ ಸಚಿವಾಲಯ ಇವರು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆರವರಿಗೆ ದಿನಾಂಕ:15.12.2017 ರಂದು ಪತ್ರ ಬರೆದು ಸದರಿ ಪತ್ರದಲ್ಲಿ ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಸಭೆಯಲ್ಲಿ ಹಲವಾರು ಬಾರಿ ಜಿಲ್ಲಾಮಟ್ಟದ ಅಧಿಕಾರಿ ಹುದ್ದೆಗಳನ್ನು ಹೊಸದಾಗಿ ಸೃಜಿಸಿ ಪದೋನ್ನತಿ ನೀಡುವ ಸಂಬಂಧ ಚರ್ಚಿಸಿರುವುದಾಗಿ ತಿಳಿಸಿ ಈ ಬಗ್ಗೆ ಕ್ರಮಕೈಗೊಳ್ಳುವಂತೆ ವಿನಂತಿಸಿರುತ್ತಾರೆ.

ಪ್ರಸ್ತುತ ಸಂಘದ ಅಧೀನದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಒಟ್ಟು 818 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, 2017-18ನೇ ಸಾಲಿನಲ್ಲಿ ವಿಧ್ಯಾರ್ಥಿಗಳ ಸಂಖ್ಯಾ ಬಲವು 143060 ಆಗಿದೆ. ಮುಂಬರುವ ವರ್ಷಗಳಲ್ಲಿ ಹೊಸದಾಗಿ ಪ್ರಾರಂಭಿಸಲಾದ ವಸತಿ ಶಾಲೆಗಳಲ್ಲಿ 7, 8, 9 & 10 ನೇ ತರಗತಿಗಳನ್ನು ಪ್ರಾರಂಭಿಸಿದಾಗ ಎಲ್ಲಾ ವಸತಿ ಶಾಲೆ/ಕಾಲೇಜುಗಳ ಸಂಖ್ಯಾಬಲವು 207100 ಗಳಾಗುತ್ತವೆ.

ಪ್ರಸ್ತುತ ಜಿಲ್ಲಾ ಮಟ್ಟದಲ್ಲಿ ವಸತಿ ಶಾಲೆಗಳ ಉಸ್ತುವಾರಿಯು ಜಿಲ್ಲಾ ಮಟ್ಟದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಅಧಿಕಾರಿಗಳ ವ್ಯಾಪ್ತಿಗೆ ಒಳಪಟ್ಟಿದೆ. ಈ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಗಳ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಪ್ರಾಧಾನ್ಯತೆ ನೀಡುವುದರ ಜೊತೆಗೆ ಜಿಲ್ಲಾ ಪಂಚಾಯತಿ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಜಿಲ್ಲಾ ಪಂಚಾಯತಿಯು ಸೂಚಿಸುವ ಎಲ್ಲಾ ಕಾರ್ಯಕ್ರಮಗಳನ್ನು ನಿರ್ವಹಿಸಬೇಕಾಗಿದ್ದು ವಸತಿ ಶಾಲೆಗಳ ಉಸ್ತುವಾರಿ ಬಗ್ಗೆ ವೈಯಕ್ತಿಕ ಗಮನ ಹರಿಸಲು ಸಾಧ್ಯವಾಗುತ್ತಿಲ್ಲ.

**ಕಾರ್ಯನಿರ್ವಾಹಕ ನಿರ್ದೇಶಕರು** **ಅಧ್ಯಕ್ಷರು**

ಈ ಹಿನ್ನೆಲೆಯಲ್ಲಿ ವಸತಿ ಶಾಲೆಗಳ ಸಮಗ್ರ ಉಸ್ತುವಾರಿ, ವಸತಿ ಶಾಲೆಗಳ ಸಿಬ್ಬಂದಿಗಳ ನಿಯಂತ್ರಣ, ವಿದ್ಯಾರ್ಥಿಗಳಿಗೆ ನೀಡಲಾಗುವ ಮೂಲಭೂತ ಸೌಕರ್ಯಗಳ ಸಮರ್ಪಕವಾಗಿ ಸಕಾಲದಲ್ಲಿ ವಿತರಣೆ, ಉಸ್ತುವಾರಿ ವಸತಿ ಶಾಲೆ/ಕಾಲೇಜುಗಳ ಮಾಹಿತಿಯನ್ನು ಪಡೆಯುವ ಬಗ್ಗೆ ಹಾಗೂ ಜಿಲ್ಲಾಮಟ್ಟದಲ್ಲಿ ನಡೆಸಲಾಗುವ ಶಾಸಕಾಂಗ ಸಮಿತಿಗಳಿಗೆ ಹಾಜರಾಗುವುದು, ವಸತಿ ಶಾಲೆಗೆ ಸಂಬಂಧಿಸಿದಂತೆ ಇತರೆ ಜವಾಬ್ದಾರಿಯನ್ನು ನಿರ್ವಹಿಸಲು ಜಿಲ್ಲಾಮಟ್ಟದಲ್ಲಿ ಜಿಲ್ಲಾ ಸಮನ್ವಯಧಿಕಾರಿಗಳ ಹುದ್ದೆಗಳನ್ನು ವೇತನ ಶ್ರೇಣಿ ರೂ.28100-ರೂ.50100 ಸೃಜಿಸುವುದು ಅಗತ್ಯವಾಗಿದೆ. ಆದುದರಿಂದ ಜಿಲ್ಲೆಗೊಂದರಂತೆ ಜಿಲ್ಲಾ ಸಮನ್ವಯಾಧಿಕಾರಿಗಳ ಹುದ್ದೆಗಳನ್ನು ಹಾಗೂ ಒಟ್ಟು 30 ಹುದ್ದೆಗಳನ್ನು ಸೃಜಿಸಲು ಪ್ರಸ್ತಾಪಿಸಿದೆ. ಈ ಹುದ್ದೆಗಳಿಗೆ ವಸತಿ ಶಾಲೆ ಪ್ರಾಂಶುಪಾಲರುಗಳ ಜೇಷ್ಠತಾ ಆಧಾರದ ಮೇಲೆ ಮುಂಬಡ್ತಿ ನೀಡಿ ಭರ್ತಿಮಾಡಿಕೊಳ್ಳಲು ಉದ್ದೇಶಿಸಿದ್ದು ವಸತಿ ಶಾಲೆ ಶೈಕ್ಷಣಿಕ ಗುಣಮಟ್ಟದ ಬಗ್ಗೆ ನಿರ್ದೇಶನ ನೀಡಲು ಸಹಾಯಕವಾಗುತ್ತದೆ.

ಪ್ರಸ್ತಾಪಿತ ಜಿಲ್ಲಾ ಸಮನ್ವಯಾಧಿಕಾರಿಗಳು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಅವರ ಅಧೀನದಲ್ಲಿ ಕರ್ತವ್ಯ ನಿರ್ವಹಿಸುವುದು. ಈ ಹುದ್ದೆಗಳ ಸೃಜನೆಯಿಂದ ವಾರ್ಷಿಕವಾಗಿ ರೂ.134.14 ಲಕ್ಷ ವೆಚ್ಚ ಭರಿಸಬೇಕಾಗುತ್ತದೆ. ಅನುಮೋದಿಸಿದಲ್ಲಿ ಈ ವೆಚ್ಚವನ್ನು ವಸತಿ ಶಾಲೆ/ಕಾಲೇಜುಗಳ ನಿರ್ವಹಣಾ ವೆಚ್ಚ ಲೆಕ್ಕ ಶೀರ್ಷಿಕೆ 2225-01-277-0-65 (ಯೋ) ರಡಿ ಭರಿಸಲಾಗುವುದು.

ವಿಷಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿ 30 ಜಿಲ್ಲಾ ಸಮನ್ಯಾಧಿಕಾರಿಗಳ ಹುದ್ದೆಗಳನ್ನು ಸೃಜಿಸಲು ಅನುಮೋದನೆ ಕೋರಿದೆ ಹಾಗೂ ಅನುಮೋದಿಸಿದಲ್ಲಿ ಸರ್ಕಾರಕ್ಕೆ ಹುದ್ದೆಗಳ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು.

<u>ತೀರ್ಮಾನ:</u>

**ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿ, ವಸತಿ ಶಾಲೆಗಳ ಸಮರ್ಪಕ ನಿರ್ವಹಣೆಯ ಬಗ್ಗೆ ಜಿಲ್ಲಾ ಮಟ್ಟ ಹಾಗೂ ರಾಜ್ಯ ಮಟ್ಟಕ್ಕೆ ಆಡಳಿತಾತ್ಮಕ ವಿಷಯಗಳ ಬಗ್ಗೆ ಸಮನ್ವಯ ಸಾಧಿಸಿಕೊಂಡು ವಸತಿ ಶಾಲೆಗಳ ಸಮಸ್ಯೆಗಳ ಅರಿವಿಗೆ ಹಾಗೂ ಶೈಕ್ಷಣಿಕ ಹಿತದೃಷ್ಟಿಯಿಂದ ಜಿಲ್ಲಾ ಸಮನ್ವಯ ಅಧಿಕಾರಿಗಳ ಹುದ್ದೆಗಳು ಅವಶ್ಯಕವಿರುವುದನ್ನು ಸಭೆಯು ಮನಗಂಡು, ಈ ಕೆಳಕಂಡಂತೆ ತೀರ್ಮಾನಿಸಿತು.**

1. **ಪ್ರಸ್ತುತ ವಸತಿ ಶಾಲೆಯ ಪ್ರಾಂಶುಪಾಲರುಗಳ ಹುದ್ದೆಯ ಕರ್ತವ್ಯದೊಂದಿಗೆ ಹೆಚ್ಚುವರಿಯಾಗಿ, ಜಿಲ್ಲಾ ಮಟ್ಟದಲ್ಲಿ ಸಮನ್ವಯ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ವ್ಯವಸ್ಥೆಯನ್ನು ಯಥಾಸ್ಥಿತಿಯಲ್ಲಿಯೇ ಮುಂದುವರಿಸಲು ತೀರ್ಮಾನಿಸಲಾಯಿತು.**
2. **ಸದರಿ ಜಿಲ್ಲಾ ಸಮನ್ವಯ ಅಧಿಕಾರಿಗಳು, ಜಂಟಿ ನಿರ್ದೇಶಕರು/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆರವರ ಅಧೀನದಲ್ಲಿ ಸದರಿಯವರ ಕಛೇರಿಯಲ್ಲಿಯೇ ಕರ್ತವ್ಯ ನಿರ್ವಹಿಸತಕ್ಕದ್ದು.**
3. **ಜಿಲ್ಲಾ ಸಮನ್ವಯ ಅಧಿಕಾರಿಗಳ ಹುದ್ದೆಗಳನ್ನು ಸೃಜಿಸಲು ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು. ಹಾಗೂ ಸರ್ಕಾರದಿಂದ ಹುದ್ದೆಗಳು ಮಂಜೂರಾದ ನಂತರ ಸದರಿ ಹುದ್ದೆಗಳನ್ನು ಖಾಯಂ ಆಗಿ ಭರ್ತಿ ಮಾಡಿಕೊಳ್ಳುವವರೆಗೆ ಮೇಲ್ಕಂಡ ಜಿಲ್ಲಾ ಸಮನ್ವಯ ಅಧಿಕಾರಿಗಳನ್ನೇ ಮುಂದುವರಿಸಲು ತೀರ್ಮಾನಿಸಲಾಯಿತು.**

<u>ವಿಷಯ ಸಂಖ್ಯೆ: 34</u>

<u>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಗೆ ಅಗತ್ಯವಿರುವ ಹೆಚ್ಚುವರಿ ಹುದ್ದೆಗಳನ್ನು ಸೃಜಿಸುವ ಬಗ್ಗೆ.</u>

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವನ್ನು ಸರ್ಕಾರದ ಆದೇಶ ಸಂಖ್ಯೆ. SWD 532 SEW 96 BangaloreDt:06/10/1999ರಲ್ಲಿ ಮಂಜೂರು ಮಾಡಲಾಗಿದ್ದು, ಸಂಘವು ದಿನಾಂಕ:20/02/2000ರಿಂದ ತನ್ನ ಕಾರ್ಯಾರಂಭ ಮಾಡಿದೆ. ಈ ಸಂಸ್ಥೆಯನ್ನು ವಿವಿಧ ಇಲಾಖೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ

ಕಾರ್ಯನಿರ್ವಾಹಕ ನಿರ್ದೇಶಕರು ಅಧ್ಯಕ್ಷರು

ವರ್ಗ, ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ಶಿಕ್ಷಣ ಇಲಾಖೆಗೆ ಮಂಜೂರಾದ ವಸತಿ ಶಾಲೆಗಳನ್ನು ಒಂದೇ ಸೂರಿನಡಿ ತಂದು ವಸತಿ ಶಾಲೆಗಳನ್ನು ನಿರ್ವಹಿಸಲು ಮಂಜೂರು ಮಾಡಲಾಗಿದೆ.

ಈ ಸಂಸ್ಥೆಯು ವಸತಿ ಶಾಲೆಗಳ ನಿರ್ವಹಣೆ ಮತ್ತು ವಸತಿ ಶಾಲೆಗಳ ಕಟ್ಟಡಗಳ ನಿರ್ಮಾಣ, ದುರಸ್ಥಿ ಮತ್ತು ಶಿಕ್ಷಕರುಗಳಿಗೆ ತರಬೇತಿ ನೀಡುವ ಕಾರ್ಯಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಈ ಸಂಸ್ಥೆ ಮಂಜೂರಾದ ಸರ್ಕಾರಿ ಆದೇಶದಲ್ಲಿ ಹಾಗೂ ತದನಂತರದ ಆದೇಶಗಳಲ್ಲಿ ಈ ಕೆಳಕಂಡ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ.

| ಕ್ರ. ಸಂ | ಮಂಜೂರಾದ ಹುದ್ದೆಗಳ ವಿವರ | ಮಂಜೂರಾದ ಹುದ್ದೆಗಳ ಸಂಖ್ಯೆ & ಸರ್ಕಾರದ ಆದೇಶಗಳ ವಿವರ | | | | |
|---|---|---|---|---|---|---|
| | | G.O.No.SWD 532 SEW 96 Bangalore Dt:06/10/1999 | ಸಕಇ 89 ಮೊದೇಶಾ 2011 ಬೆಂಗಳೂರು ದಿ:07/09/11 | ಸಕಇ 120 ಮೊದೇಶಾ 2011 ಬೆಂಗಳೂರು ದಿ:23.06.12 | ಹಿಂವಕ 196 ಐಇಬಿ 2015 ಬೆಂಗಳೂರು 19.08.15 | ಒಟ್ಟು |
| 1 | ಕಾರ್ಯನಿರ್ವಾಹಕ ನಿರ್ದೇಶಕರು | 1 | - | - | - | 01 |
| 2 | ಸಹಾಯಕ ನಿರ್ದೇಶಕರು | 2 | - | - | - | 02 |
| 3 | ಯೋಜನಾಧಿಕಾರಿಗಳು | 3 | - | - | - | 03 |
| 4 | ಪ್ರೋಗ್ರಾಮ್ ಎಕ್ಸಿಕ್ಯೂಟಿವ್ | 4 | - | - | - | 04 |
| 5 | ಕಾವಲುಗಾರರು/ದಲಾಯತರು | 2 | - | - | - | 02 |
| 6 | ವಾಹನ ಚಾಲಕರು | 2 | - | - | - | 02 |
| 7 | ಅಧೀಕ್ಷಕ ಅಭಿಯಂತರರು | - | 01 | - | - | 01 |
| 8 | ಕಾರ್ಯಪಾಲಕ ಅಭಿಯಂತರರು | - | 01 | - | - | 01 |
| 9 | ಸಹಾಯಕ ಕಾರ್ಯಪಾಲಕ ಅಭಿಯಂತರು | - | 04 | - | - | 04 |
| 10 | ಸಹಾಯಕ ಅಭಿಯಂತರರು | - | 02 | - | - | 02 |
| 11 | ಕಿರಿಯ ಅಭಿಯಂತರರು | - | 02 | - | - | 02 |
| 12 | ಡ್ರಾಫ್ಟ್ಸ್‌ಮೆನ್ | - | 02 | - | - | 02 |
| 13 | ಕಾರ್ಯಪಾಲಕ ಅಭಿಯಂತರರು (ಸಿವಿಲ್) | - | - | 01 | - | 01 |
| 14 | ಕಾರ್ಯಪಾಲಕ ಅಭಿಯಂತರರು (ವಿದ್ಯುತ್) | - | - | 01 | - | 01 |
| 15 | ಸಹಾಯಕ ಕಾರ್ಯಪಾಲಕ ಅಭಿಯಂತರರು (ಸಿವಿಲ್/ವಿದ್ಯುತ್) | - | - | 08 | - | 08 |
| 16 | ಸಹಾಯಕ ಅಭಿಯಂತರರು (ಸಿವಿಲ್/ವಿದ್ಯುತ್) | - | - | 10 | - | 10 |
| 17 | ಕಿರಿಯ ಅಭಿಯಂತರರು (ಸಿವಿಲ್/ವಿದ್ಯುತ್) | - | - | 12 | - | 12 |
| 18 | ಜಂಟಿ ನಿರ್ದೇಶಕರು (ಹೆಚ್.ಆರ್.ಡಿ) | - | - | - | 01 | 01 |
| 19 | ಜಂಟಿ ನಿರ್ದೇಶಕರು (ಶಿಕ್ಷಣ&ತರಬೇತಿ) | - | - | - | 01 | 01 |

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

| ಕ್ರ. ಸಂ | ಮಂಜೂರಾದ ಹುದ್ದೆಗಳ ವಿವರ | ಮಂಜೂರಾದ ಹುದ್ದೆಗಳ ಸಂಖ್ಯೆ & ಸರ್ಕಾರದ ಆದೇಶಗಳ ವಿವರ | | | | |
|---|---|---|---|---|---|---|
| | | G.O.No.SWD 532 SEW 96 Bangalore Dt:06/10/1999 | ಸಕಇ ೮೯ ಮೊದೇಶಾ 2011 ಬೆಂಗಳೂರು ದಿ:07/09/11 | ಸಕಇ 120 ಮೊದೇಶಾ 2011 ಬೆಂಗಳೂರು ದಿ:23.06.12 | ಹಿಂವಕ 196 ಬಿಇಇ 2015 ಬೆಂಗಳೂರು 19.08.15 | ಒಟ್ಟು |
| 20 | ಉಪ ನಿರ್ದೇಶಕರು(ಹೆಚ್.ಆರ್.ಡಿ) | - | - | - | 01 | **01** |
| 21 | ಉಪ ನಿರ್ದೇಶಕರು (ಶಿಕ್ಷಣ & ತರಬೇತಿ) | - | - | - | 01 | **01** |
| 22 | ಮುಖ್ಯ ಲೆಕ್ಕಾಧಿಕಾರಿ | - | - | - | 01 | **01** |
| 23 | ಲೆಕ್ಕಪರಿಶೋಧಕರು(ಆಡಿಟರ್ಸ್) | - | - | - | 02 | **02** |
| 24 | ಕಛೇರಿ ಮೇಲ್ವಿಚಾರಕರು | - | - | - | 03 | **03** |
| 25 | ಶೀಘ್ರಲಿಪಿಗಾರರು ಕಂ ಡಾಟಾ ಎಂಟ್ರಿ ಆಪರೇಟರ್ | - | - | - | 01 | **01** |
| 26 | ಗುಮಾಸ್ತರು ಕಮ್ ಬೆರಳಚ್ಚುಗಾರರು | - | - | - | 07 | **07** |
| 27 | ವಾಹನ ಚಾಲಕರು | - | - | - | 03 | **03** |
| 28 | ಗ್ರೂಪ್ ಡಿ | - | - | - | 05 | **05** |
| | **ಒಟ್ಟು ಹುದ್ದೆಗಳು** | **14** | **12** | **32** | **26** | **84** |

ಪ್ರಾರಂಭದಲ್ಲಿ ಸಂಘದ ವ್ಯಾಪ್ತಿಯಲ್ಲಿ 79 ವಸತಿ ಶಾಲೆಗಳು ಕಾರ್ಯನಿರ್ವಸುತ್ತಿದ್ದು, ಪ್ರಸ್ತುತ 818 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.

ಈ 818 ವಸತಿ ಶಾಲೆ/ಕಾಲೇಜುಗಳಿಗೆ ವಿವಿಧ ವೃಂದದ ಹುದ್ದೆಗಳು ಮಂಜೂರಾಗಿದ್ದು, ಪ್ರಸ್ತುತ 4205 ಖಾಯಂ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಖಾಲಿ ಹುದ್ದೆಗಳ ನೇಮಕಾತಿ ಖಾಯಂ ಸಿಬ್ಬಂದಿಗಳ ನಿರ್ವಹಣೆಯು ದುಪ್ಪಟ್ಟಾಗಿದೆ. ಪ್ರಸ್ತುತ ಸರ್ಕಾರವು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ರಾಜ್ಯವಲಯದ ಆಯವ್ಯಯದಲ್ಲಿ ಅನುದಾನ ನಿಗದಿಪಡಿಸಿ ಬಿಡುಗಡೆ ಮಾಡಲಾಗುತ್ತಿದೆ. ಸಂಘವು ಸೂಕ್ತ ಕ್ರಿಯಾಯೋಜನೆಯನ್ನು ತಯಾರಿಸಿ, ಅನುದಾನ ಬಿಡುಗಡೆ ಮಾಡುತ್ತಿದೆ.

ವಸತಿ ಶಾಲೆಗಳ ಶೈಕ್ಷಣಿಕ ಹಾಗೂ ಶೈಕ್ಷಣೇತರ ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡಲು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಗೆ 1-ಜಂಟಿ ನಿರ್ದೇಶಕರು(ಶಿಕ್ಷಣ & ತರಬೇತಿ) & ಉಪನಿರ್ದೇಶಕರು(ಶಿಕ್ಷಣ & ತರಬೇತಿ) ಹುದ್ದೆಗಳು ಮಂಜೂರಾಗಿವೆ. ಆದರೆ ವಿಭಾಗವಾರು ಜಂಟಿ ನಿರ್ದೇಶಕರು (ಶಿಕ್ಷಣ & ತರಬೇತಿ) ಹುದ್ದೆಗಳನ್ನು ಸೃಜಿಸುವುದು ಅಗತ್ಯವಾಗಿದೆ.

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಛೇರಿಯ ಇಂಜನಿಯರಿಂಗ್ ವಿಭಾಗಕ್ಕೆ ಒಂದು ಅಧೀಕ್ಷಕರ ಅಭಿಯಂತರರ ಹುದ್ದೆಯ ಜೊತೆಗೆ 2 ಕಾರ್ಯಪಾಲಕ ಅಭಿಯಂತರರು(ಸಿವಿಲ್) ಹಾಗೂ ಒಬ್ಬ ಕಾರ್ಯಪಾಲಕ ಅಭಿಯಂತರರು(ವಿದ್ಯುತ್) ಹುದ್ದೆಗಳನ್ನು ಸೃಜಿಸಲಾಗಿದೆ. ಆದರೆ ಸಂಘವು ಕಟ್ಟಡ ನಿರ್ಮಾಣವನ್ನು ರಾಜ್ಯದ ಗ್ರಾಮೀಣ ಭಾಗದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದ್ದು, ಕಾಮಗಾರಿಗಳ ಗುಣಮಟ್ಟ ಕಾಯ್ದುಕೊಳ್ಳಲು ಹೆಚ್ಚುವರಿಯಾಗಿ 2 ಕಾರ್ಯಪಾಲಕ ಅಭಿಯಂತರರ(ಸಿವಿಲ್) ಹುದ್ದೆಗಳನ್ನು ಸೃಜಿಸುವುದು ಅಗತ್ಯವಾಗಿದೆ. ಮೇಲೆ ಹೇಳಿದ ಕಾರ್ಯಒತ್ತಡಗಳಿಂದಾಗಿ ಪ್ರಸ್ತುತ ಕೇಂದ್ರ ಕಛೇರಿಗೆ 12 ಸಹಾಯಕ ಕಾರ್ಯಪಾಲಕ ಅಭಿಯಂತರರು ಕಾರ್ಯನಿರ್ವಹಿಸುತ್ತಿದ್ದಾರೆ. ಜಿಲ್ಲಾ ಮಟ್ಟದಲ್ಲಿ ಸರಾಸರಿ 3 ವಸತಿ ಶಾಲೆ ಕಟ್ಟಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದ್ದು ಇವುಗಳ ಅಂದಾಜು ವೆಚ್ಚ ರೂ.45 ಕೋಟಿಗಳಾಗುತ್ತದೆ. ಕಾಮಗಾರಿಗಳ ಗುಣಮಟ್ಟ ಕಾಪಾಡಿಕೊಳ್ಳಲು ಸಮಗ್ರ ಉಸ್ತುವಾರಿಗಾಗಿ ಹೆಚ್ಚುವರಿಯಾಗಿ 4 ಹುದ್ದೆಗಳನ್ನು ಸೃಜಿಸುವುದು ಅಗತ್ಯವಾಗಿದೆ.

ಮೇಲಿನ ಎಲ್ಲಾ ಕಾರ್ಯಚಟುವಟಿಕೆಗಳು ಹೆಚ್ಚಾಗಿದ್ದುದರಿಂದ ಈ ಕೆಳಕಂಡ ಸಹಾಯಕರ ಹೆಚ್ಚುವರಿ ಹುದ್ದೆಗಳ ಸೃಜನೆಗೆ ಪ್ರಸ್ತಾಪಿಸಿದೆ.

| ಕ್ರ. ಸಂ. | ಸೃಜಿಸಬೇಕಾದ ಹುದ್ದೆಗಳ ವಿವರ | ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ | ಷರಾ |
|---|---|---|---|---|
| 1 | ಪತ್ರಾಂಕಿತ ವ್ಯವಸ್ಥಾಪಕರು | 06 | 22800-43200 | |
| 2 | ಲೆಕ್ಕಾಧೀಕ್ಷಕರು | 04 | 21600-40050 | |
| 3 | ಕಛೇರಿ ಅಧೀಕ್ಷಕರು | 06 | 20000-36300 | |
| 4 | ಕಂಪ್ಯೂಟರ್ ಪ್ರೋಗ್ರಾಮರ್ | 04 | 17650-32000 | ಸಂಘದ ವೃಂದ ಮತ್ತು ನೇಮಕಾತಿ ವಿನಿಮಯಗಳನ್ವಯ |
| 5 | ಲೆಕ್ಕ ಸಹಾಯಕರು | 08 | 14550-26700 | |
| 6 | ಪ್ರ.ದ.ಸ. ಕಂ ಕಂಪ್ಯೂಟರ್ ಆಪರೇಟರ್ | 10 | 14550-26700 | |
| 7 | ದ್ವಿ.ದ.ಸ. ಕಂ ಕಂಪ್ಯೂಟರ್ ಆಪರೇಟರ್ | 08 | 11600-21000 | |
| 8 | ವಾಹನ ಚಾಲಕರು | 04 | 11600-21000 | |
| 9 | ದಲಾಯತರು | 03 | 9600-14550 | |

ಒಟ್ಟಾರೆ ಸಂಘಕ್ಕೆ ಮಂಜೂರಾದ ಹುದ್ದೆಗಳು ಹೆಚ್ಚುವರಿಯಾಗಿ ಪ್ರಸ್ತಾಪಿಸಿರುವ ಹುದ್ದೆಗಳ ವಿವರಗಳು ಈ ಕೆಳಕಂಡಂತಿವೆ.

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

| ಕ್ರ. ಸಂ | ಹುದ್ದೆಗಳ ವಿವರಗಳು | ಹುದ್ದೆಯ ವೇತನ ಶ್ರೇಣಿ | ಮಂಜೂರಾದ ಹುದ್ದೆಗಳ ಸಂಖ್ಯೆ | ಹೊಸದಾಗಿ ಸೃಜಿಸಬೇಕಾದ ಹುದ್ದೆಗಳ ಸಂಖ್ಯೆ | ಒಟ್ಟು ಹುದ್ದೆಗಳು | ಷರಾ |
|---|---|---|---|---|---|---|
| 1 | ಕಾರ್ಯನಿರ್ವಾಹಕ ನಿರ್ದೇಶಕರು | 52500-73000 | 01 | 0 | 01 | ಹುದ್ದೆಯನ್ನು ಮುಂದುವರೆಸಲು ಕೋರಿದೆ |
| 2 | ಜಂಟಿ ನಿರ್ದೇಶಕರು (ಹೆಚ್.ಆರ್.ಡಿ) (ಸಮಾಜಕಲ್ಯಾಣ/ಹಿಂದುಳಿದವರ್ಗಗಳ ಕಲ್ಯಾಣ ಇಲಾಖೆಯಿಂದ ನಿಯೋಜನೆ) | 40050-56550 | 01 | 0 | 01 | ಹುದ್ದೆಯನ್ನು ಮುಂದುವರೆಸಲು ಕೋರಿದೆ |
| 3 | ಜಂಟಿ ನಿರ್ದೇಶಕರು (ಶಿಕ್ಷಣ & ತರಬೇತಿ) (Deputation from Education department) | 40050-56550 | 01 | 03 | 04 | 3 ಹುದ್ದೆಗಳನ್ನು ಸೃಜಿಸಲು ಕೋರಿದೆ |
| 4 | ಅಧೀಕ್ಷಕ ಅಭಿಯಂತರರು (Deputation from PWD) | 40050-56550 | 01 | 01 | 02 | 1 ಹುದ್ದೆಯನ್ನು ಸೃಜಿಸಲು ಕೋರಿದೆ |
| 5 | ಉಪ ನಿರ್ದೇಶಕರು (ಹೆಚ್.ಆರ್.ಡಿ) (ಸಮಾಜ ಕಲ್ಯಾಣ/ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನಿಯೋಜನೆ) | 36300-53850 | 01 | 0 | 01 | ಹುದ್ದೆಯನ್ನು ಮುಂದುವರೆಸಲು ಕೋರಿದೆ |
| 6 | ಉಪ ನಿರ್ದೇಶಕರು (ಶಿಕ್ಷಣ & ತರಬೇತಿ) (Deputation from Education department) | 36300-53850 | 01 | 0 | 01 | ಹುದ್ದೆಯನ್ನು ಮುಂದುವರೆಸಲು ಕೋರಿದೆ |
| 7 | ಮುಖ್ಯಲೆಕ್ಕಾಧಿಕಾರಿಗಳು (ಜಂಟಿ ನಿಯಂತ್ರಕರು, ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆ) | 36300-53850 | 01 | 0 | 01 | ಹುದ್ದೆಯನ್ನು ಮುಂದುವರೆಸಲು ಕೋರಿದೆ |
| 8 | ಕಾರ್ಯಪಾಲಕ ಅಭಿಯಂತರರು (ಸಿವಿಲ್) (Deputation from PWD) | 36300-53850 | 03 | 02 | 05 | 2 ಹುದ್ದೆಗಳನ್ನು ಸೃಜಿಸಲು ಕೋರಿದೆ |
| 9 | ಸಹಾಯಕ ಕಾರ್ಯಪಾಲಕ ಅಭಿಯಂತರರು (ಸಿವಿಲ್) (Deputation from PWD) | 28100-50100 | 12 | 04 | 16 | 4 ಹುದ್ದೆಗಳನ್ನು ಸೃಜಿಸಲು ಕೋರಿದೆ |

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

| ಕ್ರ. ಸಂ | ಹುದ್ದೆಗಳ ವಿವರಗಳು | ಹುದ್ದೆಯ ವೇತನ ಶ್ರೇಣಿ | ಮಂಜೂರಾದ ಹುದ್ದೆಗಳ ಸಂಖ್ಯೆ | ಹೊಸದಾಗಿ ಸೃಜಿಸಬೇಕಾದ ಹುದ್ದೆಗಳ ಸಂಖ್ಯೆ | ಒಟ್ಟು ಹುದ್ದೆಗಳು | ಷರಾ |
|---|---|---|---|---|---|---|
| 10 | ಸಹಾಯಕ ನಿರ್ದೇಶಕರು (Deputation from Social Welfare, Backward Class & Minority or any other administrative Dept.) | 28100-50100 | 02 | 0 | 02 | ಹುದ್ದೆಯನ್ನು ಮುಂದುವರೆಸಲು ಕೋರಿದೆ |
| 11 | ಸಹಾಯಕ ಅಭಿಯಂತರರು(ಸಿವಿಲ್) (Deputation from PWD) | 22800-43200 | 12 | 02 | 14 | 4 ಹುದ್ದೆಗಳನ್ನು ಸೃಜಿಸಲು ಕೋರಿದೆ |
| 12 | ಯೋಜನಾಧಿಕಾರಿಗಳು (Deputation from Social Welfare, Backward Class & Minority welfare Dept. B.E.O from Education Dept or A.E from PWD) | 22800-43200 | 03 | 06 | 09 | 4 ಹುದ್ದೆಗಳನ್ನು ಸೃಜಿಸಲು ಕೋರಿದೆ |
| 13 | ಲೆಕ್ಕಪರಿಶೋಧಕರು (Deputation from State Accounts) | 22800-43200 | 02 | 02 | 04 | 2 ಹುದ್ದೆಗಳನ್ನು ಸೃಜಿಸಲು ಕೋರಿದೆ |
| 14 | ಪತ್ರಾಂಕಿತ ವ್ಯವಸ್ಥಾಪಕರು (Deputation from any Department) | 22800-43200 | 0 | 06 | 06 | 2 ಹುದ್ದೆಗಳನ್ನು ಸೃಜಿಸಲು ಕೋರಿದೆ |
| 15 | ಲೆಕ್ಕಾಧೀಕ್ಷಕರು (Deputation from State Accounts) | 21600-40050 | 0 | 04 | 04 | 4 ಹುದ್ದೆಗಳನ್ನು ಸೃಜಿಸಲು ಕೋರಿದೆ |
| 16 | ಕಛೇರಿ ಮೇಲ್ವಿಚಾರಕರು (Deputation from any Department) | 20000-36300 | 03 | 06 | 09 | 6 ಹುದ್ದೆಗಳನ್ನು ಸೃಜಿಸಲು ಕೋರಿದೆ |
| 17 | ಕಿರಿಯ ಅಭಿಯಂತರರು(ಸಿವಿಲ್) (Deputation from PWD) | 17650-32000 | 14 | 02 | 16 | 2 ಹುದ್ದೆಗಳನ್ನು ಸೃಜಿಸಲು ಕೋರಿದೆ |
| 18 | ಡ್ರಾಫ್ಟ್‌ಮೆನ್ (Deputation from PWD) | 17650-32000 | 02 | 0 | 02 | ಹುದ್ದೆಗಳನ್ನು ಮುಂದುವರೆಸಲು ಕೋರಿದೆ |
| 19 | ಶೀಘ್ರಲಿಪಿಗಾರರು ಕಂ ಡಾಟಾ ಎಂಟ್ರಿ ಆಪರೇಟರ್ (From outsource) | 17650-32000 | 01 | 04 | 05 | 4 ಹುದ್ದೆಗಳನ್ನು ಸೃಜಿಸಲು ಕೋರಿದೆ |
| 20 | ಕಂಪ್ಯೂಟರ್ ಪ್ರೋಗ್ರಾಮರ್ | 17650-32000 | 0 | 04 | 04 | 4 ಹುದ್ದೆಗಳನ್ನು ಸೃಜಿಸಲು ಕೋರಿದೆ |
| 21 | ಲೆಕ್ಕ ಸಹಾಯಕರು | 14550-26700 | 0 | 08 | 08 | 8 ಹುದ್ದೆಗಳನ್ನು ಸೃಜಿಸಲು ಕೋರಿದೆ |

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

| ಕ್ರ. ಸಂ | ಹುದ್ದೆಗಳ ವಿವರಗಳು | ಹುದ್ದೆಯ ವೇತನ ಶ್ರೇಣಿ | ಮಂಜೂರಾದ ಹುದ್ದೆಗಳ ಸಂಖ್ಯೆ | ಹೊಸದಾಗಿ ಸೃಜಿಸಬೇಕಾದ ಹುದ್ದೆಗಳ ಸಂಖ್ಯೆ | ಒಟ್ಟು ಹುದ್ದೆಗಳು | ಷರಾ |
|---|---|---|---|---|---|---|
| 22 | ಪ್ರೋಗ್ರಾಂ ಎಕ್ಸಿಕ್ಯೂಟಿವ್ಸ್ | 14550-26700 | 04 | 0 | 04 | ಹುದ್ದೆಗಳನ್ನು ಮುಂದುವರೆಸಲು ಕೋರಿದೆ |
| 23 | ಪ್ರದಸ ಕಂ ಕಂಪ್ಯೂಟರ್ ಆಪರೇಟರ್ | 14550-26700 | 0 | 10 | 10 | 10 ಹುದ್ದೆಗಳನ್ನು ಸೃಜಿಸಲು ಕೋರಿದೆ |
| 24 | ದ್ವಿತಿಯ ದರ್ಜೆ ಸಹಾಯಕರು ಕಂ ಕಂಪ್ಯೂಟರ್ ಆಪರೇಟರ್ | 11600-21000 | 07 | 08 | 15 | 8 ಹುದ್ದೆಗಳನ್ನು ಸೃಜಿಸಲು ಕೋರಿದೆ |
| 25 | ವಾಹನ ಚಾಲಕರು | 11600-21000 | 05 | 04 | 09 | 4 ಹುದ್ದೆಗಳನ್ನು ಸೃಜಿಸಲು ಕೋರಿದೆ |
| 26 | ದಲಾಯತರು | 9600-14550 | 07 | 03 | 10 | 3 ಹುದ್ದೆಗಳನ್ನು ಸೃಜಿಸಲು ಕೋರಿದೆ |
| | ಒಟ್ಟು | | 84 | 79 | 163 | |

ಪ್ರಸ್ತಾಪಿಸಿದ ಹೆಚ್ಚುವರಿ ಹುದ್ದೆಗಳನ್ನು ಸೃಜನೆಗೆ ವಾರ್ಷಿಕವಾ ಭರಿಸಬೇಕಾದ ವೆಚ್ಚದ ವಿವರಗಳು ಈ ಕೆಳಕಂಡಂತಿದೆ.

| ಕ್ರ. ಸಂ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ಕನಿಷ್ಠ ವೇತನ | ಮನೆ ಬಾಡಿಗೆ ಭತ್ಯೆ (30%) + ತುಟ್ಟಿ ಭತ್ಯೆ (45.25%) + ಸಿ.ಸಿ.ಎ | ವೈದ್ಯಕೀಯ ವೆಚ್ಚ | ಒಟ್ಟು ಮಾಸಿಕ ವೆಚ್ಚ | ಒಟ್ಟು ವಾರ್ಷಿಕ ವೆಚ್ಚ (ಲಕ್ಷಗಳಲ್ಲಿ) |
|---|---|---|---|---|---|---|---|
| 1 | ಜಂಟಿ ನಿರ್ದೇಶಕರು(ಶಿಕ್ಷಣ & ತರಬೇತಿ) | 3 | 40050 | 30637.75 | 0 | 212063.25 | 25.44759 |
| 2 | ಅಧೀಕ್ಷಕ ಅಭಿಯಂತರರು | 1 | 40050 | 30637.75 | 0 | 70687.75 | 8.48253 |
| 3 | ಕಾರ್ಯಪಾಲಕ ಅಭಿಯಂತರರು (ಸಿವಿಲ್) | 2 | 36300 | 27806.5 | 0 | 128213 | 15.38556 |
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರು | 4 | 28100 | 21615.5 | 0 | 198862 | 23.86344 |
| 5 | ಸಹಾಯಕ ಅಭಿಯಂತರರು | 2 | 28100 | 21615.5 | 0 | 99431 | 11.93172 |
| 6 | ಯೋಜನಾಧಿಕಾರಿಗಳು | 6 | 22800 | 17614 | 0 | 242484 | 29.09808 |
| 7 | ಲೆಕ್ಕಪರಿಶೋಧನಾಧಿಕಾರಿಗಳು | 2 | 22800 | 17614 | 0 | 80828 | 9.69936 |
| 8 | ಪತ್ರಾಂಕಿತ ವ್ಯವಸ್ಥಾಪಕರು | 6 | 22800 | 17614 | 0 | 242484 | 29.09808 |
| 9 | ಲೆಕ್ಕಾಧೀಕ್ಷಕರು | 4 | 21600 | 16658 | 0 | 153032 | 18.36384 |
| 10 | ಕಛೇರಿ ಮೇಲ್ವಿಚಾರಕರು | 6 | 20600 | 15903 | 0 | 219018 | 26.28216 |

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

| ಕ್ರ. ಸಂ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ಕನಿಷ್ಠ ವೇತನ | ಮನೆ ಬಾಡಿಗೆ ಭತ್ಯೆ (30%) + ತುಟ್ಟಿ ಭತ್ಯೆ (45.25%) + ಸಿ.ಸಿ.ಎ | ವೈದ್ಯಕೀಯ ವೆಚ್ಚ | ಒಟ್ಟು ಮಾಸಿಕ ವೆಚ್ಚ | ಒಟ್ಟು ವಾರ್ಷಿಕ ವೆಚ್ಚ (ಲಕ್ಷಗಳಲ್ಲಿ) |
|---|---|---|---|---|---|---|---|
| 11 | ಕಿರಿಯ ಅಭಿಯಂತರರು | 2 | 17650 | 13675.75 | 100 | 62851.5 | 7.54218 |
| 12 | ಕಂಪ್ಯೂಟರ್ ಪ್ರೋಗ್ರಾಮರ್ | 4 | 17650 | 13675.75 | 100 | 125703 | 15.08436 |
| 13 | ಶೀಘ್ರಲಿಪಿಗಾರರು ಕಂ ಡಾಟಾ ಎಂಟ್ರಿ ಆಪರೇಟರ್ | 4 | 17650 | 13675.75 | 100 | 125703 | 15.08436 |
| 14 | ಲೆಕ್ಕ ಸಹಾಯಕರು | 8 | 14550 | 11335.25 | 100 | 207882 | 24.94584 |
| 15 | ಪ್ರದಸ ಕಂ ಕಂಪ್ಯೂಟರ್ ಆಪರೇಟರ್ | 10 | 14550 | 11335.25 | 100 | 259852.5 | 31.1823 |
| 16 | ದ್ವಿದಸ ಕಂ ಕಂಪ್ಯೂಟರ್ ಆಪರೇಟರ್ | 8 | 11600 | 9108 | 100 | 166464 | 19.97568 |
| 17 | ವಾಹನ ಚಾಲಕರು | 4 | 11600 | 9108 | 100 | 83232 | 9.98784 |
| 18 | ದಲಾಯತರು | 3 | 9600 | 7598 | 100 | 51894 | 6.22728 |
| | ಒಟ್ಟು | **79** | **179850** | **139686.75** | **800** | **1698116** | **203.77392** |

ಈ ಹುದ್ದೆಗಳ ಸೃಜನೆಯಿಂದ ವಾರ್ಷಿಕವಾಗಿ ರೂ.203.77 ಲಕ್ಷ ವೆಚ್ಚ ಭರಿಸಬೇಕಾಗುತ್ತದೆ. ಅನುಮೋದಿಸಿದಲ್ಲಿ ಈ ವೆಚ್ಚವನ್ನು ಕೇಂದ್ರಕಛೇರಿ ನಿರ್ವಹಣಾ ವೆಚ್ಚ ಲೆಕ್ಕ ಶೀರ್ಷಿಕೆ 2225-01-277-0-53 ರಡಿ ಭರಿಸಲಾಗುವುದು.

ವಿಷಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿ 79 ವಿವಿಧ ವೃಂದಗಳ ಹುದ್ದೆಗಳನ್ನು ಸೃಜಿಸಲು ಅನುಮೋದನೆ ಕೋರಿದೆ ಹಾಗೂ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಗೆ 79 ಹೆಚ್ಚುವರಿ ಹುದ್ದೆಗಳನ್ನು ಸೃಜಿಸಲು ತೀರ್ಮಾನಿಸಿತು ಹಾಗೂ ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದಿಸಿತು.**

ವಿಷಯ ಸಂಖ್ಯೆ: 35

ವಸತಿ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ಶಿಕ್ಷಕ/ಶಿಕ್ಷಕಿಯರಿಗೆ ಹಾಲಿ ನೀಡುತ್ತಿರುವ ವೇತನವನ್ನು ಪರಿಷ್ಕರಿಸಿ ಹೆಚ್ಚಿಸುವ ಬಗ್ಗೆ.

ರಾಜ್ಯಾದಾಂತ್ಯಂತ ವಸತಿ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ಶಿಕ್ಷಕ/ಶಿಕ್ಷಕಿಯರಿಗೆ ನೀಡುತ್ತಿರುವ ವೇತನದಲ್ಲಿ ವ್ಯತ್ಯಾಸವಿರುವುದಾಗಿ ಹಲವು ಆಕ್ಷೇಪಣೆಗಳನ್ನು

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ಗಮನಿಸಲಾಗಿರುತ್ತದೆ. ಹೊರಗುತ್ತಿಗೆಯಿಂದ ನೇಮಕವಾದ ಶಿಕ್ಷಕರು ಸಹ ಬಿ.ಎ/ಬಿ.ಎಸ್.ಸಿ., ಬಿ.ಎಡ್ ಶೈಕ್ಷಣಿಕ ಅರ್ಹತೆ ಹೊಂದಿರುವ ಶಿಕ್ಷಕರುಗಳೇ ಆಗಿರುತ್ತಾರೆ. ಅಲ್ಲದೇ ಇವರೂ ಸಹ ಖಾಯಂ ಶಿಕ್ಷಕರುಗಳಂತೆ ಪ್ರತಿ ದಿನವೂ 4 ರಿಂದ 5 ಗಂಟೆಗಳ ಅವಧಿಯ ಬೋಧನೆಯನ್ನು ಮಾಡುತ್ತಿರುತ್ತಾರೆ. ಬಹುತೇಕ ಎಲ್ಲಾ ವಸತಿ ಶಾಲೆಗಳು ಪಟ್ಟಣ/ಗ್ರಾಮದಿಂದ 4 ರಿಂದ 5 ಕಿ.ಮೀ. ದೂರ ಇದ್ದು, ಯಾವುದೇ ಹೇರಳವಾದ ಸಾರಿಗೆ ಸೌಲಭ್ಯ ಇಲ್ಲದೇ ಇರುವ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಆದುದರಿಂದ ಹಾಲಿ ನೀಡುತ್ತಿರುವ ವೇತನವನ್ನು ಪರಿಷ್ಕರಿಸುವುದು ಅವಶ್ಯವಾಗಿರುತ್ತದೆ.

ಪ್ರಸ್ತುತ ಸಂಘವು ಹೊರಸಂಪನ್ಮೂಲ ಏಜೆನ್ಸಿಯ ಮೂಲಕ ಕರ್ತವ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಸ್ಟಾಂಡರ್ಡ್ ದಸ್ತಾವೇಜು – 2011ರ ಪ್ರಕಾರ ಪ್ರತಿ ಮಾಹೆಯಾನ ರೂ.6,600/- ಗಳದ್ದು (ಮೂಲವೇತನ ಮತ್ತು ತುಟ್ಟಿಭತ್ಯೆ) ಈ ಮೊತ್ತದಲ್ಲಿ ಇ.ಎಸ್.ಐ., ಪಿ.ಎಫ್ ವಂತಿಗೆಯೊಂದಿಗೆ ಏಜೆನ್ಸಿ ಸರ್ವಿಸ್ ಚಾರ್ಜ್‌ಗಳನ್ನು ಕಟಾವಣೆ ಮಾಡಿ ಸರಾಸರಿ ರೂ.5,000/- ಗಳಿಂದ 5,400/- ಗಳನ್ನು ಶಿಕ್ಷಕರಿಗೆ ಪಾವತಿ ಮಾಡಲಾಗುತ್ತಿದೆ.

ಆದರೆ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಶಿಕ್ಷಕರ ಸಂಭಾವನೆಯನ್ನು ಮಾಸಿಕ ರೂ.6,000/- ದಿಂದ 10,000/- ಕ್ಕೆ ಹಾಗೂ ಪದವಿ ಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರಿಗೆ ರೂ.7,000/- ದಿಂದ ರೂ.12,000/-ದವರೆಗೆ ಗೌರವಧನವನ್ನು ನಿಗಧಿಪಡಿಸಿ 68 ನೇ ಆಡಳಿತ ಮಂಡಳಿಯಲ್ಲಿ ತೀರ್ಮಾನವಾಗಿದ್ದು ಅದರಂತೆ ಸರ್ಕಾರದ ಆದೇಶ ಕ್ರಮ ಸಂಖ್ಯೆ : ಸಕಇ 310 ಮೊದೇಶಾ 2017 ದಿನಾಂಕ:15-06-2017 ರಂದು ಆದೇಶ ಹೊರಡಿಸಲಾಗಿರುತ್ತದೆ.

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಮೊರಾರ್ಜಿ ದೇಸಾಯಿ ವಸತಿ ಶಾಲೆ(ಹಿಂ.ವರ್ಗ), ಹೆರಂಜಾಲು ಈ ವಸತಿ ಶಾಲೆಗೆ ದಿನಾಂಕ; 26-12-2017 ಮತ್ತು 27-12-2017 ರಂದು ಮಾನ್ಯ ನ್ಯಾಯಮೂರ್ತಿಗಳಾದ ಶ್ರೀ. ಪಿ. ವಿಶ್ವನಾಥ ಶೆಟ್ಟಿ, ಕರ್ನಾಟಕ ಲೋಕಾಯುಕ್ತ, ರವರು ಅನಿರೀಕ್ಷಿತ ಬೇಟಿ ನೀಡಿ ಶಿಕ್ಷಕರುಗಳಿಗೆ ನೀಡುತ್ತಿರುವ ವೇತನದಲ್ಲಿ ತಾರತಮ್ಯ ಇರುವ ಬಗ್ಗೆ ತೀವ್ರವಾಗಿ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ.

ಈ ಕುರಿತಂತೆ ದಿನಾಂಕ: 13-03-2018ರೊಳಗಾಗಿ ಹೇಳಿಕೆ/ಉತ್ತರವನ್ನು ಸಲ್ಲಿಸುವಂತೆ ಆದೇಶಿಸಿರುತ್ತಾರೆ. ಮಾನ್ಯರು ನೀಡಿರುವ ಸೂಚನೆಯಲ್ಲಿ ಪ್ರಮುಖವಾಗಿ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ವೇತನ ತಾರತಮ್ಯದ ಬಗ್ಗೆ ವಿವರಿಸುತ್ತಾ, ಈ ಕೆಳಕಂಡ ಅಂಶಗಳನ್ನು ದಾಖಲಿಸಿರುತ್ತಾರೆ.

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

1. Its is a settled principle of law that there cannot be any disparity in payment of wages/salary when all the teachers are discharging the same type of work and discharging the same work load.
2. The unequal wages or payment of salary on persons who are equally placed amounts to discrimination in nature and is in violation of right to equality guaranteed under Article 14 of the Constitution of Indial. The Hon'ble Supreme Court in the case of Randhir Singh Vs. Union of India and others (1982) 1 SCC 618, has taken a view that there cannot be unequall pay for the same work discharged.

ಅಲ್ಲದೇ, ವಸತಿ ಶಾಲಾ ಕಾಲೇಜುಗಳಲ್ಲಿನ ಗ್ರೂಪ್ ಡಿ ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯ ಅಧಿಸೂಚನೆಯಂತೆ ಕನಿಷ್ಟ ವೇತನವನ್ನು ಪಾವತಿಸಲಾಗುತ್ತಿದ್ದು, ಈ ವೇತನವು ಹೊರಸಂಪನ್ಮೂಲದಿಂದ ಕರ್ತವ್ಯನಿರ್ವಹಿಸುತ್ತಿರುವ ಶಿಕ್ಷಕರುಗಳಿಗಿಂತ ಹೆಚ್ಚಾಗಿರುತ್ತದೆ.

ಮೇಲ್ಕಂಡ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಕ್ರಮ ಸಂಖ್ಯೆ : ಸಕಇ 310 ಮೊದೇಶಾ 2017 ದಿನಾಂಕ:15-06-2017 ಪ್ರಕಾರ ಅತಿಥಿ ಶಿಕ್ಷಕರುಗಳಿಗೆ ನಿಗಧಿಪಡಿಸಿದ ಮಾಸಿಕ ವೇತನ ರೂ.10,000/- ಗಳಂತೆ ಶಾಲೆಯಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಶಿಕ್ಷಕರಿಗೂ ಸಹ ಮಾಸಿಕ ರೂ.10,000/- ಗಳನ್ನು ನಿಗಧಿಪಡಿಸುವ ಕುರಿತು ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ, ಮುಂದಿನ ತೀರ್ಮಾನ ಕೋರಿದೆ.

<u>ತೀರ್ಮಾನ</u>

**ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿತು., ಈ ಕೆಳಕಂಡಂತೆ ತೀರ್ಮಾನಿಸಿತು.**

1. **ವಸತಿ ಶಾಲೆಗಳಲ್ಲಿ ಈಗಾಗಲೇ ಸರ್ಕಾರದ ಆದೇಶದನ್ವಯ ಅತಿಥಿ ಶಿಕ್ಷಕರುಗಳಿಗೆ ಮಾಸಿಕ ವೇತನ ರೂ. 10,000/-ಗಳನ್ನು ಪಾವತಿಸಲಾಗುತ್ತಿರುವುದನ್ನು ಸಭೆಯು ಅವಲೋಕಿಸಿತು.**
2. **ವಸತಿ ಶಾಲೆಳಲ್ಲಿ ಹೊರಸಂಪನ್ಮೂಲವತಿಯಿಂದ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಸಹ ಅತಿಥಿ ಶಿಕ್ಷಕರುಗಳಷ್ಟೇ ಕಾರ್ಯಭಾರವನ್ನು ನಿರ್ವಹಿಸುತ್ತಿರುವುದರಿಂದ ಹಾಲಿ ನೀಡುತ್ತಿರುವ ಮಾಸಿಕ ವೇತನ ರೂ..6600/-ಗಳನ್ನು ರೂ..10,000/-ಗಳಿಗೆ ಹೆಚ್ಚಿಸಲು ಅನುಮೋದಿಸಿತು.**
3. **ವಸತಿ ಶಾಲೆಗಳಲ್ಲಿ ಹೊರಸಂಪನ್ಮೂಲವತಿಯಿದ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಂಶುಪಾಲರುಗಳಿಗೂ ಸಹ ಪ್ರಸ್ತುತ ಪಾವತಿಸುತ್ತಿರುವ ಮಾಸಿಕ ರೂ.8000/-ಗಳನ್ನು ರೂ.12,000/- ಹೆಚ್ಚಿಸಲು ಅನುಮೋದಿಸಿತು.**

**ಮೇಲ್ಕಂಡಂತೆ, ವೇತನ ಹೆಚ್ಚಳಕ್ಕೆ ಸರ್ಕಾರದ ಅನುಮೋದನೆಯೊಂದಿಗೆ ಕ್ರಮವಹಿಸಲು ಆಡಳಿತ ಮಂಡಳಿಯು ಅನುಮೋದಿಸಿತು.**

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

**ವಿಷಯ ಸಂಖ್ಯೆ: 36**

**2018-19ನೇ ಸಾಲಿಗೆ ವಸತಿ ಶಾಲೆ/ಕಾಲೇಜುಗಳ ಬೋದಕ ಸಿಬ್ಬಂದಿಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಶೈಕ್ಷಣಿಕ ಸುಗಮಗಾರರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ:-**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಪ್ರಸ್ತುತ 818 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಸದರಿ ವಸತಿ ಶಾಲೆಗಳಲ್ಲಿ ಪ್ರಸ್ತುತ 128514 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುತ್ತಾರೆ. ಶಿಕ್ಷಣ ಇಲಾಖೆಯಲ್ಲಿ ವಸತಿ ಶಾಲೆ/ಕಾಲೇಜುಗಳ ಬೋದನಾ ಸಾಮರ್ಥ್ಯದ ಬಗ್ಗೆ ಕಾಲಕಾಲಕ್ಕೆ ವಿಷಯವಾರು ಜಿಲ್ಲಾವಾರು ಪರಿವೀಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಅಲ್ಲದೇ ವಿಷಯ ಪರಿವೀಕ್ಷಕರೊಂದಿಗೆ ಜಿಲ್ಲೆಗೆ ಇಬ್ಬರು ವಿದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಸದರಿ ವಿಷಯ ಪರಿವೀಕ್ಷರು ಮತ್ತು ವಿದ್ಯಾಧಿಕಾರಿಗಳು ಶಾಲೆಗಳಿಗೆ ಕಾಲಕಾಲಕ್ಕೆ ಭೇಟಿ ಮಾಡಿ ಬೋದಕ ಸಿಬ್ಬಂದಿಗಳಿಗೆ ಬೋಧನ ಸಾಮರ್ಥ್ಯ ಮತ್ತು ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಪರಿಶೀಲಿಸುವರು. ಅದರೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಈ ವ್ಯವಸ್ಥೆ ಇರುವುದಿಲ್ಲ. ಸಂಘದ ಎಲ್ಲಾ ವಸತಿ ಶಾಲೆಗಳು ಆಂಗ್ಲ ಮಾಧ್ಯಮದ ಶಾಲೆಗಳಾಗಿದ್ದು, ಈ ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾತಿ/ಪ.ಪಂಗಡ/ಹಿಂದುಳಿದ ವರ್ಗದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಿ ವೃತ್ತಿಪರ ಕೋರ್ಸ್‌ಗಳಿಗೆ ದಾಖಲಾಗುವಂತೆ ಪ್ರೇರೇಪಿಸುವುದು ಸಂಘದ ಗುರಿಯಾಗಿದೆ. ಆದುದರಿಂದ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಉತ್ತಮ ಶಿಕ್ಷಣ ನೀಡಲು ಹಾಗೂ ವಿದ್ಯಾರ್ಥಿಗಳು ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಲು ಶೈಕ್ಷಣಿಕ ಮಾರ್ಗದರ್ಶನಕ್ಕೆ ಶೈಕ್ಷಣಿಕ ಸಲಹೆಗಾಗರರನ್ನು ನೇಮಕಮಾಡಿಕೊಳ್ಳುವುದು ಅವಶ್ಯಕವಾಗಿದೆ.

ವಿಷಯವನ್ನು ಸಭೆಯ ಮುಂದೆ ಮಂಡಿಸುತ್ತಾ, ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಜಂಟಿ ನಿರ್ದೇಶಕರು/ಉಪನಿರ್ದೇಶಕರು ಹುದ್ದೆಯಲ್ಲಿ ನಿವೃತ್ತಿಹೊಂದಿದ ಹಾಗೂ ವಸತಿ ಶಾಲೆಗೆ ಭೇಟಿ ನೀಡಲು ಸಾಮರ್ಥ್ಯ ಹೊಂದಿರುವ ಶೈಕ್ಷಣಿಕ ಸಲಹೆಗಾರರನ್ನು 3 ಜಿಲ್ಲೆಗೆ ಒಬ್ಬರಂತೆ ಒಟ್ಟು 10 ಶೈಕ್ಷಣಿಕ ಸಲಹೆಗಾರರನ್ನು ಜೂನ್-2018ರ ಶೈಕ್ಷಣಿ ವರ್ಷಕ್ಕೆ ಸೀಮಿತಗೊಳಿಸಿ, ಪ್ರತಿ ಮಾಹೆಗೆ ರೂ.25,000/- ಗೌರವಧನದಲ್ಲಿ ನೇಮಕ ಮಾಡಿಕೊಳ್ಳಲು ಹಾಗೂ ಸದರಿ ಶೈಕ್ಷಣಿಕ ಸಲಹೆಗಾರರಿಗೆ ವಸತಿ ಶಾಲೆಗಳ ಭೇಟಿಯ ಸಂದರ್ಭದಲ್ಲಿ ಸರ್ಕಾರದ ನಿಯಮದಂತೆ ಪ್ರಯಾಣ ಭತ್ಯೆ ಪಾವತಿಸಲು ಆಡಳಿತ ಮಂಡಳಿಯ ಅನುಮೋದನೆ ಕೋರಿದೆ.

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ತೀರ್ಮಾನ

ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿ ವಸತಿ ಶಾಲೆಗಳನ್ನು ಶೈಕ್ಷಣಿಕವಾಗಿ ಬಲಪಡಿಸಲು ಕಂದಾಯ ವಿಭಾಗವಾರು ಜಂಟಿ ನಿರ್ದೇಶಕರುಗಳ ಹುದ್ದೆಗಳನ್ನು ಸೃಜಿಸಿ, ಸದರಿ ಹುದ್ದೆಗಳನ್ನು ಶಿಕ್ಷಣ ಇಲಾಖೆಯಿಂದ ನಿಯೋಜನೆ ಮೇಲೆ ನೇಮಕ ಮಾಡಿಕೊಂಡಲ್ಲಿ ಶಿಕ್ಷಣ ಇಲಾಖೆಯ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮಗಳನ್ನು ಈ ವಸತಿ ಶಾಲೆಗಳಿಗೂ ಸಹ ವಿಸ್ತರಿಸಿಕೊಳ್ಳುವುದು ಸೂಕ್ತವೆಂದು ಅಭಿಪ್ರಾಯಿಸಲಾಯಿತು ಹಾಗೂ ಈ ಹುದ್ದೆಗಳನ್ನು ಸೃಜಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು.

ಸಂಘದ ಅಕಾಡೆಮಿಕ್ ಕೌನ್ಸಿಲ್‌ನ ಅಧ್ಯಕ್ಷರಾದ ಡಾ:ನಿರಂಜನ್ ಆರಾಧ್ಯರವರು ಮಾತಾನಾಡಿ, ಆಯಾ ಜಿಲ್ಲಾ ಶಿಕ್ಷಣ ತರಬೇತಿ ಕೇಂದ್ರಗಳಲ್ಲಿ (DIET) ಕರ್ತವ್ಯ ನಿರ್ವಹಿಸುತ್ತಿರುವ ಹಿರಿಯ ಶಿಕ್ಷಣಾಧಿಕಾರಿಗಳ ಹಾಗೂ ವಿಷಯ ತಜ್ಞರ ಸೇವೆಯನ್ನು ವಸತಿ ಶಾಲೆಗಳ ಶೈಕ್ಷಣಿಕ ಗುಣಮಟ್ಟ ಪರಿಶೀಲನೆ ಹಾಗೂ ವಸತಿ ಶಾಲೆಗಳ ಸಮರ್ಪಕ ಶೈಕ್ಷಣಿಕ ನಿರ್ವಹಣೆಗೆ ಬಳಸಿಕೊಳ್ಳಬಹುದಾಗಿದೆಯೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆರವರು ಈ ಬಗ್ಗೆ ಸಮ್ಮತಿಯನ್ನು ವ್ಯಕ್ತಪಡಿಸಿದರು.

ಈ ಸಂಬಂಧ ವಸತಿ ಶಾಲೆಯಲ್ಲಿನ ಶೈಕ್ಷಣಿಕ ಗುಣಮಟ್ಟವನ್ನು ಬಲಪಡಿಸಲು ಸಂಘದ ಅಕಾಡೆಮಿಕ್ ಕೌನ್ಸಿಲ್ ಸಭೆಯಲ್ಲಿ ಚರ್ಚಿಸಿ, ಅಗತ್ಯವಿರುವಂತೆ ಕ್ರಮವಹಿಸಲು ಆಡಳಿತ ಮಂಡಳಿಯು ತೀರ್ಮಾನಿಸಿತು.

ವಿಷಯ ಸಂಖ್ಯೆ: 37

ನೀರಿನ ಸಮಸ್ಯೆ ಇರುವ ವಸತಿ ಶಾಲೆಗಳಿಗೆ ಟ್ಯಾಂಕರ್ ಮೂಲಕ ಖಾಸಗಿಯವರಿಂದ ಕುಡಿಯುವ ನೀರು ಖರೀದಿಸುತ್ತಿರುವ ಬಗ್ಗೆ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲಾ ಆವರಣದಲ್ಲಿ ಕೊರೆಯಿಸಲಾಗಿರುವ ಕೊಳವೆ ಬಾವಿಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದ್ದು, ದೈನಂದಿನ ಉಪಯೋಗಕ್ಕಾಗಿ ನೀರಿನ ಕೊರತೆ ಉಂಟಾಗುತ್ತಿದ್ದು, ವಸತಿ ಶಾಲೆಯನ್ನು ಸುಸೂತ್ರವಾಗಿ ನಿರ್ವಹಿಸಲು ಖಾಸಗಿ ಬೋರ್‌ವೆಲ್ ಮಾಲಿಕರಿಂದ ಟ್ಯಾಂಕರ್ ಮೂಲಕ ನೀರನ್ನು ಖರೀದಿಸಲಾಗುತ್ತಿದೆ. ನೀರಿನ ಸುವ್ಯವಸ್ಥೆಗಾಗಿ ಹಲವು ಬಾರಿ ಬೇರೆ ಬೇರೆ ಸ್ಥಳ ಪರಿಶೀಲನೆ ಮಾಡಿ ಭೂಗರ್ಭ ತಜ್ಞರಿಂದ ದೃಢೀಕರಿಸಿ, ಕೊಳವೆಬಾವಿ ಕೊರೆಯಿಸಿದರೂ ಸಹ ಸಾಕಷ್ಟು ಪ್ರಮಾಣದಲ್ಲಿ ನೀರು ಬಂದಿರುವುದಿಲ್ಲ. ಇದರಿಂದಾಗಿ ವಸತಿ ಶಾಲೆಗಳ ನಿರ್ವಹಣೆ ತುಂಬಾ ಕಷ್ಟಕರವಾಗುತ್ತಿರುವ ಬಗ್ಗೆ ಸಂಬಂಧಪಟ್ಟ ಪ್ರಾಂಶುಪಾಲರುಗಳಿಂದ ಕೇಂದ್ರ ಕಛೇರಿಗೆ ದೂರುಗಳು ಸ್ವೀಕೃತವಾಗುತ್ತಿವೆ.

ಮೇಲ್ಕಂಡ ಹಿನ್ನೆಲೆಯಲ್ಲಿ ಆಯಾ ಜಿಲ್ಲಾಧಿಕಾರಿಗಳು ನಿಗಧಿಪಡಿಸಿರುವ ದರದಂತೆ ಮತ್ತು ಸರ್ಕಾರವು ಪ್ರತಿ ವಿದ್ಯಾರ್ಥಿಗೆ ಪ್ರತಿ ದಿನಕ್ಕೆ 40 ಲೀಟರ್ ನೀರನ್ನು ಬಳಸುವಂತೆ ಮಿತಿಗೊಳಿಸಿರುತ್ತದೆ.

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ಆದರೆ, ಕೆಲವೊಂದು ವಸತಿ ಶಾಲೆಗಳಲ್ಲಿ ನಿಗಧಿಪಡಿಸಿದ ಮಿತಿಗಿಂತ ಹೆಚ್ಚಿನ ಪ್ರಮಾಣದ ನೀರನ್ನು ಖರೀದಿ ಮಾಡಿ ಬಳಸುತ್ತಿರುವುದು ಕಂಡು ಬಂದಿರುತ್ತದೆ. ಈ ರೀತಿ ಖಾಸಗಿಯವರಿಂದ ವಸತಿ ಶಾಲೆಯ ದೈನಂದಿನ ಬಳಕೆಗೆ ಟ್ಯಾಂಕರ್ ಮೂಲಕ ನೀರು ಖರೀದಿಸಿ ಉಪಯೋಗಿಸುತ್ತಿರುವುದರಿಂದ ನೀರಿನ ವೆಚ್ಚದ ಬಾಬ್ತಿಗಾಗಿ ಹೆಚ್ಚಿನ ಪ್ರಮಾಣದಲ್ಲಿ ಅನುದಾನದ ವೆಚ್ಚ ಭರಿಸಬೇಕಾಗಿರುತ್ತದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅಗತ್ಯ ಇರುವ ಕಡೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ನಿಗಧಿಪಡಿಸಿರುವ ದರದಲ್ಲಿ ಟ್ಯಾಂಕರ್ ಮೂಲಕ ನೀರನ್ನು ಖರೀದಿ ಮಾಡಲು ಅನುದಾನವನ್ನು ಸಂಬಂಧಪಟ್ಟ ಪ್ರಾಂಶುಪಾಲರಿಗೆ ಬಿಡುಗಡೆ ಮಾಡಲಾಗುತ್ತಿದೆ.

ಮೇಲ್ಕಂಡ ವಿಷಯವನ್ನು ಆಡಳಿತ ಮಂಡಳಿಯ ಅವಗಾಹನೆಗೆ ಸಲ್ಲಿಸುತ್ತಾ, ಸಂಘವು ಕೈಗೊಂಡ ಕ್ರಮದ ಬಗ್ಗೆ ಅನುಮೋದನೆ ಕೋರಿದೆ.

<u>ತೀರ್ಮಾನ:</u>

1. **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಹಾಗೂ ಸಂಘದ ಉಪಾಧ್ಯಕ್ಷರು ಮತ್ತು ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ವೆಚ್ಚ)ರವರು ಸಭೆಯಲ್ಲಿ ಮಾತಾನಾಡಿ, ಕುಡಿಯುವ ನೀರಿನ ಕೊರತೆ ಇರುವ ವಸತಿ ಶಾಲೆಗಳಿಗೆ ಜಿಲ್ಲಾ ಪಂಚಾಯತ್‌ನ ವಿವಿಧ ಯೋಜನೆ/ಕಾರ್ಯಕ್ರಮಗಳಡಿಯಲ್ಲಿ ಕುಡಿಯುವ ನೀರನ್ನು ಪೂರೈಕೆ ಮಾಡಿಸಿಕೊಳ್ಳಬಹುದಾಗಿದೆಯೆಂದು ತಿಳಿಸಿದರು. ಈ ಸಂಬಂಧ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಅಗತ್ಯಕ್ರಮ ಕೈಗೊಳ್ಳುವಂತೆ ಕೋರಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆರವರಿಂದ ಅರೆ ಸರ್ಕಾರಿ ಪತ್ರವನ್ನು ಬರೆಯಲು ತೀರ್ಮಾನಿಸಲಾಯಿತು.**
2. **ಕುಡಿಯುವ ನೀರಿನ ಕೊರತೆ ಇರುವ ವಸತಿ ಶಾಲೆಗಳಿಗೆ ಪ್ರತಿದಿನ ಪ್ರತಿ ವ್ಯಕ್ತಿ/ವಿದ್ಯಾರ್ಥಿಗೆ ನಿಗಧಿತ 40 ಲೀಟರ್‌ಗಳ ನೀರನ್ನು ಖಾಸಗಿ ಟ್ಯಾಂಕರ್‌ಗಳ ಮೂಲಕ ಜಿಲ್ಲಾಧಿಕಾರಿಗಳು ಜಿಲ್ಲೆಗೆ ನಿಗಧಿಪಡಿಸಿದ ದರದಂತೆ ಖರೀದಿಸಲು ಅನುಮೋದಿಸಲಾಯಿತು.**
3. **ನೋಡಲ್ ಏಜೆನ್ಸಿ ಸಲಹೆಗಾರರು, ಪಜಾತಿ/ಪ.ವರ್ಗ ಉಪಯೋಜನೆ, ಸಮಾಜ ಕಲ್ಯಾಣ ಇಲಾಖೆರವರು ಮಾತಾನಾಡಿ, ವಸತಿ ಶಾಲೆಗಳಿಗೆ ಅಕ್ಕಪಕ್ಕದಲ್ಲಿನ ಜಮೀನಿನಲ್ಲಿ ಭೂಮಾಲೀಕರು ಕೊಳವೆಬಾವಿ ಕೊರೆಯಿಸಿದ್ದಲ್ಲಿ ದರ ಸಂಧಾನ ಮಾಡಿಕೊಂಡು, ಜಿಲ್ಲಾಧಿಕಾರಿಗಳು ಆಯಾ ಜಿಲ್ಲೆಗೆ ನಿಗಧಿಪಡಿಸಿದ ದರದ ಮಿತಿಯೊಳಗೆ ಪಾವತಿ ಆಧಾರದ ಮೇಲೆ ವಸತಿ ಶಾಲೆಗಳಿಗೆ ನೀರು ಪೂರೈಕೆಗೆ ಅಗತ್ಯ ಕ್ರಮವಹಿಸುವಂತೆ ತೀರ್ಮಾನಿಸಲಾಯಿತು.**

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

<u>ವಿಷಯ ಸಂಖ್ಯೆ: 38</u>
**<u>ಬೆಳಗಾವಿ ವಿಭಾಗದ ವಸತಿ ಶಾಲೆ / ಕಾಲೇಜುಗಳಿಗೆ ಆಹಾರ ಪದಾರ್ಥಗಳಿಗೆ ಕರೆಯಲಾದ ಟೆಂಡರ್‌ನ್ನು ಅಂತಿಮಗೊಳಿಸಿ, ಸರಬರಾಜು ಆದೇಶವನ್ನು ನೀಡುವ ಕುರಿತು.</u>**

2016-17ನೇ ಸಾಲಿನಲ್ಲಿ ಬೆಳಗಾವಿ ವಿಭಾಗಕ್ಕೆ ಆಹಾರ ಸರಬರಾಜಿಗೆ ಕರೆಯಲಾದ ಟೆಂಡರ್‌ಗೆ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠದಲ್ಲಿ ಪ್ರಕರಣ ಸಂಖ್ಯೆ 106999/2016 (GM TEN) ದಾಖಲಾಗಿದ್ದು ಟೆಂಡರ್‌ಗೆ ತಡೆಯಾಜ್ಞೆ ನೀಡಲಾಗಿರುತ್ತದೆ. ಈ ರಿಟ್ ಅರ್ಜಿಯನ್ನು ದಿನಾಂಕ:09-06-2017 ರಂದು ವಜಾಗೊಳಿಸಲಾಗಿದೆ. ಈ ಬಗ್ಗೆ ಟೆಂಡರ್ ಪ್ರಕ್ರಿಯೆ ಕೈಗೊಳ್ಳುವ ಸಂಬಂಧ ಅನುಮೋದನೆಗಾಗಿ ಸರ್ಕಾರಕ್ಕೆ ಏಕಕಡತವನ್ನು ಸಲ್ಲಿಸಲಾಗಿತ್ತು.

ಪ್ರಸ್ತುತ ಸರ್ಕಾರದ ಪತ್ರ ಸಂಖ್ಯೆ: ಸಕಇ 425 ಮೊದೇಶಾ 2017, ದಿನಾಂಕ:19-12-2017ರಲ್ಲಿ ಮೆ॥ ಭಾರತೀಯ ರಾಷ್ಟ್ರೀಯ ಗ್ರಾಹಕರ ಸಹಕಾರ ಮಹಾಸಂಘ ನಿಯಮಿತ, ಬೆಂಗಳೂರು ಶಾಖೆ ಇವರಿಂದ ಆಹಾರ ಸರಬರಾಜು ಮಾಡಲು ಕಾರ್ಯದೇಶ ನೀಡಲು ಅನುಮೋದನೆಯನ್ನು ನೀಡಿರುತ್ತಾರೆ. ಅದರಂತೆ ಮೆ॥ ಭಾರತೀಯ ರಾಷ್ಟ್ರೀಯ ಸಹಕಾರ ಮಹಾಸಂಘ ನಿಯಮಿತ, ಬೆಂಗಳೂರು ಶಾಖೆ ರವರಿಗೆ ದಿನಾಂಕ: 29-12-2017 ರಂದು ಸರಬರಾಜು ಆದೇಶ ನೀಡಲಾಗಿರುತ್ತದೆ.

ಮೇಲ್ಕಂಡಂತೆ ಸಂಘವು ಕೈಗೊಂಡ ಕ್ರಮವನ್ನು ಆಡಳಿತ ಮಂಡಳಿ ಸಭೆಯ ಅವಗಾಹನೆಗೆ ಸಲ್ಲಿಸಿದೆ.

**ತೀರ್ಮಾನ:**
**ಆಡಳಿತ ಮಂಡಳಿಯು ವಿಷಯವನ್ನು ಅವಗಾಹಿಸಿತು..**

<u>ವಿಷಯ ಸಂಖ್ಯೆ: 39</u>
**<u>2016-17ನೇ ಸಾಲಿನಲ್ಲಿ ಬೆಂಗಳೂರು ವಿಭಾಗದ ವಸತಿ ಶಾಲೆ / ಕಾಲೇಜುಗಳಿಗೆ ಆಹಾರ ಪದಾರ್ಥಗಳ ಪೂರೈಕೆಗೆ ಕರೆಯಲಾದ ಟೆಂಡರ್‌ಗೆ ಕರ್ನಾಟಕ ಉಚ್ಚ ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ಆಹಾರ ಪದಾರ್ಥಗಳ ಪೂರೈಕೆಗೆ 2015-16 ಸಾಲಿನಲ್ಲಿ ಆದೇಶಿಸಿರುವ ಬಗ್ಗೆ.</u>**

2016-17ನೇ ಸಾಲಿನಲ್ಲಿ ಬೆಂಗಳೂರು ವಿಭಾಗಕ್ಕೆ ಆಹಾರ ಸರಬರಾಜಿಗೆ ಕರೆಯಲಾದ ಟೆಂಡರ್‌ಗೆ Sri. B.S.Ravindra S/o, Shanthaveeraih, R/AT Rajathadri Traders,

ಕಾರ್ಯನಿರ್ವಾಹಕ ನಿರ್ದೇಶಕರು | ಅಧ್ಯಕ್ಷರು

Chennagiri Town, Chennagiri, Davanagere dist. ರವರು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ಇಲ್ಲಿ ಫಕ 46903/2016 (GM-TEN) ಪ್ರಕರಣವನ್ನು ಹೂಡಿದ್ದು ಸದರಿ ಪ್ರಕರಣದಲ್ಲಿ ಬೆಂಗಳೂರು ವಿಭಾಗಕ್ಕೆ ಸಂಬಂಧಿಸಿದಂತೆ ವಿಭಾಗವಾರು ಟೆಂಡರ್ ಅಧಿಸೂಚನೆಯನ್ನು ರದ್ದುಗೊಳಿಸಿ ಜಿಲ್ಲಾ ಮಟ್ಟದಲ್ಲಿ ಟೆಂಡರ್ ಕರೆಯಲು ನಿರ್ದೇಶನ ನೀಡುವಂತೆ ಹಾಗೂ ಬೆಂಗಳೂರು ವಿಭಾಗದ ಟೆಂಡರ್ ಪ್ರಕ್ರಿಯೆಯನ್ನು ಸ್ಥಗಿತಗೊಳಿಸುವಂತೆ ಆದೇಶ ನೀಡಲು ರಿಟ್ ಅರ್ಜಿ ಸಲ್ಲಿಸಿರುತ್ತಾರೆ.

ಮಾನ್ಯ ನ್ಯಾಯಾಲಯವು ಪ್ರಕರಣವನ್ನು ಆಲಿಸಿ, ಪ್ರಕರಣವು ಇತ್ಯರ್ಥವಾಗುವವರೆಗೆ ಬೆಂಗಳೂರು ವಿಭಾಗಕ್ಕೆ ಕರೆಯಲಾದ ಟೆಂಡರ್ ಬಿಡ್‌ನ್ನು ತೆರೆಯದಿರುವಂತೆ ಮಧ್ಯಂತರ ತಡೆಯಾಜ್ಞೆಯನ್ನು ನೀಡಿರುತ್ತದೆ.

ಪ್ರಕರಣವು ಇನ್ನೂ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಇರುವುದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ 2015-16 ನೇ ಸಾಲಿನಲ್ಲಿ ಟೆಂಡರ್ ಕರೆದು 49 ತಕ್ಷಣವೇ ಕೆಡದ ಆಹಾರ ಪದಾರ್ಥಗಳನ್ನು ಸರಬರಾಜು ಮಾಡುತ್ತಿದ್ದು ಹಿಂದಿನ ಟೆಂಡರ್‌ದಾರರಿಂದ ಈಗಾಗಲೇ ಅನುಮೋದಿತವಾಗಿರುವ ದರದಲ್ಲಿಯೇ ಆಹಾರ ಪದಾರ್ಥಗಳನ್ನು ಖರೀದಿ ಮಾಡಲು ಸರ್ಕಾರದ ಅನುಮೋದನೆ ಪಡೆಯಲಾಗಿದೆ.

ವಿಷಯವನ್ನು ಆಡಳಿತ ಮಂಡಳಿಯ ಅವಗಾಹನೆಗೆ ಮಂಡಿಸಿದೆ.

**ತೀರ್ಮಾನ:**
**ಆಡಳಿತ ಮಂಡಳಿಯು ವಿಷಯವನ್ನು ಅವಗಾಹಿಸಿ ಅನುಮೋದಿಸಿತು,**

ವಿಷಯ ಸಂಖ್ಯೆ: 40
**2017-18ನೇ ಸಾಲಿನಲ್ಲಿ ಮೈಸೂರು ಮತ್ತು ಕಲಬುರುಗಿ ವಿಭಾಗಗಳ ವಸತಿ ಶಾಲೆ / ಕಾಲೇಜುಗಳಿಗೆ ಆಹಾರ ಪದಾರ್ಥಗಳ ಪೂರೈಕೆಗೆ 2016-17ನೇ ಸಾಲಿನಲ್ಲಿ ನಿಗದಿಪಡಿಸಿದ ಗುತ್ತಿಗೆದಾರರಿಂದ ಆಹಾರ ಸರಬರಾಜು ಮಾಡಲು ಆದೇಶಿಸಿರುವ ಬಗ್ಗೆ.**

2016-17 ನೇ ಸಾಲಿನಲ್ಲಿ ಮೈಸೂರು ಮತ್ತು ಕಲಬುರ್ಗಿ ವಿಭಾಗದ ವಸತಿ ಶಾಲಾ/ಕಾಲೇಜುಗಳಿಗೆ ತಕ್ಷಣ ಕೆಡದ (ಗ್ರೂಪ್ ಎ) ಹಾಗೂ ಕೆಡಬಹುದಾದ (ಗ್ರೂಪ್ ಬಿ) ಆಹಾರ ಪದಾರ್ಥಗಳ ಪೂರೈಕೆಯ ಕುರಿತು ಟೆಂಡರ್ ಕರೆದು ಈ ಕಛೇರಿಯ ಸರಬರಾಜು ಆದೇಶದ ಕ್ರಮ ಸಂಖ್ಯೆ:ಕವಶಿಸಸ/ಶಿಕ್ಷಣ/ಸಿಆರ್-50/2016-17/ಭಾಗ-2 ದಿನಾಂಕ: 22-11-2016ರಲ್ಲಿ ಸರಬರಾಜು

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ಆದೇಶ ನೀಡಲಾಗಿರುತ್ತದೆ. ಸದರಿ ಗುತ್ತಿಗೆದಾರರೊಂದಿಗೆ ಮಾಡಿಕೊಳ್ಳಲಾದ ಒಪ್ಪಂದದ ಕರಾರಿನ ಅನ್ವಯ ದಿನಾಂಕ:31-12-2017ಕ್ಕೆ ಸರಬರಾಜು ಆದೇಶದ ಅವಧಿಯು ಮುಕ್ತಾಯಗೊಳ್ಳಲಿದೆ.

ಮುಂದುವರೆದು, ಮೇಲ್ಕಂಡ ಎರಡೂ ಕಂದಾಯ ವಿಭಾಗಗಳಿಗೆ ತಕ್ಷಣ ಕೆಡದ (ಗ್ರೂಪ್ ಎ) ಹಾಗೂ ಕೆಡಬಹುದಾದ (ಗ್ರೂಪ್ ಬಿ) ಆಹಾರ ಪದಾರ್ಥಗಳಿಗೆ ಟೆಂಡರ್ ಕರೆಯಲು ಆಡಳಿತಾತ್ಮಕ ಅನುಮೋದನೆಗಾಗಿ ಕಡತವು ಸರ್ಕಾರದ ಹಂತದಲ್ಲಿರುತ್ತದೆ. ಈ ಹಿನ್ನಲೆಯಲ್ಲಿ ಟೆಂಡರ್ ಪೂರ್ಣಗೊಳಿಸಲು ಸುಮಾರು ಎರಡರಿಂದ ಮೂರು ತಿಂಗಳುಬೇಕಾಗಿದ್ದು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಕಛೇರಿಯ ಏಕ ಕಡತ ಸಂಖ್ಯೆ:ಕವಶಿಸಸ/ಆಡಳಿತ/ಸಿಆರ್-50/2016-17/ಭಾಗ-2 ರಲ್ಲಿ ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಸಂಘದ ಅಧ್ಯಕ್ಷರಿಗೆ ಕಡತವನ್ನು ಸಲ್ಲಿಸಲಾಗಿ, ಮುಂದಿನ ಆದೇಶದವರೆಗೆ ತಾತ್ಕಾಲಿಕವಾಗಿ ಈ ಹಿಂದೆ ಸರಬರಾಜು ಮಾಡಿದ ದರದಲ್ಲಿಯೇ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ಆಹಾರ ಪದಾರ್ಥಗಳನ್ನು ಈ ಹಿಂದಿನ ಟೆಂಡರ್ ನಿಯಮಾವಳಿಗಳ ಷರತ್ತು/ನಿಬಂಧನೆಗಳ ಅನ್ವಯ ಸರಬರಾಜು ಪಡೆದುಕೊಳ್ಳಲು ಅನುಮೋದನೆ ನೀಡಿರುತ್ತಾರೆ.

ಈ ವ್ಯವಸ್ಥೆಯು ತಾತ್ಕಾಲಿಕವಾಗಿದ್ದು, 2017-18 ನೇ ಸಾಲಿನಲ್ಲಿ ಸಂಘದ ವಸತಿ ಶಾಲಾ/ಕಾಲೇಜುಗಳಿಗೆ ಆಹಾರ ಪದಾರ್ಥಗಳ ಪೂರೈಕೆಯ ಕುರಿತು ಟೆಂಡರ್ ಕರೆಯುವ ಪ್ರಕ್ರಿಯೆಯು ಪ್ರಗತಿಯಲ್ಲಿರುವುದರಿಂದ ಸದರಿ ಟೆಂಡರ್ ಪ್ರಕ್ರಿಯೆಯು ಪೂರ್ಣಗೊಳ್ಳುವವರೆಗೆ ಅಥವಾ ಮುಂದಿನ ಆದೇಶದವರೆಗೆ ಆಹಾರ ಪದಾರ್ಥಗಳನ್ನು ಅದೇ ದರದಲ್ಲಿ ಪೂರೈಕೆ ಮಾಡಬೇಕಾಗಿ ಗುತ್ತಿಗೆದಾರರಿಗೆ ದಿನಾಂಕ: 01-01-2018 ರಂದು ಆದೇಶಿಸಲಾಗಿರುತ್ತದೆ. ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಅವಗಾಹನೆಗೆ ಸಲ್ಲಿಸಿದೆ.

<u>ತೀರ್ಮಾನ:</u>

**ಆಡಳಿತ ಮಂಡಳಿಯು ವಿಷಯವನ್ನು ಅವಗಾಹಿಸಿ, ಸಂಘವು ತೆಗೆದುಕೊಂಡ ಕ್ರಮವನ್ನು ಅನುಮೋದಿಸಿತು.**

<u>ವಿಷಯ ಸಂಖ್ಯೆ: 41</u>

<u>ಶ್ರೀ.ಯದುಕುಮಾರ್ ಸಿ.ಆರ್. ಹೊರಸಂಪನ್ಮೂಲದ ಪ್ರಾಂಶುಪಾಲರು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ವಿರಾಜಪೇಟೆ, ಕೊಡಗು ಜಿಲ್ಲೆ ಇವರ ಮನವಿಯ ಬಗ್ಗೆ.</u>

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 68ನೇ ಆಡಳಿತ ಮಂಡಳಿಯ ಸಭೆಯಲ್ಲಿ ಶ್ರೀ ಯದುಕುಮಾರ ಸಿ.ಆರ್, ಪ್ರಾಂಶುಪಾಲರು (ಹೊರಸಂಪನ್ಮೂಲ), ಇವರು 2011-12 ನೇ ಸಾಲಿನಲ್ಲಿ ನೇರ ನೇಮಕಾತಿಗೆ ನಡೆದ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಿದ್ದು, ಇವರ ಫಲಿತಾಂಶವು Not Selected

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

Below Cut-Off Percentage ಎಂದು ನಮೂದಾಗಿರುತ್ತದೆ. ಕಾರಣ ಈ ಅಭ್ಯರ್ಥಿಯು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪ್ರಾಂಶುಪಾಲರ ಹುದ್ದೆಗೆ ನಿಗದಿಪಡಿಸಿದ ಕಟ್‌ಆಫ್ ಅಂಕಗಳಿಗಿಂತ ಕಡಿಮೆ ಅಂಕಗಳನ್ನು ಪಡೆದಿರುತ್ತಾರೆ ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿಯ ನಿಯಮದಲ್ಲಿ ತಿಳಿಸಲಾದ ವಿಷಯದಲ್ಲಿ ಸ್ನಾತಕೋತ್ತರ ಪದವಿ (M.A) ಪದವಿಯನ್ನು ಪಡೆದಿರುವುದಿಲ್ಲ. ಇವರು M.A ಸ್ನಾತಕೋತ್ತರ ಪದವಿಯನ್ನು FOLKLORE ವಿಷಯದಲ್ಲಿ ಪಡೆದಿರುತ್ತಾರೆ. ಇಂತಹ ಇನ್ನೊಂದು ಪ್ರಕರಣ ಶ್ರೀ ಕುಮಾರಸ್ವಾಮಿ. ಎಂ ಸೇರಿದಂತೆ ಆಡಳಿತ ಮಂಡಳಿ ಈ ಕೆಳಕಂಡಂತೆ ತೀರ್ಮಾನ ನೀಡಿದೆ.

"ಶ್ರೀ ಯದುಕುಮಾರ್ ಸಿ.ಆರ್ ಹಾಗೂ ಶ್ರೀ. ಕುಮಾರಸ್ವಾಮಿ ಎಂ, ಇವರ ವಿದ್ಯಾರ್ಹತೆಯನ್ನು ನೇಮಕಾತಿಗೆ ಪರಿಗಣಿಸುವ ಬಗ್ಗೆ ದೀರ್ಘವಾಗಿ ಚರ್ಚಿಸಿ ನೇಮಕಾತಿ ಆದೇಶದ ದಿನಾಂಕದಿಂದ ಮೂರು ವರ್ಷದೊಳಗಾಗಿ ಕರ್ನಾಟಕ ವೃಂದ ಮತ್ತು ನೇಮಕಾತಿಯ ನಿಯಮದಲ್ಲಿ ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಬಾಹ್ಯವಾಗಿ ದೂರ ಶಿಕ್ಷಣದ ಮುಖಾಂತರ ತೇರ್ಗಡೆಯಾಗುವ ಷರತ್ತನ್ನು ವಿಧಿಸಿ ನೇಮಕಾತಿ ಆದೇಶವನ್ನು ಸರ್ಕಾರದ ಅನುಮೋದನೆಯೊಂದಿಗೆ ಹೊರಡಿಸಲು ತೀರ್ಮಾನಿಸಲಾಯಿತು"

ಆಡಳಿತ ಮಂಡಳಿಯ ತೀರ್ಮಾನದಂತೆ ಸಂಘವು ಶ್ರೀ ಕುಮಾರಸ್ವಾಮಿ. ಎಂ ಮತ್ತು ಶ್ರೀ ಯದುಕುಮಾರ್ ಸಿ.ಆರ್ ರವರಿಗೆ ನೇಮಕಾತಿ ಆದೇಶ ಹೊರಡಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ ಸರ್ಕಾರವು ತನ್ನ ಪತ್ರ ಸಂಖ್ಯೆ ಸಕಇ 330 ಮೊದೇಶಾ 2017 ದಿನಾಂಕ 03.07.2017 ರಲ್ಲಿ ಈ ಕೆಳಕಂಡ ಅಂಶಗಳ ಮೇಲೆ ಸಂಘದ ಸ್ಪಷ್ಟೀಕರಣ ಕೇಳಿ ಪ್ರಸ್ತಾವನೆ ಮರು ಸಲ್ಲಿಸುವಂತೆ ತಿಳಿಸಿರುತ್ತಾರೆ.

1. ಶ್ರೀ ಕುಮಾರಸ್ವಾಮಿ. ಎಂ. ಶ್ರೀ ಯದುಕುಮಾರ್ ಸಿ.ಆರ್, ಪ್ರಾಂಶುಪಾಲರು (ಹೊರಸಂಪನ್ಮೂಲ) ಇವರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿಗಳಲ್ಲಿ ನಿಗದಿಪಡಿಸಿದ ವಿದ್ಯಾರ್ಹತೆ ಇಲ್ಲದೇ ಇದ್ದರೂ ಸಹ ಪ್ರಾಂಶುಪಾಲರ ಹುದ್ದೆಯದಿನಾಂಕ.02-11-2007 ರಲ್ಲಿ ಹೊರಸಂಪನ್ಮೂಲ ಆಧಾರದ ಮೇಲೆ ಯಾವ ಮಾನದಂಡವನ್ನು ಆಧರಿಸಿ ನೇಮಕಾತಿ ಮಾಡಲಾಗಿದೆ ಹಾಗೂ ದಿನಾಂಕ 14-04-2011 ರ ವರೆಗೆ ಕಾರ್ಯ ನಿರ್ವಹಿಸಲು ಅವಕಾಶ ನೀಡಲು ಕಾರಣವೇನು ?.

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

2. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿಗಳಲ್ಲಿ ನಿಗದಿಪಡಿಸಿದ ವಿದ್ಯಾರ್ಹತೆ ಇಲ್ಲದೇ ಈ ರೀತಿ ಎಷ್ಟು ಬೋದಕ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ ?
3. ಹೊರಸಂಪನ್ಮೂಲ ಆಧಾರದ ಮೇಲೆ ನೇಮಕಗೊಂಡು ನೌಕರರನ್ನು ಖಾಯಮಾತಿ ಮಾಡಲು ನಿಯಮಗಳಲ್ಲಿ ಅವಕಾಶವಿದೆಯೇ? (ಇದ್ದರೆ ಯಾವ ಆದೇಶ/ಸುತ್ತೋಲೆ) ನಿಯಮದಡಿ ಖಾಯಂಗೊಳಿಸಲು ಅವಕಾಶ ಕಲ್ಪಿಸಿದ ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿಯೊಂದಿಗೆ ದಾಖಲೆ ಒದಗಿಸುವುದು.
4. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿಗಳಲ್ಲಿ ನಿಗದಿಪಡಿಸಿದ ವಿದ್ಯಾರ್ಹತೆ ಇಲ್ಲದೇ ಶ್ರೀ ಕುಮಾರಸ್ವಾಮಿ.ಎಂ/ಶ್ರೀ ಯದುಕುಮಾರ್ ಸಿ.ಆರ್, ಇವರನ್ನು ಪ್ರಾಂಶುಪಾಲರ ಹುದ್ದೆಗೆ ನೀಮಕಾತಿ ಮಾಡಿದಲ್ಲಿ ಇದೇ ಮಾದರಿಯ ಮತ್ತಷ್ಟು ಪ್ರಕರಣಗಳು / ನೇಮಕಾತಿ ಅರ್ಜಿಗಳು ಸ್ವೀಕೃತವಾಗುವ ಸಾದ್ಯತೆಯನ್ನು ತಳ್ಳಿಹಾಕುವಂತಿಲ್ಲ, ಆದ್ದರಿಂದ ನಿಯಮಗಳಲ್ಲಿ ತಿಳಿಸಿರುವ ವಿದ್ಯಾರ್ಹತೆ ಇಲ್ಲದೇ ಇದ್ದರೂ ಖಾಯಂಗೊಳಿಸಲು ಮಂಡಳಿ ಸಭೆಗೆ ವಿಷಯ ಮಂಡಿಸಲು ಕಾರಣವೇನು ?
5. ಶ್ರೀ ಕುಮಾರಸ್ವಾಮಿ. ಎಂ/ಶ್ರೀ ಯದುಕುಮಾರ್ ಸಿ.ಆರ್, ಇವರನ್ನು ಪ್ರಾಂಶುಪಾಲರ ಹುದ್ದೆಗೆ ಷರತ್ತು ವಿದಿಸಿ ನೇಮಕಾತಿ ಮಾಡಿದಲ್ಲಿ ಇದೇ ಮಾದರಿಯ ಮತ್ತಷ್ಟು ಪ್ರಕರಣಗಳು / ನೇಮಕಾತಿ ಅರ್ಜಿಗಳು ಸ್ವೀಕೃತವಾಗುವ ಸಾದ್ಯತೆ ಇರುವುದರಿಂದ ಈ ರೀತಿ ಹಿಂದೆ ಯಾವುದಾದರೂ ಆದೇಶ ಹೊರಡಿಸಲಾಗಿದೆಯೇ ? ಪ್ರತಿ / ದಾಖಲೆ ಒದಗಿಸುವುದು. ಆದೇಶ ಹೊರಡಿಸಿದಲ್ಲಿ ನೇಮಕಾತಿ ನಿಯಮಗಳ ಉಲ್ಲಂಘನೆಯಾಗುವುದಿಲ್ಲವೇ?
6. ಮಾನ್ಯ ಉಚ್ಚ ನ್ಯಾಯಾಲಯವು ಹೊರಸಂಪನ್ಮೂಲ ಸಿಬ್ಬಂದಿಗೆ ಯಾವ ಪ್ರಮಾಣದಲ್ಲಿ ಕೃಪಾಂಕ (ಗರಿಷ್ಟ/ಕನಿಷ್ಟ) ನೀಡಲು ತೀರ್ಪು ನೀಡಿದೆ (ಪ್ರತಿ ಸಲ್ಲಿಸುವುದು).
7. ಒಬ್ಬ ವ್ಯಕ್ತಿಯ ಹಿತದೃಷ್ಟಿಯಿಂದ ಇಡೀ ನೇಮಕಾತಿ ನಿಯಮಗಳನ್ನು ಮೀರುವುದು/ಉಲ್ಲಂಘಿಸುವುದು ಸರಿಯೇ ?. ಸೂಕ್ತ ದಾಖಲಾತಿಗಳೊಂದಿಗೆ ಮರು ಪ್ರಸ್ತಾವನೆ ಸಲ್ಲಿಸುವುದು.

ಸಂಘವು ಸದರಿ ಅಂಶಗಳಿಗೆ ಮಾಹಿತಿಯನ್ನು ದಿನಾಂಕ 23-08-2017 ರಂದು ವಿವರವಾದ ಮಾಹಿತಿಯನ್ನು ನೀಡಲಾಗಿದ್ದು ಅನುಬಂದದಲ್ಲಿ ವಿವರಗಳನ್ನು ಇರಿಸಲಾಗಿದೆ.

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ಸರ್ಕಾರವು ಸಂಘದ ಮಾಹಿತಿಯನ್ನು ಪರಿಶೀಲಿಸಿ ಮತ್ತೊಮ್ಮೆ ಆಡಳಿತ ಮಂಡಳಿಯಲ್ಲಿ ಮಂಡಿಸಿ ಚರ್ಚಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳುವಂತೆ ತಿಳಿಸಿದೆ.

ಶ್ರೀ ಯದುಕುಮಾರ ಸಿ.ಆರ್, ಪ್ರಾಂಶುಪಾಲರು (ಹೊರಸಂಪನ್ಮೂಲ) ಮೊರಾರ್ಜಿದೇಸಾಯಿ ವಸತಿ ಶಾಲೆ(ಅ.ಸಂ) ವಿರಾಜಪೇಟೆ, ಕೊಡಗುಜಿಲ್ಲೆ ಇಲ್ಲಿ ದಿನಾಂಕ 11-08-2008 ರಿಂದ 14-04-2011 ರವರೆಗೆ ಸೇವೆಸಲ್ಲಿಸಿರುತ್ತಾರೆ ಹಾಗು ದಿನಾಂಕ 24-07-2011 ರಿಂದ 27-07-2011 ರವರೆಗೆ ನಡೆದ ಸ್ವಾರ್ದಾತ್ಮಕ ಪರೀಕ್ಷೆಯಲ್ಲಿ ಪ್ರಾಂಶುಪಾಲರ ಹುದ್ದೆಗೆ ಪರೀಕ್ಷೆಯನ್ನು ಬರೆದಿರುತ್ತಾರೆ. ಹಾಗು ಇವರು ಪರಿಶಿಷ್ಟ ಜಾತಿಗೆ ಸೇರಿದವರಾಗಿರುತ್ತಾರೆ. ಇವರ ಸ್ವಾರ್ದಾತ್ಮಕ ಪರೀಕ್ಷೆಯ ಫಲಿತಾಂಶವು ಈಗಾಗಲೇ ಮೇಲೆ ವಿವರಿಸಿದಂತೆ Not Selected Below Cut-Off Percentage ಎಂದು ನಮೂದಾಗಿರುತ್ತದೆ.

ಇವರ ಸೇವಾಕೃಪಾಂಕ ನೀಡುವ ಬಗ್ಗೆ ಈ ಕೆಳಕಂಡ ದಾಖಲೆಗಳ ಪ್ರತಿಗಳನ್ನು ಪರಿಶೀಲಿಸಲಾಗಿದ್ದು, ಇವರ ಸ್ನಾತಕೋತ್ತರ (M.A) ಪದವಿಯ ಅಂಕಪಟ್ಟಿಗಳನ್ನು ಪರಿಶೀಲಿಸಲಾಗಿ, ಇವರು M.A ಸ್ನಾತಕೋತ್ತರ ಪದವಿಯನ್ನು FOLKLORE ವಿಷಯದಲ್ಲಿ April/2001 ರಲ್ಲಿ ಪಡೆದಿರುತ್ತಾರೆ. ಹಾಗು ಇವರು M.A ಸ್ನಾತಕೋತ್ತರ ಪದವಿಯಲ್ಲಿ ಅಭ್ಯಾಸ ಮಾಡಿರುವ ವಿಷಯವು (FOLKLORE) ಸಂಘದ ವೃಂದ ಮತ್ತು ನೇಮಕಾತಿಯ ನಿಯಮದಲ್ಲಿ ಇರುವುದಿಲ್ಲ.

**<u>ಸೇವೆಗೆ ಸಂಬಂದಿಸಿದ ಮಾಹಿತಿ</u>**

ನಮೂನೆ-2 ರಲ್ಲಿ ಸಮಿತಿಯು ಈ ಕೆಳಕಂಡ ಅವದಿಯಲ್ಲಿ ಶ್ರೀ ಯದುಕುಮಾರ ಸಿ.ಆರ್, ಇವರು ಪ್ರಾಂಶುಪಾಲರಾಗಿ ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಕರ್ತವ್ಯ ನಿರ್ವಹಿಸಿರುವುದಾಗಿ ದೃಢೀಕರಿಸಿರುತ್ತಾರೆ.

1. 11-08-2008 ರಿಂದ 10-04-2009
2. 01-06-2009 ರಿಂದ 10-04-2010
3. 01-06-2010 ರಿಂದ 10-04-2011

**<u>ಹಾಜರಾತಿಯ ವಿವರ</u>**

ಶ್ರೀ ಯದುಕುಮಾರ ಸಿ.ಆರ್.ಇವರ ಮೂಲ ಹಾಜರಾತಿಯು ಈ ಕೆಳಕಂಡಂತೆ ಇರುತ್ತದೆ

1. 11-08-2008 ರಿಂದ 09-04-2009
2. 01-06-2009 ರಿಂದ 11-04-2010
3. 01-06-2010 ರಿಂದ 09-04-2011

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ಕರ್ನಾಟಕ ಮಾನ್ಯ ಉಚ್ಚ ನ್ಯಾಯಾಲಯವು ಹೊರಸಂಪನ್ಮೂಲ ಸಿಬ್ಬಂದಿಗಳಿಗೆ ಸೇವಾಕೃಪಾಂಕದ ರಿಟ್ ಅಪೀಲ್ ಸಂಖ್ಯೆ WA.NOS 5127/2012 & WA.NOS.5831-61/2012 ರಲ್ಲಿ ಈ ಕೆಳಕಂಡಂತೆ ಆದೇಶಿಸಿರುತ್ತದೆ.

> " While dealing with the regularization of service of temporary employees, the Hon'ble Supreme Court had repeatedly held that ,where initial entry was legal, the candidate were qualified, appointment made against the sanctioned post ,long service would entitle them to be candidate for awarding service weightage. On the other hand, if the initial entry in to service was illegal or where the candidate did not possess the qualification prescribed for the post, the question of awarding service weightage does not arise."

ಸಂಘದ ವೃಂದ ಮತ್ತು ನೇಮಕಾತಿಯ ನಿಯಮದಲ್ಲಿ ಪ್ರಾಂಶುಪಾಲರ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಶ್ರೀ ಯದುಕುಮಾರ ಸಿ.ಆರ್, ಇವರು ಹೊಂದಿಲ್ಲದೆ ಇರುವುದರಿಂದ ಮತ್ತು ಮಾನ್ಯ ಉಚ್ಚ ನ್ಯಾಯಾಲಯದ ಮೇಲಿನ ಆದೇಶದಂತೆ ಇವರಿಗೆ ಸೇವಾಕೃಪಾಂಕ ನೀಡಲು ನಿಯಮದಲ್ಲಿ ಅವಕಾಶವಿರುವುದಿಲ್ಲ ಎಂಬ ಅಂಶವನ್ನು ಮಂಡಿಸಿ ಆಡಳಿತ ಮಂಡಳಿಯ ತೀರ್ಮಾನವನ್ನು ಕೋರಿದೆ.

ಈ ಅಭ್ಯರ್ಥಿಗೆ ಪ್ರಾಂಶುಪಾಲರ ಹುದ್ದೆಗೆ 2 ವರ್ಷಗಳ ಸೇವಾಕೃಪಾಂಕ ಅಗತ್ಯವಿದ್ದು ವೇತನ ಪಾವತಿಗೆ ಸಂಬಂದಿಸಿದಂತೆ ಅಪೂರ್ಣ ದಾಖಲೆಗಳಿವೆ ಹಾಗು ಸಂಘದ ವೃಂದ ಮತ್ತು ನೇಮಕಾತಿಯ ನಿಯಮದಲ್ಲಿ ಪ್ರಾಂಶುಪಾಲರ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಶ್ರೀ ಯದುಕುಮಾರ ಸಿ.ಆರ್, ಇವರು ಹೊಂದಿಲ್ಲದೆ ಇರುವುದರಿಂದ ಮತ್ತು ಮಾನ್ಯ ಉಚ್ಚನ್ಯಾಯಾಲಯದ ಮೇಲಿನ ಆದೇಶದಂತೆ ಇವರಿಗೆ ಸೇವಾಕೃಪಾಂಕ ನೀಡಲು ನಿಯಮದಲ್ಲಿ ಅವಕಾಶವಿರುವುದಿಲ್ಲ. ಈ ಪ್ರಕರಣವನ್ನು ಪರಿಗಣಿಸಿದಲ್ಲಿ ಇಂತಹ ಹಲವಾರು ಪ್ರಕರಣಗಳನ್ನು ಪರಿಗಣಿಸಬೇಕಾಗುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಮಂಡಿಸುತ್ತಾ ಆಡಳಿತ ಮಂಡಳಿಯ ತೀರ್ಮಾನ ಕೋರಿದೆ.

<u>ತೀರ್ಮಾನ:</u>

**ಆಡಳಿತ ಮಂಡಳಿಯು ವಿಷಯವನ್ನು ಚರ್ಚಿಸಿ, ಶ್ರೀ.ಯದುಕುಮಾರ್ ಸಿ.ಆರ್. ಇವರು ಹೊಂದಿರುವ ಎಂ.ಎ.(FOLKLORE) ಸ್ನಾತಕೋತರ ಪದವಿಯನ್ನು ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳಲ್ಲಿ ನಿಗಧಿಪಡಿಸಿರುವುದಿಲ್ಲ. ಆದರೆ, ಬಿ.ಎಡ್ ಪದವಿಯನ್ನು ಅಂಗೀಕೃತ ವಿಶ್ವವಿದ್ಯಾಲಯದಿಂದ ಪಡೆದಿರುತ್ತಾರೆ. ಇವರು, ಸಂಘವು ವೃಂದ ಮತ್ತು ನೇಮಕಾತಿ ವಿನಿಯಮಗಳನ್ನು ಅಳವಡಿಸಿಕೊಳ್ಳುವ ಮೊದಲೇ ವಸತಿ ಶಾಲೆಯಲ್ಲಿ ಪ್ರಾಂಶುಪಾಲರಾಗಿ ಎಂ.ಎ.(FOLKLORE) ಸ್ನಾತಕೋತ್ತರ ಪದವಿಯೊಂದಿಗೆ ಕಾರ್ಯನಿರ್ವಹಿಸಿರುವುದನ್ನು ಪರಿಗಣಿಸಿ, ಈ ಕೆಳಕಂಡ ಷರತ್ತುಗೊಳಪಟ್ಟು,. ಸೇವಾ ಕೃಪಾಂಕ ನೀಡಲು ತೀರ್ಮಾನಿಸಲಾಯಿತು.**

ಕಾರ್ಯನಿರ್ವಾಹಕ ನಿರ್ದೇಶಕರು | ಅಧ್ಯಕ್ಷರು

1. ಶ್ರೀ.ಯದುಕುಮಾರ್ ಇವರು ವಸತಿ ಶಾಲೆಯಲ್ಲಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿರುವ ಬಗ್ಗೆ ಹಾಜರಾತಿ, ಹಾಗೂ ಸದರಿಯವರು ವೇತನ ಪಡೆದಿರುವ ಬಗ್ಗೆ ಪರಿಶೀಲಿಸಿ, ನಂತರ ಸೇವಾ ಕೃಪಾಂಕವನ್ನು ನೀಡತಕ್ಕದ್ದು. ಸೇವಾ ಕೃಪಾಂಕ ನೀಡಿದ ನಂತರ ಸದರಿಯವರು ನೇಮಕಾತಿಗೆ ಅರ್ಹತೆ ಹೊಂದಿರುವ ಬಗ್ಗೆ ಖಚಿತಪಡಸಿಕೊಂಡು, ಸರ್ಕಾರದ ಅನುಮೋದನೆ ಪಡೆದು, ನೇಮಕಾತಿ ಆದೇಶ ನೀಡುವುದು.
2. ಸದರಿಯವರು ನೇಮಕಾತಿ ಆದೇಶ ನೀಡಿದ ದಿನಾಂಕದಿಂದ 3 ವರ್ಷಗಳ ಕಾಲಾವಧಿಯಲ್ಲಿ ಕನ್ನಡ ಅಥವಾ ಸಮಾಜಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆಯತಕ್ಕದ್ದು. ಒಂದು ವೇಳೆ, ಸದರಿಯವರು ನಿಗಧಿತ ಅವಧಿಯೊಳಗೆ ಕನ್ನಡ ಅಥವಾ ಸಮಾಜ ಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆಯದೇ ಇದ್ದಲ್ಲಿ ಸದರಿಯವರನ್ನು ಸೇವೆಯಿಂದ ವಜಾ ಮಾಡತಕ್ಕದ್ದು.

ವಿಷಯ ಸಂಖ್ಯೆ: 42
ಶ್ರೀ ಕುಮಾರಸ್ವಾಮಿ.ಎಮ್ ಪ್ರಾಂಶುಪಾಲರು (ಹೊರಸಂಪನ್ಮೂಲ), ಮೊರಾರ್ಜಿ ದೇಸಾಯಿ ವಸತಿ ಶಾಲೆ(ಪ.ಜಾ) ಹಲಗನಹಳ್ಳಿ ಪಿರಿಯಾಪಟ್ಟಣತಾ॥ ಮೈಸೂರು ಜಿಲ್ಲೆರವರಿಗೆ ಸೇವಾ ಕೃಪಾಂಕ ನೀಡುವ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 68 ನೇ ಆಡಳಿತ ಮಂಡಳಿಯ ಸಭೆಯಲ್ಲಿ ಶ್ರೀ ಕುಮಾರಸ್ವಾಮಿ ಎಂ, ಪ್ರಾಂಶುಪಾಲರು (ಹೊರಸಂಪನ್ಮೂಲ) ಇವರು 2011-12 ನೇ ಸಾಲಿನಲ್ಲಿ ನೇರ ನೇಮಕಾತಿಗೆ ನಡೆದ ಸ್ಪರ್ದಾತ್ಮಕ ಪರೀಕ್ಷೆಗೆ ಹಾಜರಾಗಿದ್ದು, ಇವರ ಫಲಿತಾಂಶವು PR5 (Not Studied Master Degree in Required Subject) ಆಗಿರುತ್ತದೆ. ಕಾರಣ ಈ ಅಭ್ಯರ್ಥಿಯು ಪ್ರಾಂಶುಪಾಲರ ಹುದ್ದೆಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿಯ ನಿಯಮದಲ್ಲಿ ತಿಳಿಸಲಾದ ವಿಷಯದಲ್ಲಿ ಸ್ನಾತಕೋತ್ತರ ಪದವಿ (M.A) ಪದವಿಯನ್ನು ಪಡೆದಿರುವುದಿಲ್ಲ. ಇವರು M.A ಸ್ನಾತಕೋತ್ತರ ಪದವಿಯನ್ನು Cooperative Management ವಿಷಯದಲ್ಲಿ ಪಡೆದಿರುತ್ತಾರೆ. ಇಂತಹ ಇನ್ನೊಂದು ಪ್ರಕರಣ ಶ್ರೀ ಯದು ಕುಮಾರ ಸಿ.ಆರ್ ಸೇರಿದಂತೆ ಆಡಳಿತ ಮಂಡಳಿ ಈ ಕೆಳಕಂಡಂತೆ ತೀರ್ಮಾನ ನೀಡಿದೆ.

"ಶ್ರೀ ಯದುಕುಮಾರ್ ಸಿ.ಆರ್ ಹಾಗೂ ಶ್ರೀ ಕುಮಾರಸ್ವಾಮಿ.ಎಂ, ಇವರ ವಿದ್ಯಾರ್ಹತೆಯನ್ನು ನೇಮಕಾತಿಗೆ ಪರಿಗಣಿಸುವ ಬಗ್ಗೆ ದೀರ್ಘವಾಗಿ ಚರ್ಚಿಸಿ ನೇಮಕಾತಿ ಆದೇಶದ ದಿನಾಂಕದಿಂದ ಮೂರು ವರ್ಷದೊಳಗಾಗಿ ಕರ್ನಾಟಕ ವೃಂದ ಮತ್ತು ನೇಮಕಾತಿಯ ನಿಯಮದಲ್ಲಿ ನಿಗದಿಪಡಿಸಿದ

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ವಿದ್ಯಾರ್ಹತೆಯನ್ನು ಬಾಹ್ಯವಾಗಿ ದೂರ ಶಿಕ್ಷಣದ ಮುಖಾಂತರ ತೇರ್ಗಡೆಯಾಗುವ ಷರತ್ತನ್ನು ವಿಧಿಸಿ ನೇಮಕಾತಿ ಆದೇಶವನ್ನು ಸರ್ಕಾರದ ಅನುಮೋದನೆಯೊಂದಿಗೆ ಹೊರಡಿಸಲು ತೀರ್ಮಾನಿಸಲಾಯಿತು".

ಆಡಳಿತ ಮಂಡಳಿಯ ತೀರ್ಮಾನದಂತೆ ಸಂಘವು ಶ್ರೀ.ಕುಮಾರಸ್ವಾಮಿ. ಎಂ ಮತ್ತು ಶ್ರೀ ಯದುಕುಮಾರ್ ಸಿ.ಆರ್, ಇವರಿಗೆ ನೇಮಕಾತಿ ಆದೇಶ ಹೊರಡಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ ಸರ್ಕಾರವು ತನ್ನ ಪತ್ರ ಸಂಖ್ಯೆ ಸಕಇ 330 ಮೊದೆಶಾ 2017 ದಿನಾಂಕ 03.07.2017 ರಲ್ಲಿ ಈ ಕೆಳಕಂಡ ಅಂಶಗಳ ಮೇಲೆ ಸಂಘದ ಸ್ಪಷ್ಟೀಕರಣ ಕೇಳಿ ಪ್ರಸ್ತಾವನೆ ಮರು ಸಲ್ಲಿಸುವಂತೆ ತಿಳಿಸಿರುತ್ತಾರೆ.

1. ಶ್ರೀ ಕುಮಾರಸ್ವಾಮಿ. ಎಮ್,/ಯದುಕುಮಾರ ಸಿ.ಆರ್, ಪ್ರಾಂಶುಪಾಲರು (ಹೊರಸಂಪನ್ಮೂಲ) ಇವರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿಗಳಲ್ಲಿ ನಿಗದಿ ಪಡಿಸಿದ ವಿದ್ಯಾರ್ಹತೆ ಇಲ್ಲದೇ ಇದ್ದರೂ ಸಹ ಪ್ರಾಂಶುಪಾಲರ ಹುದ್ದೆಯಲ್ಲಿ ದಿನಾಂಕ 02-11-2007 ರಲ್ಲಿ ಹೊರಸಂನ್ಮೂಲ ಆಧಾರದ ಮೇಲೆ ಯಾವ ಮಾನದಂಡವನ್ನು ಆಧರಿಸಿ ನೇಮಕಾತಿ ಮಾಡಲಾಗಿದೆ ಹಾಗೂ ದಿನಾಂಕ 14-04-2011 ರ ವರೆಗೆ ಕಾರ್ಯನಿರ್ವಹಿಸಲು ಅವಕಾಶ ನೀಡಲು ಕಾರಣವೇನು ?
2. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿಗಳಲ್ಲಿ ನಿಗದಿಪಡಿಸಿದ ವಿದ್ಯಾರ್ಹತೆ ಇಲ್ಲದೇ ಈ ರೀತಿ ಎಷ್ಟು ಬೋದಕ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ?
3. ಹೊರಸಂಪನ್ಮೂಲ ಆಧಾರದ ಮೇಲೆ ನೇಮಕಗೊಂಡು ನೌಕರರನ್ನು ಖಾಯಮಾತಿ ಮಾಡಲು ನಿಯಮಗಳಲ್ಲಿ ಅವಕಾಶವಿದೆಯೇ ? ( ಇದ್ದರೆ ಯಾವ ಆದೇಶ/ಸುತ್ತೋಲೆ) ನಿಯಮದಡಿ ಖಾಯಂಗೊಳಿಸಲು ಅವಕಾಶ ಕಲ್ಪಿಸಿದೆ ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿಯೊಂದಿಗೆ ದಾಖಲೆ ಒದಗಿಸುವುದು.
4. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿಗಳಲ್ಲಿ ನಿಗದಿಪಡಿಸಿದ ವಿದ್ಯಾರ್ಹತೆ ಇಲ್ಲದೇ ಶ್ರೀ ಕುಮಾರಸ್ವಾಮಿ. ಎಂ/ ಯದುಕುಮಾರ ಸಿ.ಆರ್, ಇವರನ್ನು ಪ್ರಾಂಶುಪಾಲರ ಹುದ್ದೆಗೆ ನೀಮಕಾತಿ ಮಾಡಿದಲ್ಲಿ ಇದೇ ಮಾದರಿಯ ಮತ್ತಷ್ಟು ಪ್ರಕರಣಗಳು / ನೇಮಕಾತಿ ಅರ್ಜಿಗಳು ಸ್ವೀಕೃತವಾಗುವ ಸಾದ್ಯತೆಯನ್ನು ತಳ್ಳಿಹಾಕುವಂತಿಲ್ಲ, ಆದ್ದರಿಂದ ನಿಯಮಗಳಲ್ಲಿ ತಿಳಿಸಿರುವ ವಿದ್ಯಾರ್ಹತೆ ಇಲ್ಲದೇ ಇದ್ದರೂ ಖಾಯಂಗೊಳಿಸಲು ಮಂಡಳಿ ಸಭೆಗೆ ವಿಷಯ ಮಂಡಿಸಲು ಕಾರಣವೇನು ?

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

5. ಶ್ರೀ ಕುಮಾರಸ್ವಾಮಿ.ಎಂ/ ಯದುಕುಮಾರ ಸಿ.ಆರ್, ಇವರನ್ನು ಪ್ರಾಂಶುಪಾಲರ ಹುದ್ದೆಗೆ ಷರತ್ತು ವಿಧಿಸಿ ನೇಮಕಾತಿ ಮಾಡಿದಲ್ಲಿ ಇದೇ ಮಾದರಿಯ ಮತ್ತಷ್ಟು ಪ್ರಕರಣಗಳು/ನೇಮಕಾತಿ ಅರ್ಜಿಗಳು ಸ್ವೀಕೃತವಾಗುವ ಸಾಧ್ಯತೆ ಇರುವುದರಿಂದ ಈ ರೀತಿ ಹಿಂದೆ ಯಾವುದಾದರೂ ಆದೇಶ ಹೊರಡಿಸಲಾಗಿದೆಯೇ? ಪ್ರತಿ/ದಾಖಲೆ ಒದಗಿಸುವುದು. ಆದೇಶ ಹೊರಡಿಸಿದಲ್ಲಿ ನೇಮಕಾತಿ ನಿಯಮಗಳ ಉಲ್ಲಂಘನೆಯಾಗುವುದಿಲ್ಲವೇ ?
6. ಮಾನ್ಯ ಉಚ್ಚ ನ್ಯಾಯಾಲಯವು ಹೊರಸಂಪನ್ಮೂಲ ಸಿಬ್ಬಂದಿಗೆ ಯಾವ ಪ್ರಮಾಣದಲ್ಲಿ ಕೃಪಾಂಕ (ಗರಿಷ್ಟ/ಕನಿಷ್ಟ) ನೀಡಲು ತೀರ್ಪು ನೀಡಿದೆ(ಪ್ರತಿ ಸಲ್ಲಿಸುವುದು).
7. ಒಬ್ಬ ವ್ಯಕ್ತಿಯ ಹಿತದೃಷ್ಟಿಯಿಂದ ಇಡೀ ನೇಮಕಾತಿ ನಿಯಮಗಳನ್ನು ಮೀರುವುದು/ಉಲ್ಲಂಘಿಸುವುದು ಸರಿಯೇ?. ಸೂಕ್ತ ದಾಖಲಾತಿಗಳೊಂದಿಗೆ ಮರು ಪ್ರಸ್ತಾವನೆ ಸಲ್ಲಿಸುವುದು.

ಸಂಘವು ಸದರಿ ಅಂಶಗಳಿಗೆ ಮಾಹಿತಿಯನ್ನು ದಿನಾಂಕ.23-08-2017 ರಂದು ವಿವರವಾದ ಮಾಹಿತಿಯನ್ನು ನೀಡಲಾಗಿದು, ಅನುಬಂದದಲ್ಲಿ ವಿವರಗಳನ್ನು ಇರಿಸಲಾಗಿದೆ.

ಸರ್ಕಾರವು ಸಂಘದ ಮಾಹಿತಿಯನ್ನು ಪರಿಶೀಲಿಸಿ ಮತ್ತೊಮ್ಮೆ ಆಡಳಿತ ಮಂಡಳಿಯಲ್ಲಿ ಮಂಡಿಸಿ ಚರ್ಚಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳುವಂತೆ ತಿಳಿಸಿದೆ.

ಶ್ರೀ ಕುಮಾರಸ್ವಾಮಿ.ಎಂ, ಇವರು ಹೊರಸಂಪನ್ಮೂಲ ಪ್ರಾಂಶುಪಾಲರಾಗಿ ಮೊರಾರ್ಜಿದೇಸಾಯಿ ವಸತಿ ಶಾಲೆ ಹಲಗನಹಳ್ಳಿ ಪಿರಿಯಾಪಟ್ಟಣ ತಾ॥ ಮೈಸೂರು ಜಿಲ್ಲೆ ಇಲ್ಲಿ ದಿನಾಂಕ.02-11-2007 ರಿಂದ 14-04-2011 ರವರೆಗೆ ಸೇವೆ ಸಲ್ಲಿಸಿರುತ್ತಾರೆ ಹಾಗು ದಿನಾಂಕ 24-07-2011 ರಿಂದ 27-07-2011 ರವರೆಗೆ ನಡೆದ ಸ್ಪಾರ್ದಾತ್ಮಕ ಪರೀಕ್ಷೆಯಲ್ಲಿ ಪ್ರಾಂಶುಪಾಲರ ಹುದ್ದೆಗೆ ಪರೀಕ್ಷೆಯನ್ನು ಬರೆದಿರುತ್ತಾರೆ, ಹಾಗು ಇವರು ಪರಿಶಿಷ್ಟ ಜಾತಿಗೆ ಸೇರಿದವರಾಗಿರುತ್ತಾರೆ. ಇವರ ಸ್ಪಾರ್ದಾತ್ಮಕ ಪರೀಕ್ಷೆಯ ಫಲಿತಾಂಶವು ಈಗಾಗಲೇ ಮೇಲೆ ವಿವರಿಸಿದಂತೆ Not Eligible (PR5 -Not Studied Master Degree in Required Subject) ಎಂದು ನಮೂದಾಗಿರುತ್ತದೆ.

ಇವರ ಸೇವಾಕೃಪಾಂಕ ನೀಡುವ ಬಗ್ಗೆ ಈ ಕೆಳಕಂಡ ದಾಖಲೆಗಳ ಪ್ರತಿಗಳನ್ನು ಪರಿಶೀಲಿಸಲಾಗಿದ್ದು, ಇವರ ಸ್ನಾತಕೋತ್ತರ(M.A)ಪದವಿಯ ಅಂಕಪಟ್ಟಿಗಳನ್ನು ಪರಿಶೀಲಿಸಲಾಗಿ, ಇವರು M.A ಸ್ನಾತಕೋತ್ತರ ಪದವಿಯನ್ನು Cooperative Management ವಿಷಯದಲ್ಲಿ june/2003 ರಲ್ಲಿ ಪಡೆದಿರುತ್ತಾರೆ. ಹಾಗು ಇವರು M.A

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ಸ್ನಾತಕೋತ್ತರ ಪದವಿಯಲ್ಲಿ ಅಭ್ಯಾಸ ಮಾಡಿರುವ ವಿಷಯವು (Cooperative Management) ಸಂಘದ ವೃಂದ ಮತ್ತು ನೇಮಕಾತಿಯ ನಿಯಮದಲ್ಲಿ ಇರುವುದಿಲ್ಲ.

**ಸೇವೆಗೆ ಸಂಬಂಧಿಸಿದ ಮಾಹಿತಿ**

ಜಿಲ್ಲಾ ನಡವಳಿಯಲ್ಲಿ ಸಮಿತಿಯು ಈ ಕೆಳಕಂಡ ಅವದಿಯಲ್ಲಿ ಶ್ರೀ ಕುಮಾರಸ್ವಾಮಿ.ಎಂ, ಇವರು ಪ್ರಾಂಶುಪಾಲರಾಗಿ ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಕರ್ತವ್ಯ ನಿರ್ವಹಿಸಿರುವುದಾಗಿ ದೃಢೀಕರಿಸಿರುತ್ತಾರೆ ಪ್ರತಿಯನ್ನು ಅನುಬಂದ-2 ರಲ್ಲಿ ಇರಿಸಿದೆ.

1. 02-11-2007 ರಿಂದ 16-04-2008
2. 04-06-2008 ರಿಂದ 31-03-2009
3. 01-06-2009 ರಿಂದ 10-04-2010
4. 01-06-2010 ರಿಂದ 14-04-2011

ಆದರೆ ಸದರಿ ದೃಢೀಕರಣದಲ್ಲಿ ನೇಮಕಾತಿ ಪ್ರಾಧಿಕಾರವು ನಿಗದಿಪಡಿಸಿರುವ ಸ್ನಾತಕೋತ್ತರ M.A ಪದವಿಯನ್ನು ಸದರಿ ಅಭ್ಯರ್ಥಿಯು ಪಡೆಯದೆ ಇರುವುದರಿಂದ ಇವರು ಪ್ರಾಂಶುಪಾಲರ ಹುದ್ದೆಗೆ ನಿಗದಿತ ವಿದ್ಯಾರ್ಹತೆ ಹೊಂದಿರುವುದಿಲ್ಲ ಎಂದು ಷರಾದಲ್ಲಿ ನಮೂದಿಸಿರುತ್ತಾರೆ.

**ವೇತನ ಪಾವತಿಗೆ ಸಂಬಂಧಿಸಿದ ಮಾಹಿತಿ**

ಶ್ರೀ ಕುಮಾರಸ್ವಾಮಿ.ಎಂ,ಇವರ ವೇತನ ಪಾವತಿಗೆ ಸಂಬಂಧಿಸಿದ ದಾಖಲೆಯ ಪ್ರತಿಗಳನ್ನು ಪರಿಶೀಲಿಸಲಾಗಿ, ಮೂರು ವರ್ಷಗಳ ಸೇವಾಅವಧಿಗೆ ಸಂಬಂಧಿಸಿದಂತೆ ಈ ಕೆಳಕಂಡ ಮಾಹೆಗಳಲ್ಲಿ ಬ್ಯಾಂಕ ಚೆಕ್‌ಗಳ ಮುಖಾಂತರ ವೇತನ ಪಾವತಿಯಾಗಿರುವ ಬಗ್ಗೆ ಸಂಬಂದಪಟ್ಟ ಹೊರಸಂಪನ್ಮೂಲ ಏಜೆನ್ಸಿಯವರು ಸ್ವೀಕೃತಿ ಪಡೆದ ದಾಖಲೆಯನ್ನು ನೀಡಿರುತ್ತಾರೆ.

| | | |
|---|---|---|
| ಅಕ್ಟೋಬರ್-2009 | : | ರೂ.7040/- |
| ನವೆಂಬರ್ -2009 | : | ರೂ.7040/- |
| ಡಿಸೆಂಬರ್-2009 | : | ರೂ.7040/- |
| ಏಪ್ರೀಲ್ -2010 | : | ರೂ.7040/- |
| ಜೂನ್-2010 | : | ರೂ.8000/- |
| ಜುಲೈ-2010 | : | ರೂ.8000/- |

ಕರ್ನಾಟಕ ಮಾನ್ಯ ಉಚ್ಚ ನ್ಯಾಯಾಲಯವು ಹೊರಸಂಪನ್ಮೂಲ ಸಿಬ್ಬಂದಿಗಳಿಗೆ ಸೇವಾಕೃಪಾಂಕದ ರಿಟ್‌ಅಪೀಲ್ ಸಂಖ್ಯೆ WA NOS 5127 /2012 & WA.NOS.5831-61/2012 ರಲ್ಲಿ ಈ ಕೆಳಕಂಡಂತೆ ಆದೇಶಿಸಿರುತ್ತದೆ.

> " While dealing with the regularization of service of temporary employees, the Hon'ble Supreme Court had repeatedly held that, where initial entry was legal, the candidate were qualified, appointment made against the sanctioned post , long service would entitle them to be candidate for awarding service weightage. On the other hand, if the initial entry in to service was illegal or where the candidate did not possess the qualification prescribed for the post, the question of awarding service weightage does not arise."

ಕಾರ್ಯನಿರ್ವಾಹಕ ನಿರ್ದೇಶಕರು　　　　　　　　　　ಅಧ್ಯಕ್ಷರು

ಈ ಅಭ್ಯರ್ಥಿಗೆ ಪ್ರಾಂಶುಪಾಲರ ಹುದ್ದೆಗೆ 3 ವರ್ಷಗಳ ಸೇವಾಕೃಪಾಂಕ ಅಗತ್ಯವಿದ್ದು ವೇತನ ಪಾವತಿಗೆ ಸಂಬಂಧಿಸಿದಂತೆ ಅಪೂರ್ಣ ದಾಖಲೆಗಳವೆ ಹಾಗು ಸಂಘದ ವೃಂದ ಮತ್ತು ನೇಮಕಾತಿಯ ನಿಯಮದಲ್ಲಿ ಪ್ರಾಂಶುಪಾಲರ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಶ್ರೀ ಕುಮಾರಸ್ವಾಮಿ.ಎಂ, ಇವರು ಹೊಂದಿಲ್ಲದೆ ಇರುವುದರಿಂದ ಮತ್ತು ಮಾನ್ಯ ಉಚ್ಚನ್ಯಾಯಾಲಯದ ಮೇಲಿನ ಆದೇಶದಂತೆ ಇವರಿಗೆ ಸೇವಾಕೃಪಾಂಕ ನೀಡಲು ನಿಯಮದಲ್ಲಿ ಅವಕಾಶವಿರುವುದಿಲ್ಲ. ಈ ಪ್ರಕರಣವನ್ನು ಪರಿಗಣಿಸಿದಲ್ಲಿ ಇಂತಹ ಹಲವಾರು ಪ್ರಕರಣಗಳನ್ನು ಪರಿಗಣಿಸಬೇಕಾಗುತ್ತದೆ. ಅಲ್ಲದೇ, ಸದರಿಯವರು ಮಾನ್ಯ ಕರ್ನಾಟಕ ಉಚ್ಛನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: WP NO: 33156/2015ರನ್ನು ಸಲ್ಲಿಸಿದ್ದು, ಪ್ರಕರಣವು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. ಮೇಲ್ಕಂಡ ಎಲ್ಲಾ ಅಂಶಗಳನ್ನು ಮಂಡಿಸುತ್ತಾ ಆಡಳಿತ ಮಂಡಳಿಯ ತೀರ್ಮಾನ ಕೋರಿದೆ.

<u>ತೀರ್ಮಾನ:</u>

**ಆಡಳಿತ ಮಂಡಳಿಯು ಶ್ರೀ.ಕುಮಾರಸ್ವಾಮಿ ಎಂ ಇವರು ಮಾನ್ಯ ಕರ್ನಾಟಕ ಉಚ್ಛನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: WP NO: 33156/2015ರನ್ನು ಸಲ್ಲಿಸಿದ್ದು, ಪ್ರಕರಣವು ಬಾಕಿ ಇರುವುದರಿಂದ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸದರಿ ಪ್ರಕರಣದ ಬಗ್ಗೆ ಅಂತಿಮ ಆದೇಶವಾದ ನಂತರ ಕ್ರಮವಹಿಸಲು ನಿರ್ಣಯಿಸಲಾಯಿತು.**

<u>ವಿಷಯ ಸಂಖ್ಯೆ: 43</u>

<u>ಶ್ರೀ ಅಮರನಾಥ ಪ್ರಾಂಶುಪಾಲರು (ಹೊರಸಂಪನ್ಮೂಲ) ಮೊರಾರ್ಜಿ ದೇಸಾಯಿ ವಸತಿ ಶಾಲೆ ಯಳವಾರ ಜೇವರ್ಗಿ ಕಲಬುರಗಿ ಜಿಲ್ಲೆ, ಇವರಿಗೆ ಸೇವಾಕೃಪಾಂಕ ನೀಡುವ ಕುರಿತು</u>

ಶ್ರೀ ಅಮರನಾಥ ಪ್ರಾಂಶುಪಾಲರು (ಹೊರಸಂಪನ್ಮೂಲ) ಮೊರಾರ್ಜಿ ದೇಸಾಯಿ ವಸತಿ ಶಾಲೆ ಯಳವಾರ ಜೇವರ್ಗಿ ಕಲಬುರಗಿ ಜಿಲ್ಲೆ ಇಲ್ಲಿ ದಿನಾಂಕ.20-06-2009 ರಿಂದ 11-04-2011 ರವರೆಗೆ ಸೇವೆ ಸಲ್ಲಿಸಿರುತ್ತಾರೆ ಹಾಗು ದಿನಾಂಕ 20-07-2011 ರಿಂದ 27-07-2011 ರವರೆಗೆ ನಡೆದ ಸ್ಪಾರ್ದಾತ್ಮಕ ಪರೀಕ್ಷೆಯಲ್ಲಿ ಪ್ರಾಂಶುಪಾಲರ ಹುದ್ದೆಗೆ ಪರೀಕ್ಷೆಯನ್ನು ಬರೆದಿರುತ್ತಾರೆ,

ಇವರ ಸ್ಪಾರ್ದಾತ್ಮಕ ಪರೀಕ್ಷೆಯ ಪಲಿತಾಂಶವು Not Eligible (PR5 -Not Studied Master Degree in Required Subject) ಎಂದು ನಮೂದಾಗಿರುತ್ತದೆ. ಆದರೆ ಅಭ್ಯಥಿಯ ವಿದ್ಯಾರ್ಹತಾ ದಾಖಲೆಗಳನ್ನು ಪರಿಶೀಲಿಸಲಾಗಿ, ಇವರು ಪ್ರಾಂಶುಪಲರ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯನ್ನು (M.A Economics) ಪಡೆದಿರುವುದು ಕಂಡುಬರುತ್ತದೆ.

<u>ಸೇವೆಗೆ ಸಂಬಂಧಿಸಿದ ಮಾಹಿತಿ</u>

<u>**ಹಾಜರಾತಿ**</u>

ಹಾಜರಾತಿಯ ಪ್ರತಿಗಳು ಈ ಕೆಳಕಂಡಂತೆ ಲಭ್ಯವಿರುತ್ತದೆ

1. 20-06-2009 ರಿಂದ 10-04-2010
2. 21-06-2010 ರಿಂದ 10-04-2011

ಕಾರ್ಯನಿರ್ವಾಹಕ ನಿರ್ದೇಶಕರು

**ಅಧ್ಯಕ್ಷರು**

**ಜಿಲ್ಲಾ ನಡವಳಿ**

ಜಿಲ್ಲಾ ನಡವಳಿಯಲ್ಲಿ ಸಮಿತಿಯು ಈ ಕೆಳಕಂಡ ಅವದಿಯಲ್ಲಿ ಶ್ರೀ ಅಮರನಾಥ, ಇವರು ಪ್ರಾಂಶುಪಾಲರಾಗಿ ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಕರ್ತವ್ಯ ನಿರ್ವಹಿಸಿರುವುದಾಗಿ ದೃಢೀಕರಿಸಿರುತ್ತಾರೆ

1. 20-06-2009 ರಿಂದ 10-04-2010
2. 21-06-2010 ರಿಂದ 11-04-2011

**ನಮೂನೆ-2**

ನಮೂನೆ-2 ರಲ್ಲಿ ಸಮಿತಿಯು ಈ ಕೆಳಕಂಡ ಅವದಿಯಲ್ಲಿ ಶ್ರೀ ಅಮರನಾಥ, ಇವರು ಪ್ರಾಂಶುಪಾಲರಾಗಿ ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಕರ್ತವ್ಯ ನಿರ್ವಹಿಸಿರುವುದಾಗಿ ದೃಢೀಕರಿಸಿರುತ್ತಾರೆ.

1. 20-06-2009 ರಿಂದ 13-04-2010
2. 20-06-2010 ರಿಂದ 11-04-2011

**ವೇತನ ಪಾವತಿಗೆ ಸಂಬಂಧಿಸಿದ ಮಾಹಿತಿ**

**ಶ್ರೀ ಅಮರನಾಥ** ಇವರ ವೇತನ ಪಾವತಿಗೆ ಸಂಬಂಧಿಸಿದ ದಾಖಲೆಯ ಪ್ರತಿಗಳನ್ನು ಪರಿಶೀಲಿಸಲಾಗಿ ವೇತನ ಪಡೆದಿರುವ ಬಗ್ಗೆ ಯಾವುದೇ ದಾಖಲೆಗಳು ಲಭ್ಯವಿರುವುದಿಲ್ಲ.ಕರ್ನಾಟಕ ಮಾನ್ಯ ಉಚ್ಚ ನ್ಯಾಯಾಲಯವು ಹೊರಸಂಪನ್ಮೂಲ ಸಿಬ್ಬಂದಿಗಳಿಗೆ ಸೇವಾಕೃಪಾಂಕದ ರಿಟ್‌ಅಫೀಲ್ ಸಂಖ್ಯೆ WA NOS 5127 /2012 & WA.NOS.5831-61/2012 ರಲ್ಲಿ ಈ ಕೆಳಕಂಡಂತೆ ಆದೇಶಿಸಿರುತ್ತದೆ.

> " While dealing with the regularization of service of temporary employees, the Hon'ble Supreme Court had repeatedly held that, where initial entry was legal, the candidate were qualified, appointment made against the sanctioned post , long service would entitle them to be candidate for awarding service weightage. On the other hand, if the initial entry in to service was illegal or where the candidate did not possess the qualification prescribed for the post, the question of awarding service weightage does not arise."

ಈ ಅಭ್ಯರ್ಥಿಗೆ ಪ್ರಾಂಶುಪಾಲರ ಹುದ್ದೆಗೆ ಆಯ್ಕೆಯಾಗಲು 2 ವರ್ಷಗಳ ಸೇವಾಕೃಪಾಂಕ ಅಗತ್ಯವಿದ್ದು ಇವರ ಸಿ.ಸಿ.ಎ ಅಂಕಗಳು 58.21 ಆಗಿದ್ದು ಇವರು ಪರಿಶಿಷ್ಟ ಜಾತಿಯ ಪ್ರವರ್ಗಕ್ಕೆ ಸೇರಿದವರಾಗಿದ್ದು ಇವರ ಕಟ್‌ಆಫ್ ಅಂಕಗಳು 64.67 ಆಗಿರುತ್ತದೆ. ಸದರಿ ಅಭ್ಯರ್ಥಿಯು **ದಿನಾಂಕ:17-08-2010 ರಂದು** ಸ್ನಾತಕೋತ್ತರ ಪದವಿಯ ಫಲಿತಾಂಶ ಬಂದಿರುವುದು ಅಂಕಪಟ್ಟಿಯಲ್ಲಿ ನಮೂದಾಗಿರುತ್ತದೆ. ಸ್ನಾತಕೋತ್ತರ ಪದವಿಯನ್ನು ಪಡೆಯುವುದಕ್ಕಿಂತ ಮೊದಲೇ ನಿಯಮಬಾಹಿರವಾಗಿ ದಿನಾಂಕ:20-06-2009ರಿಂದ ಕರ್ತವ್ಯ ನಿರ್ವಹಿಸುತ್ತಿರುವುದನ್ನು ಮಾನ್ಯ ಮಾಡಲು ಅವಕಾಶವಿರುವುದಿಲ್ಲ.

ಕಾರ್ಯನಿರ್ವಾಹಕ ನಿರ್ದೇಶಕರು

**ಅಧ್ಯಕ್ಷರು**

ಮುಂದುವರಿದು, ಸರ್ಕಾರದ ಆದೇಶದನುಸಾರ ಸೇವಾ ಕೃಪಾಂಕಕ್ಕೆ ಪರಿಗಣಿಸುವ ಶೈಕ್ಷಣಿಕ ಅವಧಿ ಜೂನ್/ಜುಲೈ ರಿಂದ ಮಾರ್ಚ್/ಏಪ್ರಿಲ್‌ವರೆಗೆ ಆಗಿರುತ್ತದೆ ಹಾಗೂ ಮಾನ್ಯ ಉಚ್ಛನ್ಯಾಯಾಲಯದ ಮೇಲ್ಕಂಡ ಆದೇಶದಂತೆ ಸದರಿಯವರು ಸೇವಾಕೃಪಾಂಕ ನೀಡಿ ಆಯ್ಕೆಗೆ ಅರ್ಹರಿರುವುದಿಲ್ಲ ಎಂಬ ಅಂಶವನ್ನು ಮಂಡಿಸಿ, ಆಡಳಿತ ಮಂಡಳಿಯ ತೀರ್ಮಾನವನ್ನು ಕೋರಿದೆ.

**ತೀರ್ಮಾನ:**

**ಶ್ರೀ.ಅಮರನಾಥ್ ಇವರು, ಪ್ರಾಂಶುಪಾಲರಾಗಿ ಎಂ.ಎ. ಸ್ನಾತಕೋತ್ತರ ಪದವಿಯನ್ನು ಹೊಂದದೇ ದಿನಾಂಕ 20-06-2009ರಿಂದ ಕಾರ್ಯ ನಿರ್ವಹಿಸುತ್ತಿದ್ದು, ಎಂ.ಎ. ಸ್ನಾತಕೋತ್ತರ ಪದವಿಯನ್ನು ದಿನಾಂಕ:17-08-2010ರಂದು ಪಡೆದಿರುತ್ತಾರೆ. ಸೇವಾ ಕೃಪಾಂಕಗಳನ್ನು ಪರಿಗಣಿಸುವ ಅವಧಿಯು ಜೂನ್-ಜುಲೈ 2010 ರಿಂದ ಮಾರ್ಚ್-ಏಪ್ರಿಲ್ 2011 ಆಗಿರುತ್ತದೆ. ಇವರು ನಿಗಧಿತ ಸ್ನಾತಕೋತ್ತರ ಪದವಿಯನ್ನು ಆಗಸ್ಟ್ 2010 ಮಾಹೆಯಲ್ಲಿ ಪಡೆದಿರುವುದರಿಂದ ಸೇವಾ ಕೃಪಾಂಕ ಪಡೆಯಲು ಅರ್ಹರಿರುವುದಿಲ್ಲವೆಂದು ಆಡಳಿತ ಮಂಡಳಿಯು ತೀರ್ಮಾನಿಸಿತು.**

ವಿಷಯ ಸಂಖ್ಯೆ: 44

**ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಹೊರಗುತ್ತಿಗೆ ಶಿಕ್ಷಕರ ನೇಮಕಾತಿಯಲ್ಲಿ ಓ.ಎಂ.ಆರ್‌ಶೀಟ್‌ಗಳಲ್ಲಿನ ನ್ಯೂನ್ಯತೆಯನ್ನು ಸರಿಪಡಿಸಿ ಆಯ್ಕೆಗೆ ಅರ್ಹತೆಗೊಳಿಸುವಂತೆ ಸಲ್ಲಿಸಿದ ಮನವಿಯ ಬಗ್ಗೆ.**

2011ರಲ್ಲಿ ನಡೆದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ನೇಮಕಾತಿಗಾಗಿ ನಡೆದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಫಲಿತಾಂಶ ಪಟ್ಟಿಯಲ್ಲಿ ಓ.ಎಂ.ಆರ್ ಶೀಟ್‌ನಲ್ಲಿ ಅಪೂರ್ಣ ಮತ್ತು ಅಸ್ಪಷ್ಟ, ತಪ್ಪು ಮಾಹಿತಿ ನೀಡಿದ ಹಾಗೂ ನಿಗದಿತ ಕಟ್‌ಆಫ್ ಅಂಕಗಳಿಗಿಂತ ಕಡಿಮೆ ಅಂಕಗಳನ್ನು ಗಳಿಸಿದ್ದ ಅಭ್ಯರ್ಥಿಗಳ ಪ್ರಕರಣಗಳ ಬಗ್ಗೆ ದಿನಾಂಕ:31.08.2017ರಂದು ನಡೆದ ಸಂಘದ 69ನೇ ಆಡಳಿತ ಮಂಡಳಿಯ ಸಭೆಯಲ್ಲಿ ವಿಷಯವನ್ನು ಮಂಡಿಸಲಾಗಿತ್ತು. ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನ ನೀಡಿದೆ.

**"ದಿನಾಂಕ:14.03.2017ರಂದು ನಡೆದ ಆಡಳಿತ ಮಂಡಳಿಯ ಸಭೆಯಲ್ಲಿ ಎಲ್ಲಾ ಪ್ರಕರಣಗಳನ್ನು ಕೇಸ್ ಬೈ ಕೇಸ್ ಪರಿಶೀಲನೆ ಮಾಡಿ ಅವುಗಳು ಕೇವಲ ತಾಂತ್ರಿಕ ದೋಷಗಳೆಂದು ಖಚಿತಪಡಿಸಿಕೊಂಡು ಸದರಿ ಅಭ್ಯರ್ಥಿಗಳ ಅರ್ಹತಾ ದಾಖಲೆಗಳ ನೈಜತೆಯನ್ನು ಪರಿಶೀಲಿಸಿ ಓ.ಎಂ.ಆರ್ ಶೀಟ್‌ನಲ್ಲಿ ಕೇವಲ ತಿಳುವಳಿಕೆ ಲೋಪದಿಂದ ಅಥವಾ ಕಣ್ತಪ್ಪಿನಿಂದಾಗಿ ತಪ್ಪುಗಳು ಆಗಿದ್ದಲ್ಲಿ ಅವುಗಳನ್ನು ದಾಖಲೆಗಳ ಆಧಾರದಲ್ಲಿ ಸರಿಪಡಿಸಿ, ಕೃಪಾಂಕ ನೀಡಿಅರ್ಹ ಅಭ್ಯರ್ಥಿಗಳನ್ನು ಆಯ್ಕೆಗೊಳಿಸುವಂತೆ ತಿಳಿಸಿದ್ದರು. ಮುಂದುವರೆದು, ಈಗಾಗಲೇ ದಾಖಲಾತಿಗಳನ್ನು ಪರಿಶೀಲಿಸಿ ಆಯ್ಕೆಗೆ ಅರ್ಹರೆಂದು ಪರಿಗಣಿಸಿದವರ ದಾಖಲಾತಿಗಳನ್ನು ಪುನರ್ ಪರಿಶೀಲಿಸಿ, ಕೃಪಾಂಕ ನೀಡಿ ಆಯ್ಕೆಗೊಳಿಸಿ ಆದಷ್ಟು ಬೇಗ ಆಧ್ಯತೆಯ ಮೇರೆಗೆ ಈ ಪ್ರಕರಣಗಳನ್ನು ಪರಿಗಣಿಸಲು ಕಾರ್ಯನಿರ್ವಾಹಕ ನಿರ್ದೇಶಕರು ಕ್ರಮ ವಹಿಸುವಂತೆ ಆಡಳಿತ ಮಂಡಳಿಯ ಸಭೆಯು ಅನುಮೋದಿಸಿತ್ತು".**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಓ.ಎಂ.ಆರ್ ಶೀಟ್‌ನ ನ್ಯೂನ್ಯತೆಗಳ 67 ಪ್ರಕರಣಗಳನ್ನು ಪರಿಶೀಲಿಸಲು ಸಂಘದ ಅಧಿಕಾರಿಗಳ ಸಮಿತಿಯನ್ನು ರಚಿಸಿ, ವರದಿಯನ್ನು ಪಡೆಯಲಾಗಿದೆ. 67 ಪ್ರಕರಣಗಳ ಪರಿಶೀಲನಾ ವರದಿಯ ಸಾರಾಂಶವು ಈ ಕೆಳಕಂಡಂತಿರುತ್ತದೆ.

**ಕಾರ್ಯನಿರ್ವಾಹಕ ನಿರ್ದೇಶಕರು** | **ಅಧ್ಯಕ್ಷರು**

| ಕ್ರ. ಸಂ | ವಿಷಯ | ವೃಂದ ಮತ್ತು ನೇಮಕಾತಿ ನಿಯಮದನ್ವಯ ವಿದ್ಯಾರ್ಹತೆ ಹೊಂದದೇ ಇರುವ ಅಭ್ಯರ್ಥಿಗಳು | ನಿಗಧಿತ ಪದವಿಯನ್ನು ಎರಡು ಭಾರಿ ಉತ್ತೀರ್ಣರಾದ ಅಭ್ಯರ್ಥಿಗಳು | ಅನುಮಾನಾಸ್ಪದ ವೈದ್ಯಕೀಯ ಪ್ರಮಾಣ ಪತ್ರ ನೀಡಿದ ಅಭ್ಯರ್ಥಿಗಳು | ಅಪೂರ್ಣ ದಾಖಲಾತಿಗಳ ಅಭ್ಯರ್ಥಿಗಳು | ವಯೋಮಿತಿ ಮೀರಿದ ಅಭ್ಯರ್ಥಿಗಳು | ಸೇವಾ ಕೃಪಾಂಕಕ್ಕೆ ಅರ್ಹರಾದ ಅಭ್ಯರ್ಥಿಗಳು | ಒಟ್ಟು |
|---|---|---|---|---|---|---|---|---|
| | | (1) | (2) | (3) | (4) | (5) | (6) | (7) |
| 1 | ಪ್ರಾಂಶುಪಾಲರು | 01 | 00 | 00 | 00 | 01 | 00 | 02 |
| 2 | ಕನ್ನಡ | 00 | 00 | 01 | 01 | 00 | 00 | 02 |
| 3 | ಇಂಗ್ಲೀಷ್ | 00 | 00 | 00 | 02 | 01 | 00 | 03 |
| 4 | ಹಿಂದಿ | 39 | 01 | 00 | 00 | 00 | 00 | 40 |
| 5 | ಗಣಿತ | 01 | 00 | 00 | 03 | 03 | 00 | 07 |
| 6 | ವಿಜ್ಞಾನ | 00 | 00 | 00 | 03 | 00 | 01 | 04 |
| 7 | ಸಮಾಜ ವಿಜ್ಞಾನ | 01 | 00 | 00 | 06 | 00 | 01 | 08 |
| 8 | ದೈಹಿಕ ಶಿಕ್ಷಕರು | 00 | 00 | 00 | 01 | 00 | 00 | 01 |
| | ಒಟ್ಟು | 42 | 01 | 01 | 16 | 05 | 02 | 67 |

ವರದಿಯನ್ನು ಆಧರಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ನೇಮಕಾತಿಗೆ ಅರ್ಹರಾದಂತಹ 2 ಅಭ್ಯರ್ಥಿಗಳ ಪೈಕಿ ಶ್ರೀ ಕಿರಣ್‌ಕುಮಾರ್ ರವರಿಗೆ ನೇಮಕಾತಿ ಆದೇಶವನ್ನು ನೀಡಲು ಹಾಗೂ ಶ್ರೀ ಕೃಷ್ಣ .ಸಿ ಇವರ ಓ.ಎಂ.ಆರ್ ಶೀಟ್ ಸಂಬಂಧವಾಗಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು ಸದರಿದಾವೆಯು ಬಾಕಿ ಇರುವುದರಿಂದ ನ್ಯಾಯಾಲಯದ ಅಂತಿಮ ತೀರ್ಮಾನದ ನಂತರ ಕ್ರಮ ವಹಿಸಬಹುದಾಗಿದೆಯೆಂದು ಹಾಗೂ ಬಾಕಿ ಉಳಿದ 65 ಅಭ್ಯರ್ಥಿಗಳು ಕೋಷ್ಟಕದಲ್ಲಿ ಹೇಳಿದ ಕಾರಣಗಳಿಂದ ಅನರ್ಹರಾಗಿರುತ್ತಾರೆ ಎಂದು ವರದಿಯಲ್ಲಿ ತಿಳಿಸಲಾಗಿತ್ತು.

ಈ ವರದಿಯನ್ನು ಆಧರಿಸಿ, ಸಂಘವು ದಿನಾಂಕ:11-12-2017ರಂದು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಈ ಪತ್ರದ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಓ.ಎಂ.ಆರ್ ಶೀಟ್ ಭರ್ತಿ ಮಾಡುವಾಗ ತಪ್ಪು ಮಾಹಿತಿ ದಾಖಲಾದ ಮೇರೆಗೆ ಕೆಲವು ಅಭ್ಯರ್ಥಿಗಳನ್ನು ಅಂತಿಮ ಫಲಿತಾಂಶ ಪಟ್ಟಿಯಲ್ಲಿ Not Eligible code ಎಂದು ಪರಿಗಣಿಸಲಾಗಿದ್ದು, ಓ.ಎಂ.ಆರ್ ಶೀಟ್‌ನ ತಪ್ಪುಗಳು ಕೇವಲ ತಾಂತ್ರಿಕ ದೋಷಗಳೆಂದು ಖಾತ್ರಿಯಾದರೆ ಅವುಗಳನ್ನು ಸರಿಪಡಿಸಿ ನಿಯಮಾನುಸಾರ ಕೃಪಾಂಕ ನೀಡುವ ಕುರಿತು ಪ್ರಕರಣಗಳನ್ನು ಪರಿಶೀಲಿಸಿ, ಅಂತಿಮ ವರದಿಯನ್ನು ಆಡಳಿತ ಮಂಡಳಿಗೆ ಸಲ್ಲಿಸಲು ಈ ಕೆಳಕಂಡ ಸಮಿತಿಯನ್ನು ಸರ್ಕಾರದ ಆದೇಶ ಸಂಖ್ಯೆ: ಸಕಇ 194 ಮೊದೇಶಾ 2016 ಬೆಂಗಳೂರು ದಿನಾಂಕ:29.01.2018 ರಚಿಸಿ ಆದೇಶಿಸಿರುತ್ತಾರೆ.

| | |
|---|---|
| 01 | ಸರ್ಕಾರದ ಉಪ ಕಾರ್ಯದರ್ಶಿ, ಸಮಾಜಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು. |
| 02 | ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು |
| 03 | ಅಪರ ನಿರ್ದೇಶಕರು (ಆಡಳಿತ). ಸಮಾಜಕಲ್ಯಾಣ ಇಲಾಖೆ, ಬೆಂಗಳೂರು |
| 04 | ಜಂಟಿ / ಉಪ ನಿರ್ದೇಶಕರು(ಆಡಳಿತ), ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು |

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ನೋಡಲ್ ಏಜೆನ್ಸಿ, ಸಲಹೆಗಾರರು, ಎಸ್‌ಸಿಎಸ್‌ಪಿ/ಟಿಎಸ್‌ಪಿ, ಸಮಾಜಕಲ್ಯಾಣ ಇಲಾಖೆ ಇವರನ್ನು ಮೇಲ್ಕಂಡ ಸಮಿತಿಯ ಮಾರ್ಗದರ್ಶಕರನ್ನಾಗಿ ನೇಮಿಸಿದೆ. ಸಮಿತಿಯು ದಿನಾಂಕ: 03.02.2017ರಂದು ಸಂಘದ ಕೇಂದ್ರ ಕಛೇರಿಗೆ ಆಗಮಿಸಿ ದಾಖಲೆಗಳನ್ನು ಪರಿಶೀಲಿಸಿದೆ.

I. ಹಿಂದಿ ಪದವಿ ಮತ್ತು ಬಿ.ಎಡ್ ಕೋರ್ಸ್‌ಗಳನ್ನು ಈ ಕೆಳಕಂಡ ಸಂಸ್ಥೆಗಳಿಂದ ಪಡೆದು 2011ನೇ ಸಾಲಿನಲ್ಲಿ ಹಿಂದಿ ಶಿಕ್ಷಕರ ನೇರ ನೇಮಕಾತಿಗೆ ನಡೆದ ಸ್ಪರ್ಧಾತ್ಮಕ ಪರೀಕ್ಷೆ ಬರೆದಿರುತ್ತಾರೆ. ಹಿಂದಿ ಶಿಕ್ಷಕರಿಗೆ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳ ಕೆಳಕಂಡ ಸಂಸ್ಥೆಗಳಿಂದ ಹಿಂದಿ ಪದವಿ ಪಡೆದಿರಬೇಕೆಂದು ಇರುತ್ತದೆ.

1) ಮೈಸೂರು ಹಿಂದಿ ಪ್ರಚಾರ ಪರಿಷತ್ ಬೆಂಗಳೂರು
2) ಕರ್ನಾಟಕ ಹಿಂದಿ ಪ್ರಚಾರ ಸಮಿತಿ ಬೆಂಗಳೂರು
3) ಕರ್ನಾಟಕ ಹಿಂದಿ ಸೇವಾ ಸಮಿತಿ ಬೆಂಗಳೂರು
4) ದಕ್ಷಿಣಭಾರತ ಹಿಂದಿ ಪ್ರಚಾರ ಸಭಾ ಮದ್ರಾಸ್

II. ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳ ಕೆಳಕಂಡ ಸಂಸ್ಥೆಗಳಿಂದ ಹಿಂದಿ ಬಿ.ಎಡ್ ಪಡೆದಿರಬೇಕೆಂದು ಇರುತ್ತದೆ.

1. ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿ ಬೆಂಗಳೂರು
2. ಕರ್ನಾಟಕ ಹಿಂದಿ ಪ್ರಚಾರ ಸಮಿತಿ ಬೆಂಗಳೂರು
3. ಮೈಸೂರು ಹಿಂದಿ ಪ್ರಚಾರ ಪರಿಷತ್, ಬೆಂಗಳೂರು
4. ಮಾನಸ ಎಜುಕೇಷನ್ ಸೊಸೈಟಿ, ತುಮಕೂರು.
5. ಕರ್ನಾಟಕ ಲೇಬರ್ ಎಜುಕೇಷನ್ ಸೊಸೈಟಿ, ಬೀದರ್
6. ಸರ್ಕಾರಿ ಹಿಂದಿ ಟೀಚರ್ಸ್ ಕಾಲೇಜು ಮೈಸೂರು

III. ಆದರೆ, ಕೆಲವು ಅಭ್ಯರ್ಥಿಗಳು ಈ ಕೆಳಕಂಡ ಸಂಸ್ಥೆಗಳಿಂದ ಬಿ.ಎ ಪದವಿ ಪಡೆದಿರುತ್ತಾರೆ.

1. ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿ ಬೆಂಗಳೂರು
2. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳ (KSEEB)
3. ಕರ್ನಾಟಕ ವಿಶ್ವವಿದ್ಯಾಲಯ,

IV. ಕೆಲವು ಅಭ್ಯರ್ಥಿಗಳು ಈ ಕೆಳಕಂಡ ಸಂಸ್ಥೆಗಳಿಂದ ಬಿ.ಎಡ್ ಪದವಿ ಪಡೆದಿರುತ್ತಾರೆ.

1) ದಕ್ಷಿಣಭಾರತ ಹಿಂದಿ ಪ್ರಚಾರ ಸಭಾ ಮದ್ರಾಸ್
2) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳ (KSEEB)
3) ಹಿಂದಿ ಪ್ರಚಾರ ಸಮಿತಿ ಹೈದರಬಾದ್
4) ಕೇಂದ್ರೀಯ ಹಿಂದಿ ಶಿಕ್ಷಣ ಮಂಡಲ ಆಗ್ರಾ,

ಮೇಲ್ಕಂಡಂತೆ ಕೆಲವು ಸಂಸ್ಥೆಗಳು ಸಂಘದ ವೃಂದ ಮತ್ತು ನೇಮಕಾತಿಯಲ್ಲಿ ಇಲ್ಲದೇ ಇರುವುದರಿಂದ ಅಂತಹ ಅಭ್ಯರ್ಥಿಗಳಿಗೆ ನೇಮಕಾತಿ ನೀಡಲು ಸಾಧ್ಯವಾಗಿಲ್ಲವೆಂದು ಆಡಳಿತ ಮಂಡಳಿ ಸಭೆಯ ಗಮನಕ್ಕೆ ತರಲಾಗಿದೆ. ಆದರೆ, ಓಎಂಆರ್ ಶೀಟ್‌ಗಳಲ್ಲಿ ತಾಂತ್ರಿಕ ದೋಷಗಳು ಇರುವ ಪಟ್ಟಿಯಲ್ಲಿ ಸರ್ಕಾರದ ಪತ್ರ ಸಂಖ್ಯೆ: ಸಕಇ 194 ಮೊದಶಾ 2016, ದಿ:26-02-2018ರಂದು ಒಟ್ಟು 35 ಅಭ್ಯರ್ಥಿಗಳಿಗೆ ನೇಮಕಾತಿ ನೀಡಲು ಹೊರಡಿಸಿದ ಆದೇಶವನ್ನೂ ಸಹ ಸಭೆಯ ಗಮನಕ್ಕೆ ತರಲಾಗಿದೆ. ಈ ಬಗ್ಗೆ ಚರ್ಚಿಸಿ, ಆಡಳಿತ ಮಂಡಳಿ ಈ ಕೆಳಕಂಡಂತೆ ತೀರ್ಮಾನಿಸಿತು.

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

ತೀರ್ಮಾನ:

ಆಡಳಿತ ಮಂಡಳಿಯು ಮೇಲೆ ಪ್ರಸ್ತಾಪಿಸಿದಂತೆ, ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳಲ್ಲಿ ಅಳವಡಿಸಿಕೊಳ್ಳದಿರುವ ಈ ಕೆಳಕಂಡ ಸಂಸ್ಥೆಗಳಿಂದ ಹಿಂದಿ ಬಿ.ಎ ಪದವಿ ಮತ್ತು ಬಿ.ಎಡ್ ಪದವಿಗಳನ್ನು ಪಡೆದಿರುವುದನ್ನು ಪರಿಶೀಲಿಸಿತು.

ಅ) ಬಿ.ಎ ಪದವಿಗಳನ್ನು ಪಡೆದ ಸಂಸ್ಥೆಗಳು

1. ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿ ಬೆಂಗಳೂರು
2. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (KSEEB)
3. ಕರ್ನಾಟಕ ವಿಶ್ವವಿದ್ಯಾಲಯ,

ಅ) ಬಿ.ಎಡ್ ಪದವಿಗಳನ್ನು ಪಡೆದ ಸಂಸ್ಥೆಗಳು

1. ದಕ್ಷಿಣಭಾರತ ಹಿಂದಿ ಪ್ರಚಾರ ಸಭಾ ಮದ್ರಾಸ್
2. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (KSEEB)
3. ಹಿಂದಿ ಪ್ರಚಾರ ಸಮಿತಿ ಹೈದರಬಾದ್
4. ಕೇಂದ್ರೀಯ ಹಿಂದಿ ಶಿಕ್ಷಣ ಮಂಡಲ ಆಗ್ರಾ,

ಅಂತಿಮವಾಗಿ, ಆಡಳಿತ ಮಂಡಳಿಯು, ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಿ, ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳಲ್ಲಿ ಹಿಂದಿ ಶಿಕ್ಷಕರ ಹುದ್ದೆಗೆ ಅಳವಡಿಕೆಯಾಗದಿರುವ ಮೇಲ್ಕಂಡ ಸಂಸ್ಥೆಗಳಿಂದ ಪಡೆದ ಹಿಂದಿ ಬಿ.ಎ. ಪದವಿ ಮತ್ತು ಬಿ.ಎಡ್ ಪದವಿಗಳು ನೇಮಕಾತಿಗೆ ಅರ್ಹತೆ ಇರುವ ಬಗ್ಗೆ ಶಿಕ್ಷಣ ಇಲಾಖೆಯಿಂದ ಸ್ಪಷ್ಟೀಕರಣ ಪಡೆಯಲು ತೀರ್ಮಾನಿಸಿತು.

ಹಾಗೂ

ಸರ್ಕಾರದ ಪತ್ರ ಸಂಖ್ಯೆ: ಸಕಇ 194 ಮೊದೆಶಾ 2016, ದಿ:26-02-2018ನ್ನು ತಡೆಹಿಡಿದು, ಶಿಕ್ಷಣ ಇಲಾಖೆಯಿಂದ ಸ್ಪಷ್ಟೀಕರಣ ಪಡೆದ ನಂತರ ವಿಷಯವನ್ನು ಪರಿಶೀಲಿಸಿ, ಮುಂದಿನ ಆಡಳಿತ ಮಂಡಳಿ ಸಭೆಗೆ ಮಂಡಿಸಲು ಸಭೆಯು ತೀರ್ಮಾನಿಸಿತು.

ವಿಷಯ ಸಂಖ್ಯೆ : 45
ಹೊರಸಂಪನ್ಮೂಲ ಬೋಧಕ ಸಿಬ್ಬಂದಿಗಳು ಸೇವಾ ಕೃಪಾಂಕ ಪಡೆಯಲು ಕೃತ್ರಿಮ ಹಾಜರಾತಿ ಸೃಷ್ಟಿಸಿದ 26 ಅಭ್ಯರ್ಥಿಗಳ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ದಿ:19.10.2015 ರಂದು ಪ್ರಕಟಿಸಲಾದ 409 ಅಭ್ಯರ್ಥಿಗಳ ಪಟ್ಟಿಯಲ್ಲಿ 26 ಅಭ್ಯರ್ಥಿಗಳು ಹಾಜರಾತಿಯಲ್ಲಿ ರಜಾ ದಿನಗಳನ್ನು ಸೇರಿದಂತೆ ಹಾಜರಾತಿ ನೀಡಿರುವುದನ್ನು ಗಮನಿಸಿ ಸೇವಾಕೃಪಾಂಕ ನೀಡಿ ಆಯ್ಕೆಗೆ ಪರಿಗಣಿಸಲಿಲ್ಲ. ದಿ:31.08.2017 ರಂದು ನಡೆದ 69 ನೇ ಆಡಳಿತ ಮಂಡಳಿಯ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಿದೆ.

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

"ಸದರಿ ವಿಷಯದ ಬಗ್ಗೆ ಶ್ರೀ. ವೆಂಕಟಯ್ಯ ಇ., ಭಾ.ಆ.ಸೇ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಸಲಹೆಗಾರರು ಹಾಗೂ ನಿವೃತ್ತ ಪ್ರಧಾನ ಕಾರ್ಯದರ್ಶಿರವರು ಸಮಾಜ ಕಲ್ಯಾಣ ಇಲಾಖೆರವರು ಸುದೀರ್ಘವಾಗಿ ಮಾತನಾಡಿ ಸದರಿ ವಿಷಯಕ್ಕೆ ಸಂಬಂದಿಸಿದಂತೆ ಎಲ್ಲಾ 26 ನೌಕರರಿಗೆ ಸಂಬಳ ಪಾವತಿಯಾಗಿದ್ದು. ಅದರಲ್ಲಿ 10 ಜನರಿಗೆ ಬ್ಯಾಂಕಿನ ಮೂಲಕ ವೇತನ ಪಾವತಿಯಾಗಿದ್ದು, ಉಳಿದ 16 ನೌಕರರಿಗೆ ಹೊರಸಂಪನ್ಮೂಲದ ಸಂಸ್ಥೆಯಿಂದ ವೇತನ ಪಾವತಿಯಾಗಿರುತ್ತದೆ. ಆದ್ದರಿಂದ ಅವರನ್ನು ಸಹ ಪರಿಗಣಿಸಿ, ದಾಖಲಾತಿಗಳನ್ನು ಪರಿಶಿಲಿಸಿ, ಸೇವಾ ಕೃಪಾಂಕ ನೀಡಿ, ಆದ್ಯತೆಯ ಮೇರೆಗೆ ಪ್ರಕರಣ ಪರಿಶೀಲಿಸಿ, ಆಡಳಿತ ಮಂಡಳಿ ಸಭೆಯು ತೀರ್ಮಾನಿಸಿತು."

ಆಡಳಿತ ಮಂಡಳಿಯ ತೀರ್ಮಾನದಂತೆ 26 ಅಭ್ಯರ್ಥಿಗಳ ದಾಖಲಾತಿಗಳನ್ನು ಪರಿಶೀಲಿಸಲು ಸಂಘದ ಅಧಿಕಾರಿಗಳ ಸಮಿತಿಯನ್ನು ದಿ:05.09.2017 ರಲ್ಲಿ ರಚಿಸಿದೆ. ಸಮಿತಿಯ 26 ಅಭ್ಯರ್ಥಿಗಳ ದಾಖಲಾತಿಗಳನ್ನು ಈ ಕೆಳಕಂಡಂತೆ ವರದಿ ನೀಡಿದೆ.

| ಕ್ರಮ ಸಂಖ್ಯೆ | ವಿವರ | ಅಭ್ಯರ್ಥಿಗಳ ಸಂಖ್ಯೆ | ಷರಾ |
|---|---|---|---|
| 01 | ಸೇವಾ ಕೃಪಾಂಕಕ್ಕೆ ಅರ್ಹರಾದ ಅಭ್ಯರ್ಥಿಗಳು | 12 | ಅಭ್ಯರ್ಥಿಗಳ ಹೆಸರು ಮತ್ತು ವಿವರಗಳನ್ನು ಅನುಬಂಧ-01 ರಲ್ಲಿ ತೋರಿಸಿದೆ. |
| 02 | ವೇತನ ದಾಖಲಾತಿ ಪೂರ್ಣ ಪ್ರಮಾಣದಲ್ಲಿ ಲಭ್ಯವಿಲ್ಲದ ಅಭ್ಯರ್ಥಿಗಳು | 06 | ಅಭ್ಯರ್ಥಿಗಳ ಹೆಸರು ಮತ್ತು ವಿವರಗಳನ್ನು ಅನುಬಂಧ-02 ರಲ್ಲಿ ತೋರಿಸಿದೆ. |
| 03 | ಸೇವಾ ದಾಖಲೆಗಳು ಲಭ್ಯವಿರುತ್ತದೆ. R.I.E ಯಿಂದ PGDELT ವಿದ್ಯಾರ್ಹತೆ ಹೊಂದಿದ್ದು ನ್ಯಾಯಾಲಯದ ತೀರ್ಪಿಗೆ ಒಳಪಟ್ಟಿದೆ. | 01 | |
| 04 | ಮೃತಪಟ್ಟ ಅಭ್ಯರ್ಥಿಯ ವಿವರ | 01 | |
| 05 | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ಅಧಿನಿಯಮಗಳಡಿ ನಿಗದಿಪಡಿಸಿದ ಸಂಸ್ಥೆಗಳಿಂದ ವಿದ್ಯಾರ್ಹತೆ ಪಡೆಯದೇ ಇರುವ ಅಭ್ಯರ್ಥಿಗಳು | 06 | ಅಭ್ಯರ್ಥಿಗಳ ಹೆಸರು ಮತ್ತು ವಿವರಗಳನ್ನು ಅಬುಬಂಧ-03 ರಲ್ಲಿ ತೋರಿಸಿದೆ. |
| | ಒಟ್ಟು | 26 | |

ಸಮಿತಿಯ ವರದಿಯನ್ನು ಆದರಿಸಿ ಸರ್ಕಾರಕ್ಕೆ 05.01.2018 ರಂದು ಪ್ರಸ್ತಾವನೆಯನ್ನು ಸಲ್ಲಿಸಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ತನ್ನ ಪತ್ರ ಸಂಖ್ಯೆ ಸಕಇ 136 ಮೊದೇಶಾ 2018 ದಿ:16/17-02-2018 ರಲ್ಲಿ ಈ ಕೆಳಕಂಡಂತೆ ನಿರ್ದೇಶಿಸಿದೆ.

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

(1) ನೇಮಕಾತಿಗೆ ಅನರ್ಹರಾದ 13 ಅಭ್ಯರ್ಥಿಗಳಿಗೆ ಸಕಾರಣದೊಂದಿಗೆ ಹಿಂಬರಹ ನೀಡುವುದು.

(2)ಶ್ರೀ ಕೆ.ಎನ್.ರೇಣುಕಾ ಇವರು ಆಯ್ಕೆಗೆ ಅರ್ಹರಾಗಿದ್ದು, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ಸಂಖ್ಯೆ:33727/2016(ಎಸ್-ಆರ್ಇಎಸ್) ನ್ನು ದಿ:06.02.2018 ರಂದು ಹಿಂಪಡೆದಿರುವುದರಿಂದ ಇವರಿಗೆ ನೇಮಕಾತಿ ಆದೇಶ ನೀಡುವುದು.

(3)ಆಯ್ಕೆಗೆ ಅರ್ಹರಾದ ಬಾಕಿ ಉಳಿದ ಉಲ್ಲೇಖಿತ (1)ರ ಪ್ರಸ್ತಾವನೆಯ ಅನುಬಂಧ-1 ರಲ್ಲಿ ತೋರಿಸಿರುವ ಅಭ್ಯರ್ಥಿಗಳಿಗೆ ಜರೂರಾಗಿ ನೇಮಕಾತಿ ಆದೇಶ ನೀಡುವುದು.

ಸರ್ಕಾರದ ಪತ್ರದಲ್ಲಿನ ನಿರ್ದೇಶನದಂತೆ ಮುಂದಿನ ಕ್ರಮವಹಿಸಿದ್ದು ಆಡಳಿತ ಮಂಡಳಿಯ ಅವಗಾಹನೆಗೆ ಮಂಡಿಸಿದೆ.

<u>ತೀರ್ಮಾನ:</u>

**ವಿಷಯವನ್ನು ಆಡಳಿತ ಮಂಡಳಿಯು ಅವಗಾಹಿಸಿ, ಸರ್ಕಾರದ ಪತ್ರದಲ್ಲಿ ಅನುಮೋದಿಸಿದಂತೆ ಆಯ್ಕೆಗೆ ಅರ್ಹರಾದ 12 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ತೀರ್ಮಾನಿಸಿತು.**

<u>ವಿಷಯ ಸಂಖ್ಯೆ: 46</u>

<u>ಜಿಲ್ಲೆಗೆ ಒಂದರಂತೆ ಡ್ರಾಮಾ ಮಾಸ್ಟರ್ ಗಳ ಹುದ್ದೆಗಳನ್ನು ವಸತಿ ಶಾಲಾ /ಕಾಲೇಜುಗಳಿಗೆ ಸೃಜಿಸುವ ಬಗ್ಗೆ</u>

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಒಟ್ಟು 818 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ ಈ ವಸತಿ ಶಾಲೆ/ಕಾಲೇಜುಗಳಲ್ಲಿ ಪ.ಜಾತಿ, ಪ.ವರ್ಗ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು 2017-18ನೇ ಸಾಲಿನಲ್ಲಿ 1.43 ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಹಾಗೂ ವಿದ್ಯಾರ್ಥಿಗಳ ಸರ್ವೋತೋಮುಖ ಅಭಿವೃದ್ಧಿಯ ಗುರಿಯನ್ನು ಹೊಂದಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ವಸತಿ ಶಾಲೆಗಳಿಗೆ 494 ಸಂಗೀತ ಶಿಕ್ಷಕರುಗಳ ಹುದ್ದೆಗಳನ್ನು ಸೃಜಿಸಲಾಗಿದೆ. ಹಾಗೂ ಈ ಪೈಕಿ 234 ಖಾಯಂ ಸಂಗೀತ ಶಿಕ್ಷಕರುಗಳು ಕರ್ತವ್ಯ ನಿರ್ವಹಿಸುತ್ತಿದ್ದು 230 ಹುದ್ದೆಗಳು ಖಾಲಿ ಇದೆ.

ವಸತಿ ಶಾಲಾ ವಿದ್ಯಾರ್ಥಿಗಳಿಗೆ ಸಂಗೀತ ಅಭಿರುಚಿಯ ಜೊತೆಗೆ ನಾಟಕ, ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಆಸಕ್ತಿ ಹುಟ್ಟಿಸಲು "ಡ್ರಾಮಾ ಮಾಸ್ಟರ್"ಗಳ ಹುದ್ದೆಗಳನ್ನು ಸೃಜಿಸಿ ವಿದ್ಯಾರ್ಥಿಗಳಿಗೆ ಅಭಿರುಚಿ ಹುಟ್ಟಿಸಲು ಉದ್ದೇಶಿಸಿದೆ. ಪ್ರಾಯೋಗಿಕವಾಗಿ ಪ್ರತಿ ಜಿಲ್ಲೆಗೆ ಒಬ್ಬ ಡ್ರಾಮಾ ಮಾಸ್ಟರ್ ಹುದ್ದೆಯನ್ನು ಸೃಜಿಸಿ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ನಾಟಕ ಹಾಗೂ ಇತರೆ ಸಾಂಸ್ಕೃತಿಕ ಕಲೆಗಳಲ್ಲಿ ಅಭಿರುಚಿ ಹೆಚ್ಚಿಸಲು ಉದ್ದೇಶಿಸಿದೆ. ಪ್ರಸ್ತುತ ಖಾಲಿ ಇರುವ 230 ಸಂಗೀತ ಶಿಕ್ಷಕರ ಹುದ್ದೆಗಳ ಪೈಕಿ 30 ಹುದ್ದೆಗಳನ್ನು ಡ್ರಾಮಾ ಮಾಸ್ಟರ್ ಹುದ್ದೆಗಳನ್ನಾಗಿ ಪರಿವರ್ತಿಸಲು ಪ್ರಸ್ತಾಪಿಸಿದೆ. ಪ್ರಸ್ತುತ ಡ್ರಾಮಾ ಮಾಸ್ಟರ್ ಹುದ್ದೆಗಳು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳು ಸಂಘದ ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಅಳವಡಿಕೆ ಆಗಿರುವುದಿಲ್ಲ. ಈ ಹುದ್ದೆಗಳಿಗೆ ಅಗತ್ಯ ವಿದ್ಯಾರ್ಹತೆ ಹಾಗೂ ನೇಮಕಾತಿಯ

**ಕಾರ್ಯನಿರ್ವಾಹಕ ನಿರ್ದೇಶಕರು** **ಅಧ್ಯಕ್ಷರು**

ಮಾನದಂಡಗಳನ್ನು ಪರಿಶೀಲಿಸಿ ವೃಂದ ಮತ್ತು ನೇಮಕಾತಿ ನಿಯಮಕ್ಕೆ ಹುದ್ದೆ ಮಂಜೂರಾದ ನಂತರ ಸೂಕ್ತ ತಿದ್ದುಪಡಿ ತರಲಾಗುವುದು. ವಿಷಯವನ್ನು ಆಡಳಿತ ಮಂಡಳಿಯಲ್ಲಿ ಮಂಡಿಸಿ ಖಾಲಿ ಇರುವ 230 ಸಂಗೀತ ಶಿಕ್ಷಕರ ಹುದ್ದೆಗಳ ಪೈಕಿ 30 ಹುದ್ದೆಗಳನ್ನು ಡ್ರಾಮಾ ಶಿಕ್ಷಕರ ಹುದ್ದೆಗಳಾಗಿ ಪರಿವರ್ತಿಸಲು ಪ್ರಸ್ತಾಪಿಸಿದೆ. ಆಡಳಿತ ಮಂಡಳಿ ಅನುಮೋದಿಸಿದಲ್ಲಿ ಹುದ್ದೆಗಳ ಸೃಜನೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಆಡಳಿತ ಮಂಡಳಿ ತೀರ್ಮಾನ ಕೋರಿದೆ.

**ತೀರ್ಮಾನ:**

1. ಡಾ: ನಿರಂಜನ್ ಆರಾಧ್ಯ ಸಂಘದ ಅಕಾಡೆಮಿಕ್ ಕೌನ್ಸಿಲ್ ಅಧ್ಯಕ್ಷರು ಮಾತಾನಾಡಿ, ಡ್ರಾಮಾ ಮಾಸ್ಟರ್‌ಗಳಿಗೆ ಈಗಾಗಲೇ ಬೆಂಗಳೂರು ವಿಶ್ವ ವಿಧ್ಯಾಲಯದಲ್ಲಿ ಕೋರ್ಸ್‌ಗಳನ್ನು ನಡೆಸಲಾಗುತ್ತಿದ್ದು, ಬಿ.ಎ. ಮತ್ತು ಎಂ.ಎ. ಪದವಿಗಳನ್ನು ನೀಡಲಾಗುತ್ತಿದೆಯೆಂದು ತಿಳಿಸಿದರು. ಸಂಘದ ಅಕಾಡೆಮಿಕ್ ಕೌನ್ಸಿಲ್ ಅಧ್ಯಕ್ಷರಾದ ಡಾ:ನಿರಂಜನ್ ಆರಾಧ್ಯರವರು ಡ್ರಾಮಾ ಮಾಸ್ಟರ್ ಹುದ್ದೆಯು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲು ಸಹ ಉಪಯುಕ್ತವಾಗುವ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರದ ಜವಾಹರ್ ನವೋದಯ ವಸತಿ ಶಾಲೆಗಳಲ್ಲಿ ಈ ಹುದ್ದೆಗಳನ್ನು ಸೃಜಿಸಲಾಗಿರುವುದಾಗಿ ತಿಳಿಸಿದರು.
2. ಪ್ರಸ್ತಾಪಿಸಿದ 30 ಸಂಗೀತ ಶಿಕ್ಷಕರುಗಳ ಹುದ್ದೆಗಳನ್ನು ಜಿಲ್ಲೆಗೆ ಒಂದರಂತೆ ಡ್ರಾಮ ಮಾಸ್ಟರ್ ಹುದ್ದೆಗಳಾಗಿ ಪರಿವರ್ತಿಸಲು ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿ ಆದೇಶ ಪಡೆಯುವಂತೆ, ಆಡಳಿತ ಮಂಡಳಿಯು ತೀರ್ಮಾನಿಸಿತು.
3. ಪ್ರಸ್ತಾಪಿತ 30 ಸಂಗೀತ ಶಿಕ್ಷಕರ ಹುದ್ದೆಗಳು ಡ್ರಾಮ ಮಾಸ್ಟರ್ ಹುದ್ದೆಗಳ ಸರ್ಕಾರದ ಪರಿವರ್ತನಾ ಆದೇಶ ಪಡೆದ ನಂತರ ಖಾಯಂ ನೇಮಕಾತಿಯಾಗುವವರೆಗೆ, ಸೂಕ್ತ ವಿದ್ಯಾರ್ಹತೆಯುಳ್ಳ ಡ್ರಾಮಾ ಮಾಸ್ಟರ್ ಹುದ್ದೆಗಳನ್ನು ಹೊರಸಂಪನ್ಮೂಲವತಿಯಿಂದ ನೇಮಕ ಮಾಡಿಕೊಳ್ಳಲು ಅನುಮೋದಿಸಿತು.

ವಿಷಯ ಸಂಖ್ಯೆ: 47

ಟೆಂಡರ್ ಅನುಮೋದನಾ ಸಮಿತಿಯ ಸಭೆಯ ನಡವಳಿಗಳನ್ನು ಅವಗಾಹಿಸುವ ಬಗ್ಗೆ

ಮೊರಾರ್ಜಿ ದೇಸಾಯಿ/ ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜು/ಕಿತ್ತೂರ ರಾಣಿ ಚೆನ್ನಮ್ಮ/ ಇಂದಿರಾ ಗಾಂಧಿ/ ಡಾ॥ ಬಿ.ಆರ್.ಅಂಬೇಡ್ಕರ್/ಅಟಲಬಿಹಾರಿ ವಾಜಪೇಯಿ/ ಏಕಲವ್ಯ ಮಾದರಿ/ ಡಾ॥ ಬಾಬು ಜಗಜೀವನರಾಂ ಭವನ/ವಾಲ್ಮೀಕಿ ಭವನ/ವಿದ್ಯಾರ್ಥಿ ನಿಲಯ/ ಡಾ॥ ಬಾಬು ಜಗಜೀವನರಾಂ ತರಭೇತಿ ಮತ್ತು ಸಂಶೋಧನಾ ಕೇಂದ್ರ/ ಖಾಲಿ ಇರುವ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ದುರಸ್ತಿ ಹಾಗೂ ಹೆಚ್ಚುವರಿ/ ವಿಜ್ಞಾನ ಮತು ಕಲಾ ಕಾಲೇಜು/ ಡಾ॥ ಬಿ.ಆರ್.ಅಂಬೇಡ್ಕರ್ ಭವನ/ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಪದವಿ ಪೂರ್ವ ಕಾಲೇಜಿಗೆ ಮೇಲ್ದರ್ಜೆಗೇರಿಸುವ/ಆಧಿವಾಸಿ ಭವನ/ಬಸವ ಮಂಟಪ/ಬುಡಕಟ್ಟು ಜನಾಂಗದವರ ಸಂಶೋಧನಾ ಕೇಂದ್ರ/ ಸ್ಫೂರ್ತಿ ಸೌಧ/ಅಕ್ಕ ನಾಗಲಾಂಬಿಕ ಭವನ/ಆಶ್ರಮ ಶಾಲೆ/ ದೇವರಾಜು ಅರಸು ಭವನ/ಮಾತಂಗ ಮಹರ್ಷಿ ಸೇವಾಶ್ರಮ ಟ್ರಸ್ಟ್ ನಿರ್ಮಾಣ

ಕಾರ್ಯನಿರ್ವಾಹಕ ನಿರ್ದೇಶಕರು                                                                 ಅಧ್ಯಕ್ಷರು

393 ಕಾಮಗಾರಿಗಳಿಗೆ ವಿವಿಧ ದಿನಾಂಕಗಳಂದು ಇ-ಪೋರ್ಟಾಲ್ ಮುಖಾಂತರ ಟೆಂಡರ್ ಮತ್ತು ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಈ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರು ನಮೂದಿಸಿರುವ ದರಗಳನ್ನು ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಸಮಾಜ ಕಲ್ಯಾಣ ಇಲಾಖೆ ಹಾಗೂ ಸಂಘದ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಟೆಂಡರ್ ಅಂಗೀಕಾರ ಸಮಿತಿ ಸಭೆಯ(TAC) ದಿನಾಂಕ: 18.08.2017, 26.09.2017, 31.10.2017, 07.12.2017, 10.01.208, 27.01.2018, 16.02.2018, & 20.02.2018 ರಂದು ಅನುಮೋದಿಸಲಾಗಿದೆ. ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ. ನಡವಳಿಯ ಪ್ರತಿಯನ್ನು ಪ್ರತ್ಯೇಕವಾಗಿ ನೀಡಲಾಗಿದೆ.

| ಕ್ರ ಸಂ | **ಟೆಂಡರ್ ಕಾಮಗಾರಿಗಳ ವಿವರಗಳು** | **ಅನುಮೋದಿಸಿದ ಕಾಮಗಾರಿಗಳ ವಿವರಗಳು** |
|---|---|---|
| 1 | ಮೊರಾರ್ಜಿ ದೇಸಾಯಿ/ ಮೊರಾರ್ಜಿ ದೇಸಾಯಿ ಪದವಿಪೂರ್ವ ಕಾಲೇಜು/ಕಿತ್ತೂರ ರಾಣಿ ಚೆನ್ನಮ್ಮ ಇಂದಿರಾ ಗಾಂಧಿ/ಡಾ॥ ಬಿ.ಆರ್.ಅಂಬೇಡ್ಕರ್/ ವಸತಿ ಶಾಲೆಗಳ ನಿರ್ಮಾಣ ಕಾಮಗಾರಿಗಳು | 89 |
| 2 | ಅಟಲಬಿಹಾರಿ ವಾಜಪೇಯಿ ವಸತಿ ಶಾಲೆಗಳ ನಿರ್ಮಾಣ ಕಾಮಗಾರಿಗಳು | 04 |
| 3 | ಏಕಲವ್ಯ ಮಾದರಿ ವಸತಿ ಶಾಲೆಗಳ ನಿರ್ಮಾಣ ಕಾಮಗಾರಿಗಳು | 01 |
| 4 | ಡಾ॥ ಬಾಬು ಜಗಜೀವನರಾಂ ಭವನ ನಿರ್ಮಾಣ ಕಾಮಗಾರಿಗಳು | 08 |
| 5 | ವಾಲ್ಮೀಕಿ ಭವನ ನಿರ್ಮಾಣ ಕಾಮಗಾರಿಗಳು | 02 |
| 6 | ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ ಕಾಮಗಾರಿಗಳು | 162 |
| 7 | ಡಾ॥ ಬಾಬು ಜಗಜೀವನರಾಂ ತರಬೇತಿ ಮತ್ತು ಸಂಶೋಧನಾ ಕೇಂದ್ರ ನಿರ್ಮಾಣ ಕಾಮಗಾರಿ. | 01 |
| 8 | ದುರಸ್ತಿ ಕೊಳವೆ ಬಾವಿ ಕೊರೆಯುವುದು ಹಾಗೂ ಹೆಚ್ಚುವರಿ ವಸತಿ ಗೃಹಗಳ ನಿರ್ಮಾಣ ಕಾಮಗಾರಿಗಳು | 66 |
| 9 | ವಿಜ್ಞಾನ ಮತು ಕಲಾ ಕಾಲೇಜು ನಿರ್ಮಾಣ ಕಾಮಗಾರಿಗಳು. | 02 |
| 10 | ಡಾ॥ ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಗಳು | 07 |
| 11 | ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಪದವಿ ಪೂರ್ವ ಕಾಲೇಜಿಗೆ ಮೇಲ್ದರ್ಜೆಗೇರಿಸುವ ನಿರ್ಮಾಣ ಕಾಮಗಾರಿಗಳು | 27 |
| 12 | ಆದಿವಾಸಿ ಭವನ ನಿರ್ಮಾಣ ಕಾಮಗಾರಿಗಳು | 05 |
| 13 | ಬಸವ ಮಂಟಪ ನಿರ್ಮಾಣ ಕಾಮಗಾರಿ. | 01 |
| 14 | ಬುಡಕಟ್ಟು ಜನಾಂಗದವರ ಸಂಶೋಧನಾ ಕೇಂದ್ರ ನಿರ್ಮಾಣ ಕಾಮಗಾರಿ. | 01 |
| 15 | ಸ್ಫೂರ್ತಿ ಸೌಧ ನಿರ್ಮಾಣ ಕಾಮಗಾರಿ. | 01 |
| 16 | ಅಕ್ಕ ನಾಗಲಾಂಬಿಕ ಭವನ ನಿರ್ಮಾಣ ಕಾಮಗಾರಿ. | 01 |
| 17 | ಆಶ್ರಮ ಶಾಲೆ ನಿರ್ಮಾಣ ಕಾಮಗಾರಿಗಳು | 03 |
| 18 | ದೇವರಾಜು ಅರಸು ಭವನ ನಿರ್ಮಾಣ ಕಾಮಗಾರಿ. | 01 |
| 19 | ಮಾತಂಗ ಮಹರ್ಷಿ ಸೇವಾಶ್ರಮ ಟ್ರಸ್ಟ್ ನಿರ್ಮಾಣ ಕಾಮಗಾರಿ | 01 |
| | **ಒಟ್ಟು** | 393 |

ಮೇಲ್ಕಂಡ ಟೆಂಡರ್ ಅನುಮೋದನಾ ಸಮಿತಿ ನಡವಳಿಗಳನ್ನು ಆಡಳಿತ ಮಂಡಳಿಯ ಅವಗಾಹನೆಗೆ ಸಲ್ಲಿಸಿದೆ.

**<u>ತೀರ್ಮಾನ:</u>**

**ವಿಷಯವನ್ನು ಆಡಳಿತ ಮಂಡಳಿಯು ಅವಗಾಹಿಸಿತು.**

**ಕಾರ್ಯನಿರ್ವಾಹಕ ನಿರ್ದೇಶಕರು**

**ಅಧ್ಯಕ್ಷರು**

ವಿಷಯ ಸಂಖ್ಯೆ: 48

**ಮೊರಾರ್ಜಿ ದೇಸಾಯಿ /ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಮತ್ತು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ವಿದ್ಯಾರ್ಥಿನಿಲಯಗಳ Variations (ಇ.ಐ.ಆರ್.ಎಲ್. ಮತ್ತು ವರ್ಕ್ ಸ್ಲಿಪ್) ಅನುಮೋದನೆಯಾಗಿದ್ದು, ಘಟನೋತ್ತರ ಅನುಮೋದನೆ ಪಡೆಯುವ ಕಾಮಗಾರಿಗಳ ವಿವರಗಳು.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 44ನೇ ಆಡಳಿತ ಮಂಡಳಿಯ ಸಭೆಯಲ್ಲಿ ಕಾಮಗಾರಿಗಳ ಪರಿಷ್ಕೃತ ಬಿ.ಒ.ಕ್ಯೂ ಅನ್ನು ಅಂದಾಜು ಮೊತ್ತದ ಶೇ.5%ವರೆಗೆ ಅನುಮೋದಿಸುವ ಪ್ರತ್ಯಾಧಿಕಾರವನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ರವರಿಗೆ ಪ್ರತ್ಯಾಯೋಜಿಸಲಾಗಿರುತ್ತದೆ. ಅದರಂತೆ ಕಾಮಗಾರಿಗಳ(ಶೇ 5% ರವರೆಗಿರುವ) ಪರಿಷ್ಕೃತ ಬಿ.ಒ.ಕ್ಯೂ ಗಳ 14 ಪ್ರಸ್ತಾವನೆಗಳಿಗೆ ಕಾರ್ಯನಿರ್ವಾಹಕ ನಿರ್ದೇಶಕರು ಅನುಮೋದಿಸಿರುತ್ತಾರೆ. ಕಾಮಗಾರಿಗಳ(ಶೇ 5% ಕ್ಕಿಂತ ಹೆಚ್ಚಿನ) ಪರಿಷ್ಕೃತ ಬಿ.ಒ.ಕ್ಯೂ ಗಳ 2 ಪ್ರಸ್ತಾವನೆಗಳಿಗೆ ಸರ್ಕಾರದ ವತಿಯಿಂದ ಅನುಮೋದನೆ ಪಡೆಯಲಾಗಿದೆ. ಮೊರಾರ್ಜಿ ದೇಸಾಯಿ /ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಮತ್ತು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ವಿದ್ಯಾರ್ಥಿನಿಲಯಗಳ (ಇ.ಐ.ಆರ್.ಎಲ್. ಮತ್ತು ವರ್ಕ್ ಸ್ಲಿಪ್) ಅನುಮೋದಿತ 16 ಪರಿಷ್ಕೃತ ಬಿ.ಒ.ಕ್ಯೂ ಗಳನ್ನು ಆಡಳಿತ ಮಂಡಳಿಯ ಸಭೆಯ ಅವಗಾಹನೆಗಾಗಿ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

ತೀರ್ಮಾನ:

**ವಿಷಯವನ್ನು ಆಡಳಿತ ಮಂಡಳಿಯು ಅವಗಾಹಿಸಿ, ಅನುಮೋದಿಸಿತು.**

ವಿಷಯ ಸಂಖ್ಯೆ: 49

**ಕಾರ್ಯನಿರ್ವಾಹಕ ನಿರ್ದೇಶಕರಿಗೆ ಕಾಮಗಾರಿಗಳ ರೂ.1.00 ಕೋಟಿವರೆಗಿನ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯ ಅಧಿಕಾರ ಪ್ರತ್ಯಾಯೋಜನೆ ಮತ್ತು ರೂ.50.00 ಲಕ್ಷಗಳ ಮೊತ್ತದ ಕಾಮಗಾರಿಗಳ ಟೆಂಡರ್ ಅನುಮೋದನೆಯ ಅಧಿಕಾರ ಪ್ರತ್ಯಾಯೋಜನೆ ನೀಡುವ ಬಗ್ಗೆ.**

ಕರ್ನಾಟಕ ರಾಜ್ಯ ಸರ್ಕಾರದಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮೊರಾರ್ಜಿ ದೇಸಾಯಿ /ಕಿತ್ತೂರು ರಾಣಿ ಚೆನ್ನಮ್ಮ /ಅಟಲ್ ಬಿಹಾರಿ ವಾಜಪೇಯಿ ಇತ್ಯಾದಿ ವಸತಿ ಶಾಲೆಗಳನ್ನು /ಏಕಲವ್ಯ ಮಾದರಿ ವಸತಿ ಶಾಲೆಗಳನ್ನು/ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಿ, ಸರ್ಕಾರದ ಅಂಗ ಸಂಸ್ಥೆಯಾದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ನಡೆಸಲಾಗುತ್ತಿದೆ. ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದ ಗ್ರಾಮೀಣ ಪ್ರದೇಶ ಪರಿಶಿಷ್ಟ ವರ್ಗ, ಪರಿಶಿಷ್ಟ ಜಾತಿ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಉತ್ತಮ

**ಕಾರ್ಯನಿರ್ವಾಹಕ ನಿರ್ದೇಶಕರು** **ಅಧ್ಯಕ್ಷರು**

ಗುಣಮಟ್ಟದ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಈ ವಸತಿ ಶಾಲೆಗಳ ನಿರ್ಮಾಣ ಹಾಗೂ ನಿರ್ವಹಣೆ ಕಾಮಗಾರಿಗಳನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ವಹಿಸಲಾಗಿದೆ.

ಹಾಲಿ ರಾಜ್ಯಾದ್ಯಂತ 818 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತ ವಸತಿ ಶಾಲೆಗಳು 386 ಸ್ವಂತ ಕಟ್ಟಡ ಹೊಂದಿದ್ದು, 123 ವಸತಿ ಶಾಲೆಗಳ ಕಟ್ಟಡ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದ್ದು, 58 ವಸತಿ ಶಾಲೆಗಳ ಕಟ್ಟಡ ನಿರ್ಮಾಣ ಕಾಮಗಾರಿಯು ಟೆಂಡರ್ ಹಂತದಲ್ಲಿದ್ದು, 53 ವಸತಿ ಶಾಲೆಗಳ ಕಾಮಗಾರಿಯ ಅಂದಾಜು ಪಟ್ಟಿ ತಯಾರಿಕಾ ಹಂತದಲ್ಲಿದ್ದು, 198 ವಸತಿ ಶಾಲೆಗಳ ನಿರ್ಮಾಣಕ್ಕೆ ನಿವೇಶನವು ಅಗತ್ಯವಾಗಿರುತ್ತದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ವಸತಿ ಶಾಲೆಗಳ ನಿರ್ಮಾಣ ಹಾಗೂ ನಿರ್ವಹಣೆಯನ್ನು ಸಹ ಕೈಗೊಳ್ಳಲಾಗುತ್ತಿದೆ. ವಸತಿ ಶಾಲೆಗಳ ದುರಸ್ತಿ ಕಾಮಗಾರಿಗಳನ್ನು ಹಾಗೂ ಕುಡಿಯುವ ನೀರು ಸರಬರಾಜು ವ್ಯವಸ್ಥೆಯನ್ನು ಕಲ್ಪಿಸುವುದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅತಿ ಅವಶ್ಯವಾಗಿರುತ್ತದೆ. ಹಾಲಿ ಸಂಘದ ಕಾರ್ಯವ್ಯಾಪ್ತಿಯು ಹೆಚ್ಚಳವಾಗಿದ್ದು, ಪ್ರತಿ ವರ್ಷವೂ ಸಹ ಲೋಕೋಪಯೋಗಿ ಇಲಾಖೆ ದರಪಟ್ಟಿಯು ಪರಿಷ್ಕೃತಗೊಳ್ಳುತ್ತಿರುವುದರಿಂದ ಅತಿ ಅವಶ್ಯಕ ಕಾಮಗಾರಿಗಳ ಅಂದಾಜು ಮೊತ್ತವು ಗಣನೀಯವಾಗಿ ಹೆಚ್ಚಳವಾಗುತ್ತದೆ. ಹಾಲಿ ಕಾರ್ಯನಿರ್ವಾಹಕ ನಿರ್ದೇಶಕರಿಗೆ ರೂ.20.00 ಲಕ್ಷಗಳವರೆಗಿನ ಕಾಮಗಾರಿಗಳ ಅಂದಾಜು ಮೊತ್ತಕ್ಕೆ ಮಾತ್ರ ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 608 ಬಿಇಬಿ 2015, ದಿನಾಂಕ:10-12-2015ರಲ್ಲಿ ಅಧಿಕಾರ ಪ್ರತ್ಯಾಯೋಜನೆಯಾಗಿರುತ್ತದೆ. ಅತೀ ಅವಶ್ಯಕ ತುರ್ತು ಕಾಮಗಾರಿಗಳ ಅಂದಾಜು ಮೊತ್ತವು ರೂ.20.00 ಗಳಗಿಂತ ಹೆಚ್ಚಳವಾಗುತ್ತಿದ್ದು, ಸದರಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಸರ್ಕಾರದಿಂದ ಪಡೆದು ಕಾಮಗಾರಿಗಳನ್ನು ಕೈಗೊಳ್ಳಲು ವಿಳಂಬವಾಗುತ್ತಿರುತ್ತದೆ.

ಮೇಲ್ಕಂಡ ಹಿನ್ನೆಲೆಯಲ್ಲಿ ಸಂಘದ ಕಾರ್ಯನಿರ್ವಾಹಕ ನಿರ್ದೇಶಕರಿಗೆ ಕಾಮಗಾರಿಗಳ ಅಂದಾಜು ಮೊತ್ತ ರೂ.1.00 ಕೋಟಿಗಳವರೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಹಾಗೂ ರೂ.50.00 ಲಕ್ಷಗಳ ಕಾಮಗಾರಿಗಳ ಟೆಂಡರ್ (ಶೇ.5 ಕ್ಕಿಂತ ಕಡಿಮೆ) ಅನುಮೋದನೆಯ ಅಧಿಕಾರ ಪ್ರತ್ಯಾಯೋಜನೆಯನ್ನು ಈ ಕೆಳಕಂಡಂತೆ ಪ್ರಸ್ತಾಪಿಸಲಾಗಿದೆ.

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

| ಕ್ರ. ಸಂ | ಅಧಿಕಾರದ ವಿವರ | ಕೇಂದ್ರ ಕಛೇರಿ | | |
|---|---|---|---|---|
| | | ಈಗಾಗಲೇ ಸರ್ಕಾರದ ಆದೇಶದನ್ವಯ ನೀಡಿರುವ ಅಧಿಕಾರದ ವ್ಯಾಪ್ತಿ | ಪ್ರತ್ಯಾಯೋಜಿಸಿದ ಅಧಿಕಾರಿಯ ವಿವರ | ಪ್ರಸ್ತಾಪಿಸಿದ ಅಧಿಕಾರದ ವ್ಯಾಪ್ತಿ |
| 1 | ಶಾಶ್ವತ ಕಾಮಗಾರಿಗಳ ಅಂದಾಜು ಪಟ್ಟಿಗೆ ಆಡಳತಾತ್ಮಕ ಅನುಮೋದನೆ ನೀಡುವುದು. | ಅ)ರೂ. 20,00,000/- ವರೆಗೆ | ಕಾರ್ಯನಿರ್ವಾಹಕ ನಿರ್ದೇಶಕರು | ಅ) ರೂ. 1,00,00,000/- ವರೆಗೆ |
| | | ಆ) ರೂ. 20,00,000/- ಗಳಗೂ ಹೆಚ್ಚಾಗಿ ರೂ.5.00 ಕೋಟಿಗಳ ವರೆಗೆ | ಉಪಾಧ್ಯಕ್ಷರು | ಆ)ರೂ. 1,00,00,000/- ಗಳಗೂ ಹೆಚ್ಚಾಗಿ ರೂ.10.00 ಕೋಟಿಗಳ ವರೆಗೆ |
| | | ಇ) ರೂ.5.00 ಕೋಟಿಗಳು ಹಾಗೂ ಅದಕ್ಕೂ ಹೆಚ್ಚಿನ ಮೊತ್ತಕ್ಕೆ | ಸಚಿವ ಸಂಪುಟ (ಸಂಘದ ಆಡಳತ ಮಂಡಳಯ ಅನುಮೋದನೆಯೊಂದಿಗೆ) | ಇ) ರೂ.10.00 ಕೋಟಿಗಳು ಹಾಗೂ ಅದಕ್ಕೂ ಹೆಚ್ಚಿನ ಮೊತ್ತಕ್ಕೆ |
| 2 | ತಾತ್ಕಲಿಕ ಸಣ್ಣ ಕಾಮಗಾರಿಗಳಿಗೆ ಮತ್ತು ಹೆಚ್ಚುವರಿ ಅಥವಾ ಬದಲಾವಣಿ ಕಾಮಗಾರಿಗಳು ಸೇರಿದಂತೆ ನಿರ್ವಹಣಾ ಕಾಮಗಾರಿಗಳ ಅಂದಾಜುಪಟ್ಟಿಗೆ ಅನುಮೋದನೆ ನೀಡುವುದು | ಅ) ರೂ. 20,00,000/- ಗಳವರೆಗೆ | ಕಾರ್ಯನಿರ್ವಾಹಕ ನಿರ್ದೇಶಕರು | ಅ)ರೂ. 1.00 ಕೋಟಿಗಳವರೆಗೆ |
| | | ಆ) ರೂ. 20,00,000/- ಗಳಗೂ ಹೆಚ್ಚಾಗಿ ರೂ.5.00 ಕೋಟಿಗಳ ವರೆಗೆ | ಉಪಾಧ್ಯಕ್ಷರು | ಆ) ರೂ. 1.00ಕೋಟಿಗಳಗೂ ಹೆಚ್ಚಾಗಿ ರೂ.10.00 ಕೋಟಿಗಳ ವರೆಗೆ |
| 3. | ಕಾಮಗಾರಿಗಳ ಟೆಂಡರ್ ಅನುಮೋದನೆ ನೀಡುವುದು | - | ಕಾರ್ಯನಿರ್ವಾಹಕ ನಿರ್ದೇಶಕರು | ರೂ.50.00ಲಕ್ಷಗಳವರೆಗೆ (ಶೇ.5ಕ್ಕಿಂತ ಕಡಿಮೆ) |

ವಿಷಯವನ್ನು ಆಡಳತ ಮಂಡಳ ಸಭೆಯ ಮುಂದೆ ಮಂಡಿಸಿ, ಮೇಲ್ಕಂಡಂತೆ ಪ್ರಸ್ತಾಪಿಸಿದ ಅಧಿಕಾರ ಪ್ರತ್ಯಾಯೋಜನೆಯನ್ನು ಅನುಮೋದಿಸಲು ಕೋರಿದೆ.

<u>ತೀರ್ಮಾನ:</u>

**ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ವೆಚ್ಚ)ರವರು, ವಿಷಯವನ್ನು ಅವಗಾಹಿಸಿ, ಆರ್ಥಿಕ ಪ್ರತ್ಯಾಯೋಜನೆಗೆ ಸರ್ಕಾರದ ಆಡಳತ ಇಲಾಖೆಯ ಮುಖಾಂತರ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸುವಂತೆ ತಿಳಸಿದರು. ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳ ಅಭಿಪ್ರಾಯವನ್ನು ಅನುಮೋದಿಸಿ, ಆರ್ಥಿಕ ಪ್ರತ್ಯಾಯೋಜನೆಗೆ ಅಗತ್ಯ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಿತು.**

<u>ವಿಷಯ ಸಂಖ್ಯೆ: 50</u>

**<u>ಗುತ್ತಿಗೆದಾರರು ಟೆಂಡರ್‌ನಲ್ಲಿ ನಮೂದಿಸಿದಂತೆ, ಐಟಂವಾರು ಕಡಿಮೆ ಮೊತ್ತಕ್ಕೆ Seriously unbalanced Tender Amount ಗೆ ಭದ್ರತಾ ಠೇವಣಿ ಪಡೆಯುವ ಬಗ್ಗೆ.</u>**

KW4 Clause 25.5 ರಂತೆ ಕಾಮಗಾರಿಯ ಟೆಂಡರ್ ವ್ಯತ್ಯಾಸದ ಮೊತ್ತಕ್ಕೆ ಬ್ಯಾಂಕ್ ಗ್ಯಾರಂಟಿಯನ್ನು ಪಡೆಯಲು ಈ ಕೆಳಕಂಡಂತೆ ವಿವರಿಸಲಾಗಿದೆ.

ಕಾರ್ಯನಿರ್ವಾಹಕ ನಿರ್ದೇಶಕರು

**ಅಧ್ಯಕ್ಷರು**

If the tender of the successful tenderer is **seriously unbalanced** in relation to the Employer's estimate of the cost of the work to be performed under the contract, the Employer may require the Tenderer to produce detailed price analyses for any or all items of the Bill of Quantities, to demonstrate the internal consistency of those prices with the construction methods and schedule proposed. After evaluation of the price analyses, the Employer may require that the amount of the performance security set forth in Clause 29 be increased at the expense of the successful Tenderer to a level sufficient to protect the Employer against financial loss in the event of default of the successful under the contract.

ಹಾಲಿ ಕಾಮಗಾರಿಗಳ ಗುತ್ತಿಗೆ ಮೊತ್ತಕ್ಕೆ ಹೋಲಿಕೆ ಮಾಡಿ, ಕಡಿಮೆ ಇದ್ದಲ್ಲಿ ಹೆಚ್ಚುವರಿ ಬ್ಯಾಂಕ್ ಗ್ಯಾರಂಟಿಯನ್ನು ಪಡೆಯಲಾಗುತ್ತಿದೆ. ಗುತ್ತಿಗೆದಾರರು ಕಾಮಗಾರಿಗಳ ಐಟಂವಾರು ದರಗಳನ್ನು ನಮೂದಿಸುವಾಗ ಕೆಲವು ಐಟಂಗಳಿಗೆ ಅತೀ ಕಡಿಮೆ/ಅತೀ ಹೆಚ್ಚು ದರಗಳನ್ನು (ಶೇಕಡಾ 75% ಕಡಿಮೆ/ ಶೇಕಡಾ 125% ಹೆಚ್ಚುವರಿ) ದರಗಳನ್ನು ನಮೂದಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಶೇಕಡಾ 10%ರಷ್ಟು ಗುತ್ತಿಗೆದಾರರ ಲಾಭಾಂಶವೆಂದು ಪರಿಗಣಿಸಿ, ಐಟಂವಾರು ಶೇಕಡಾ 90% ಕ್ಕಿಂತ ಕಡಿಮೆ ಇರುವ ಮೊತ್ತಕ್ಕೆ ಐಟಂವಾರು ಹೆಚ್ಚುವರಿ ಬ್ಯಾಂಕ್ ಗ್ಯಾರಂಟಿಯನ್ನು ಪಡೆಯಲು ಹಾಗೂ 125%ಕ್ಕಿಂತ ಹೆಚ್ಚುವರಿ ನಮೂದಿಸುವ ಐಟಂವಾರು ದರಗಳನ್ನು ಪ್ರತಿ ಚಾಲ್ತಿ ಬಿಲ್ಲುಗಳಲ್ಲಿ ತಡೆಹಿಡಿದು, ಕಾಮಗಾರಿಯನ್ನು ಪೂರ್ಣಗೊಂಡ ನಂತರದ, ತಡೆ ಹಿಡಿದ ಮೊತ್ತ ಹಾಗೂ ಹೆಚ್ಚುವರಿ ಬ್ಯಾಂಕ್ ಗ್ಯಾರಂಟಿಯನ್ನು ಬಿಡುಗಡೆಗೊಳಿಸಲು ಆಡಳಿತ ಮಂಡಳಿಯ ಸಭೆಗೆ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಮಂಡಿಸಿದೆ.

ತೀರ್ಮಾನ:

**ಸರ್ಕಾರದ ಅಪರ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆರವರು ಪ್ರಸ್ತಾಪಿಸಿದ ವಿಷಯದ ಬಗ್ಗೆ ಸರ್ಕಾರದ ಆಡಳಿತ ಇಲಾಖೆಯ ಮುಖಾಂತರ ಲೋಕೋಪಯೋಗಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿ, ಲೋಕೋಪಯೋಗಿ ಇಲಾಖೆಯ ನಿರ್ದೇಶನದಂತೆ ಮುಂದಿನ ಕ್ರಮವಹಿಸಬೇಕೆಂದು ತಿಳಿಸಿದರು. ಆಡಳಿತ ಮಂಡಳಿಯು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಸಲಹೆಯನ್ನು ಅಂಗೀಕರಿಸಿತು. ಅದರಂತೆ, ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಯಿತು.**

**ಕಾರ್ಯನಿರ್ವಾಹಕ ನಿರ್ದೇಶಕರು** **ಅಧ್ಯಕ್ಷರು**

**ವಿಷಯ ಸಂಖ್ಯೆ: 51**

**ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆಯಿಂದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ನಿರ್ಮಾಣ ಮಾಡಲು ವಹಿಸಲಾಗಿರುವ ವಿದ್ಯಾರ್ಥಿನಿಲಯಗಳು, ಭವನಗಳು, ಆಶ್ರಮ ಶಾಲೆಗಳು ಮತ್ತು ವಸತಿ ಸಹಿತ ಪ್ರಥಮ ದರ್ಜೆ ಕಾಲೇಜುಗಳ ನಿರ್ಮಾಣ ಕಾಮಗಾರಿಗಳ ವಿವರಗಳು.**

ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆಯಿಂದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ನಿರ್ಮಾಣ ಮಾಡಲು ವಹಿಸಲಾಗಿರುವ ವಿದ್ಯಾರ್ಥಿನಿಲಯಗಳು, ಭವನಗಳು, ಆಶ್ರಮ ಶಾಲೆಗಳು ಮತ್ತು ವಸತಿಯುಕ್ತ ಪ್ರಥಮ ದರ್ಜೆ ಕಾಲೇಜುಗಳ ನಿರ್ಮಾಣ ಕಾಮಗಾರಿಗಳ ವಿವರಗಳನ್ನು ಆಡಳಿತ ಮಂಡಳಿಯ ಸಭೆಯ ಅವಗಾಹನೆಗಾಗಿ ಮಂಡಿಸಲಾಗಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆಯಿಂದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ನಿರ್ಮಾಣ ಮಾಡಲು ವಹಿಸಲಾಗಿರುವ ವಿದ್ಯಾರ್ಥಿನಿಲಯಗಳು, ಭವನಗಳು, ಆಶ್ರಮ ಶಾಲೆಗಳು ಮತ್ತು ವಸತಿ ಸಹಿತ ಪ್ರಥಮ ದರ್ಜೆ ಕಾಲೇಜುಗಳ ನಿರ್ಮಾಣ ಕಾಮಗಾರಿಗಳ ವಿವರಗಳನ್ನು ಅವಗಾಹಿಸಿತು.**

ವಿಷಯ ಸಂಖ್ಯೆ: 52

ಮೊರಾರ್ಜಿ ದೇಸಾಯಿ /ಕಿತ್ತೂರು ರಾಣಿ ಚೆನ್ನಮ್ಮ /ಅಟಲ್ ಬಿಹಾರಿ ವಾಜಪೇಯಿ/ಏಕಲವ್ಯ ವಸತಿ ಶಾಲೆಗಳ ಮತ್ತು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ವಿದ್ಯಾರ್ಥಿನಿಲಯಗಳ ಕಾಮಗಾರಿಗಳ ನಿರ್ಮಾಣದ ಪ್ರಗತಿಯ ವರದಿ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಕೈಗೊಂಡಿರುವ ಮೊರಾರ್ಜಿ ದೇಸಾಯಿ /ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಮತ್ತು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ವಿದ್ಯಾರ್ಥಿನಿಲಯಗಳ ಕಾಮಗಾರಿಗಳ ನಿರ್ಮಾಣದ ಪ್ರಗತಿಯ ವರದಿಯನ್ನು ಆಡಳಿತ ಮಂಡಳಿಯ ಸಭೆಯ ಅವಗಾಹನೆಗಾಗಿ ಮಂಡಿಸಲಾಗಿದೆ.

**ತೀರ್ಮಾನ:**

1. **ಮೊರಾರ್ಜಿ ದೇಸಾಯಿ /ಕಿತ್ತೂರು ರಾಣಿ ಚೆನ್ನಮ್ಮ /ಅಟಲ್ ಬಿಹಾರಿ ವಾಜಪೇಯಿ/ಏಕಲವ್ಯ ವಸತಿ ಶಾಲೆಗಳ ಮತ್ತು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ವಿದ್ಯಾರ್ಥಿನಿಲಯಗಳ ಕಾಮಗಾರಿಗಳ ನಿರ್ಮಾಣದ ಪ್ರಗತಿಯ ವರದಿಯನ್ನು ಆಡಳಿತ ಮಂಡಳಿಯು ಅವಗಾಹಿಸಿತು.**

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

2. ಸಂಘದ ಅಧೀಕ್ಷಕ ಅಭಿಯಂತರರು 197 ವಸತಿ ಶಾಲೆಗಳ ನಿರ್ಮಾಣಕ್ಕೆ ನಿವೇಶನ ಅಗತ್ಯವಿದ್ದು, ಈಗಾಗಲೇ ಕ್ರಮವಹಿಸಲಾಗಿದ್ದರೂ ಸಹ ಸರ್ಕಾರಿ/ಖಾಸಗಿ ಜಮೀನು ಲಭ್ಯವಾಗುತ್ತಿಲ್ಲವೆಂದು ಸಭೆಗೆ ತಿಳಿಸಿದರು.
3. ನೋಡಲ್ ಏಜೆನ್ಸಿ ಸಲಹೆಗಾರರು, ಪಜಾತಿ/ಪ.ವರ್ಗ ಉಪಯೋಜನೆ, ಸಮಾಜ ಕಲ್ಯಾಣ ಇಲಾಖೆರವರು ಮಾತಾನಾಡಿ, ನಿವೇಶನ ಲಭ್ಯವಿಲ್ಲದೇ ಇರುವ ವಸತಿ ಶಾಲೆಗಳಿಗೆ ಪಕ್ಕದ ಹೋಬಳಿಯಲ್ಲಿ ಸ್ವಂತ ಕಟ್ಟಡಗಳಿರುವ ವಸತಿ ಶಾಲೆಗಳ ಆವರಣದಲ್ಲಿ ಶಾಲಾ ಸಂಕೀರ್ಣ ನಿರ್ಮಾಣ ಮಾಡಿ ಮಂಜೂರಾದ ಹೋಬಳಿಯ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸುವಂತೆ, ಸೂಚಿಸಿದರು. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆರವರು ಮಾತಾನಾಡಿ, ಪ.ಜಾತಿ ವಸತಿ ಶಾಲೆಗಳ ಆವರಣದಲ್ಲಿ ಜಮೀನು ಲಭ್ಯವಿದ್ದಲ್ಲಿ ಹಿಂದುಳಿದ ವರ್ಗಗಳ ವಸತಿ ಶಾಲೆಗಳನ್ನು ಹಾಗೂ ಹಿಂದುಳಿದ ವರ್ಗಗಳ ವಸತಿ ಶಾಲೆಗಳ ಆವರಣದಲ್ಲಿ ಸ್ಥಳಾವಕಾಶವಿದ್ದಲ್ಲಿ ಪ.ಜಾತಿ ವಸತಿ ಶಾಲೆಗಳನ್ನು ನಿರ್ಮಾಣ ಮಾಡುವಂತೆ ಸಲಹೆ ನೀಡಿದರು.
4. ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಮಾತಾನಾಡಿ, ಸರ್ಕಾರಿ ಜಮೀನು ಲಭ್ಯವಿಲ್ಲದೆ ಇರುವ ವಸತಿ ಶಾಲೆಗಳಿಗೆ ಖಾಸಗಿ ಜಮೀನು ಖರೀದಿಸಲು ಪತ್ರಿಕಾ ಪ್ರಕಟಣೆ ಹೊರಡಿಸಿ ಖರೀದಿಸಲು ಕ್ರಮವಹಿಸುವಂತೆ ಹಾಗೂ ಖಾಸಗಿ ಜಮೀನು ಸಹ ಖರೀದಿಗೆ ಲಭ್ಯವಿಲ್ಲದಿದ್ದಲ್ಲಿ ಅಂತಹ ವಸತಿ ಶಾಲೆಗಳಿಗೆ 2018-19ನೇ ಸಾಲಿನಿಂದ ದಾಖಲಾತಿ ಸ್ಥಗಿತಗೊಳಿಸುವ ಬಗ್ಗೆ ಪರಿಶೀಲಿಸುವಂತೆ ಸೂಚಿಸಿದರು.

## ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು

ಹೆಚ್ಚುವರಿ ವಿಷಯ ಸಂಖ್ಯೆ : 1
ವಸತಿ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ಸ್ಟಾಫ್ ನರ್ಸ್‌ಗಳಿಗೆ ಹಾಲಿ ನೀಡುತ್ತಿರುವ ವೇತನವನ್ನು ಪರಿಷ್ಕರಿಸಿ ಹೆಚ್ಚಿಸುವ ಬಗ್ಗೆ.

ರಾಜ್ಯಾದಾಂತ್ಯಂತ ವಸತಿ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ಸ್ಟಾಫ್ ನರ್ಸ್ ರವರಿಗೆ ನೀಡುತ್ತಿರುವ ವೇತನದಲ್ಲಿ ವ್ಯತ್ಯಾಸವಿರುವುದಾಗಿ ಮನವಿ ಸಲ್ಲಿಸಿರುತ್ತಾರೆ. ಹೊರಗುತ್ತಿಗೆಯಿಂದ ನೇಮಕವಾದ ಸ್ಟಾಫ್ ನರ್ಸ್ ರವರು ಬಿ.ಎಸ್.ಸಿ. ಅಥವಾ 3 ಆ ವರ್ಷ ಜಿ.ಎನ್.ಎಮ್ ಟ್ರೈನಿಂಗ್ ಹೊಂದಿರುತ್ತಾರೆ. ಬಹುತೇಕ ಎಲ್ಲಾ ವಸತಿ ಶಾಲೆಗಳು ಪಟ್ಟಣ/ಗ್ರಾಮದಿಂದ

ಕಾರ್ಯನಿರ್ವಾಹಕ ನಿರ್ದೇಶಕರು

ಅಧ್ಯಕ್ಷರು

4 ರಿಂದ 5 ಕಿ.ಮೀ. ದೂರ ಇದ್ದು, ಯಾವುದೇ ಹೇರಳವಾದ ಸಾರಿಗೆ ಸೌಲಭ್ಯ ಇಲ್ಲದೇ ಇರುವ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಆದುದರಿಂದ ಹಾಲಿ ನೀಡುತ್ತಿರುವ ವೇತನವನ್ನು ಪರಿಷ್ಕರಿಸುವುದು ಅವಶ್ಯವಾಗಿರುತ್ತದೆ.

ಪ್ರಸ್ತುತ ಸಂಘವು ಹೊರಸಂಪನ್ಮೂಲ ಏಜೆನ್ಸಿಯ ಮೂಲಕ ಕರ್ತವ್ಯನಿರ್ವಹಿಸುತ್ತಿರುವ ಪ್ರತಿ ಮಾಹೆಯಾನ ರೂ. 8,000/- ಗಳಾದ್ದು (ಮೂಲವೇತನ ಮತ್ತು ತುಟ್ಟಿಭತ್ಯೆ) ಈ ಮೊತ್ತದಲ್ಲಿ ಇ.ಎಸ್.ಐ., ಪಿ.ಎಫ್ ವಂತಿಗೆಯೊಂದಿಗೆ ಏಜೆನ್ಸಿ ಸರ್ವಿಸ್ ಚಾರ್ಜ್‌ಗಳನ್ನು ಕಟಾವಣೆ ಮಾಡಿ ಸರಾಸರಿ ರೂ.6000/- ಗಳಿಂದ 6600/- ಗಳನ್ನು ಪಾವತಿ ಮಾಡಲಾಗುತ್ತಿದೆ.

ಆದರೆ ಕಾರ್ಮಿಕ ಇಲಾಖೆಯ ಅಧಿಸೂಚನೆ ಸಂಖ್ಯೆ : ಕಾಇ/25/ಎಲ್ಎಂಡಬ್ಲ್ಯೂ/2014 ಬೆಂಗಳೂರು ದಿನಾಂಕ:03-08-2015ರ ಪ್ರಕಾರ ಮಾಸಿಕ ರೂ. 10749.60ಗಳನ್ನು ಸ್ಟಾಫ್‌ನರ್ಸ್(ಮ್ಯಾಟ್ರನ್) ನಿಗಧಿಪಡಿಸಲಾಗಿರುತ್ತದೆ. ಈ ಮೊತ್ತಕ್ಕೆ ಇ.ಎಸ್.ಐ. ಪಿ.ಎಫ್ ಹಾಗೂ ಸರ್ವಿಸ್ ಚಾರ್ಜ್ ಸೇರಿ ಸುಮಾರು ರೂ.15,000/- ಗಳಿಂದ 15,500/- ಗಳನ್ನು ಬಿಡುಗಡೆ ಮಾಡಬೇಕಾಗಿರುತ್ತದೆ.

ಈ ಹಿನ್ನಲೆಯಲ್ಲಿ ಮಾನವೀಯತೆಯ ದೃಷ್ಟಿಯಿಂದ ಕಾರ್ಮಿಕ ಇಲಾಖೆಯ ಅಧಿಸೂಚನೆಯಲ್ಲಿ ನಿಗಧಿಪಡಿಸಿದ ಮಾಸಿಕ ವೇತನವನ್ನು ಶಾಲೆಯಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಸ್ಟಾಫ್‌ನರ್ಸ್‌ಗೆ ನಿಗಧಿಪಡಿಸುವ ಕುರಿತು ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ ತೀರ್ಮಾನ ಕೋರಿದೆ.

ತೀರ್ಮಾನ:

1. **ಆಡಳಿತ ಮಂಡಳಿಯು ಪ್ರಸ್ತಾವನೆ ಬಗ್ಗೆ ವಿವರವಾಗಿ ಚರ್ಚಿಸಿ, ವಸತಿ ಶಾಲೆಗಳಲ್ಲಿ ಹೊರಸಂಪನ್ಮೂಲದಿಂದ ಕರ್ತವ್ಯ ನಿರ್ವಹಿಸುತ್ತಿರುವ ಸ್ಟಾಫ್ ನರ್ಸ್‌ಗಳಿಗೆ ಕನಿಷ್ಟ ವೇತನ ಕಾಯ್ದೆಯಡಿ ನಿಗಧಿಯಾದ ವೇತನ ರೂ.10750/-ಗಳನ್ನು ಮಾರ್ಚ್ 2018ರ ಮಾಹೆಯಿಂದ ಪಾವತಿಸಲು ಅನುಮೋದಿಸಲಾಯಿತು.**

ಹೆಚ್ಚುವರಿ ವಿಷಯ ಸಂಖ್ಯೆ:2

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಪರ ನ್ಯಾಯಾವಾದಿಗಳಿಗೆ ಶುಲ್ಕ ಹೆಚ್ಚಿಸುವ ಬಗ್ಗೆ

ಶ್ರೀ.ನಾಗಯ್ಯ, ಬಿ.ಕಾಂ ಎಲ್ ಎಲ್.ಬಿ. ಸಂಘದ ಪರ ನ್ಯಾಯವಾದಿಗಳು ದಿನಾಂಕ:27-02-2018ರಂದು ಕಾರ್ಯನಿರ್ವಾಹಕ ನಿರ್ದೇಶಕರಿಗೆ ಪತ್ರ ಬರೆದು ಸಂಘದಿಂದ ನ್ಯಾಯಾಲಯದ ಪ್ರತಿ ಪ್ರಕರಣಕ್ಕೆ ರೂ.10,000/-ಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿಗಧಿಪಡಿಸಿದ ದರದಲ್ಲಿ ಪಾವತಿಸಲಾಗುತ್ತಿದೆಯೆಂದು ತಿಳಿಸಿ, ಬೆಂಗಳೂರು ಮೆಟ್ರೋ ರೈಲ್ ಕಾರ್ಪೋರೇಷನ್‌ನಲ್ಲಿ ಪ್ರತಿ

ಕಾರ್ಯನಿರ್ವಾಹಕ ನಿರ್ದೇಶಕರು                ಅಧ್ಯಕ್ಷರು

ಪ್ರಕರಣಕ್ಕೆ ರೂ.15,000/-ಗಳು ನಿಗಧಿಯಾಗಿರುವುದಾಗಿ ಪತ್ರದಲ್ಲಿ ತಿಳಿಸಿರುತ್ತಾರೆ. ಪ್ರಸ್ತುತ ಸಂಘವು ನೀಡುವ ಶುಲ್ಕ ರೂ.10,000/-ಗಳು ಅತ್ಯಂತ ಕಡಿಮೆಯಾಗಿದ್ದು, ರೂ.15,000/-ಗಳಿಗೆ ಹೆಚ್ಚಿಸಲು ಕೋರಿರುತ್ತಾರೆ.

ತೀರ್ಮಾನ

**ಆಡಳಿತ ಮಂಡಳಿಯು ವಿಷಯವನ್ನು ಚರ್ಚಿಸಿ, ಸಂಘದ ಪರ ನ್ಯಾಯವಾದಿಗಳಿಗೆ ಪ್ರತಿ ಪ್ರಕರಣಕ್ಕೆ ನಿಗಧಿಪಡಿಸಲಾದ ರೂ 10,000/-ಗಳನ್ನು ರೂ.15,000/-ಗಳಿಗೆ ಹೆಚ್ಚಿಸಲು ಅನುಮೋದಿಸಲಾಯಿತು.**

ಸಭೆಯನ್ನು ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ಇತರೆ ಸದಸ್ಯರುಗಳಿಗೆ ವಂದಿಸುತ್ತಾ, ಮುಕ್ತಾಯಗೊಳಿಸಲಾಯಿತು.

**ಡಾ: ಹೆಚ್ ಆಂಜನೇಯ**
**ಸಮಾಜ ಕಲ್ಯಾಣ ಹಾಗೂ ಹಿಂದುಳಿದ**
**ವರ್ಗಗಳ ಕಲ್ಯಾಣ ಸಚಿವರು ಹಾಗೂ**
**ಸಂಘದ ಅಧ್ಯಕ್ಷರು**